ಕುವೆಂಪು ರಾಮಾಯಣದಲ್ಲಿ ಸ್ತ್ರೀ ದರ್ಶನ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದ ಸಂಶೋಧನ ಪ್ರಬಂಧ)

ಸಂಶೋಧಕರು

ಧರ್ಮಣ್ಣ ಬಿ. ನದಟ್ಟಿ

ಸರಕಾರಿ ಪ್ರೌಢ ಶಾಲೆ, ಅಲಖನೂರ.

ತಾ. ರಾಯಬಾಗ ಜಿ. ಬೆಳಗಾವಿ

ಮಾರ್ಗದರ್ಶಕರು

ಡಾ. ಆರ್. ಜಿ. [illegible]

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮

431

ಕುವೆಂಪು ರಾಮಾಯಣದಲ್ಲಿ ಸ್ತ್ರೀ ದರ್ಶನ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು
ಧರ್ಮಣ್ಣಿ ವಿ. ನಡಟ್ಟಿ
ಸರಕಾರಿ ಪ್ರೌಢ ಶಾಲೆ, ಅಲಖನೂರ.
ತಾ. ರಾಯಬಾಗ ಜಿ. ಬೆಳಗಾವಿ

ಮಾರ್ಗದರ್ಶಕರು
ಡಾ. ಆರ್. ಬಿ. ಚಿಲಮಿ
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮

ಧೃಢೀಕರಣ ಪತ್ರ

ಧರ್ಮಣ್ಣ ವಿ. ನಡಟ್ಟಿ ಇವರು **ಕುವೆಂಪು ರಾಮಾಯಣದಲ್ಲಿ ಸ್ತ್ರೀದರ್ಶನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦–೦೯–೨೦೦೮

ಡಾ. ಆರ್. ಬಿ. ಚಿಲಮಿ
ಮಾರ್ಗದರ್ಶಕರು,
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಪ್ರಮಾಣ ಪತ್ರ

ಕುವೆಂಪು ರಾಮಾಯಣದಲ್ಲಿ ಸ್ತ್ರೀದರ್ಶನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. ಆರ್. ಬಿ. ಚಿಲುಮಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೯-೨೦೦೮

ಧರ್ಮಣ್ಣ ವಿ. ನಡಟ್ಟಿ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

[illegible]

[illegible]

[illegible]

• ಪರಿವಿಡಿ •

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ಮತ್ತು ವ್ಯಾಪ್ತಿ

[illegible]

[illegible]

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪ್ರವೇಶ :

"Ramayan and Mahabharat are the two 'Encyclopedia' of Indian Culture" - Swami Vivekanand.

"ರಾಮಾಯಣ ಮತ್ತು ಮಹಾಭಾರತಗಳು ಭಾರತೀಯ ಸಂಸ್ಕೃತಿಯ ವಿಶ್ವಕೋಶಗಳು" ಎಂದು ಸ್ವಾಮಿ ವಿವೇಕಾನಂದರು ಈ ಎರಡೂ ಮಹಾಕಾವ್ಯಗಳನ್ನು ಕೊಂಡಾಡಿದ್ದಾರೆ. ಮಹಾಭಾರತವು ರಾಮಾಯಣದಷ್ಟು ಪ್ರಸಿದ್ಧಿಯನ್ನು ಪಡೆಯಲಿಲ್ಲ. "ರಾಮಾಯಣ ಭ್ರಾತೃ–ಪ್ರೇಮ ಸಾಫಲ್ಯದ ಸಾಕಾರ ಗೌರಿಶಂಕರವಾದರೆ ಮಹಾಭಾರತ ವೈಫಲ್ಯದ ವೈಶಂಪಾಯನ."[೧] ರಾಮಾಯಣವು ಭಾರತದ ಸಚ್ಚಾರಿತ್ರ್ಯವನ್ನು ಪ್ರತಿಬಿಂಬಿಸುವ ಸದ್ಗ್ರಂಥ. ಆದರೆ ಮಹಾಭಾರತದ ಸಂಸ್ಕೃತಿ ರಾಮಾಯಣಕ್ಕಿಂತ ಭಿನ್ನವಾದುದು. ಅಲ್ಲಿಯ ದಾಯಾದಿಕಲಹ, ಇಡೀ ಕುರುಕುಲವನ್ನೇ ನುಂಗಿಹಾಕಿತು. ಆದರೆ ಇಲ್ಲಿಯ ಸಹೋದರ ಪ್ರೇಮ, ಸೀತೆ–ಊರ್ಮಿಳಾ, ಮಂಡೋದರಿಯರಂಥ ಮಹಾಸತಿಯರ ಪತಿವ್ರತಾ ಧರ್ಮ ರಾಮಾಯಣವನ್ನು ಅಮರ ಕಾವ್ಯವಾಗಿಸಿತು.

ಮಹರ್ಷಿ ವಾಲ್ಮೀಕಿಯು ರಾಮಾಯಣದಲ್ಲಿಯ ಪ್ರತಿಯೊಂದು ಪಾತ್ರವನ್ನೂ ತನಗೆ ಸರಿಕಂಡಂತೆ ಚಿತ್ರಿಸಿ, ಇನ್ನುಳಿದವುಗಳಿಗೆ ಅನ್ಯಾಯ ಮಾಡಿದ್ದಾನೆ. ಕುಮಾರವ್ಯಾಸ –

"ತಿಣಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ ತಿಂ
ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ"

ಎಂದಂತೆ, ಭೂಮಿಗೆ ಭಾರವಾಗುವಷ್ಟು ರಾಮಾಯಣಗಳು ಬಂದಿವೆ. ಉದಾ : ನಾಗಚಂದ್ರನ ರಾಮಚಂದ್ರಚರಿತ ಪುರಾಣ, ಮುದ್ದಣನ ರಾಮಾಶ್ವಮೇಧ ಕುಮಾರವಾಲ್ಮೀಕಿಯ ತೊರವೆರಾಮಾಯಣ, ಕುಮದೇಂದು ರಾಮಾಯಣ ಇಂಥ ಅನೇಕ ರಾಮಾಯಣಗಳು ಬಂದರೂ ಯಾರೊಬ್ಬರೂ ಮೂಲಕವಿಯಲ್ಲಿ ಅನ್ಯಾಯಕ್ಕೊಳಗಾದ ಪಾತ್ರಗಳಿಗೆ ನ್ಯಾಯ ಒದಗಿಸಲಿಲ್ಲ. ಮಹಾಕವಿಯೊಬ್ಬನ ಮಹಾಕಾವ್ಯವನ್ನು ಮುಟ್ಟಿ ಜಾಲಾಡಿ ಮತ್ತೊಂದು ಅದ್ಭುತ ಕಾವ್ಯ ರಚಿಸಿ ಅಪ್ರಧಾನ ಪಾತ್ರಗಳಿಗೂ ಪ್ರಾಧಾನ್ಯತೆಯನ್ನು ನೀಡಿ ಉಚಿತ ನ್ಯಾಯ ಒದಗಿಸುವ ದಿಟ್ಟ ಧೈರ್ಯ ಮಾಡಿದವರು ಮಹಾಕವಿ ಕುವೆಂಪು. ಅವರು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಪ್ರತಿಯೊಂದು ಪಾತ್ರವನ್ನು 'ಪರಕಾಯ ಪ್ರವೇಶ'

[illegible]

[illegible]

[illegible]

[illegible]

[illegible]

ಮಾಡಿ ಮಾತನಾಡಿದ್ದಾರೆ. ಅವರು ಕಂಡ ಕಲ್ಪನೆ, ಕಾಣ್ಕೆಯನ್ನು ನಿಸರ್ಗದ ಬಣ್ಣದಲ್ಲದ್ದಿ ತಮ್ಮ ಕಾವ್ಯ ಕುಂಚದಲ್ಲಿ ಸುಂದರ ಪ್ರತಿಮೆಗಳನ್ನಾಗಿಸಿದ್ದಾರೆ.

ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಸರಳ ರಗಳೆಯಲ್ಲಿ [Blank Verses] ಬರೆದದ್ದು ಕುವೆಂಪು ಅವರ ಕಲ್ಪನಾ ಪ್ರತಿಭೆಗೆ ಸಾಕ್ಷಿ. ಈ ಕಾವ್ಯದಲ್ಲಿ ಬರುವ ಪಾತ್ರಗಳೆಲ್ಲ ಮೂಲ ವಾಲ್ಮೀಕಿ ರಾಮಾಯಣದಲ್ಲಿ ಬಂದ ಪಾತ್ರಗಳೇ ಆಗಿದ್ದರೂ ಕುವೆಂಪು ಅವರ ದರ್ಶನಾ ದೃಷ್ಟಿಗೂ ವಾಲ್ಮೀಕಿಯ ಚರಿತ್ರಾ ದೃಷ್ಟಿಗೂ ತುಂಬಾ ಅಂತರವಿದೆ. ಶ್ರೀ ರಾಮಾಯಣ ದರ್ಶನದಲ್ಲಿ ಬರುವ ಒಂದೊಂದು ಪಾತ್ರಕ್ಕೂ "ಅಲ್ಲಿ ಬೇರುಂಟು, ನೆಲವುಂಟು, ನೆಲೆಯುಂಟು, ಬೆಲೆಯುಂಟು ; ಅಷ್ಟೇ ಅಲ್ಲ ಸೆಲೆ ಉಂಟು, ಮೇಲಾಗಿ ತನ್ನ ಮೂಲ ಪ್ರತಿ [Arche Type] ಅಲ್ಲುಂಟು. ಆದರೆ ಇಲ್ಲಿ ರುವ ಈ ಎಲ್ಲ ಪಾತ್ರಗಳೂ ಈ ಯುಗ ಮನೋಧರ್ಮ ಸ್ವರೂಪದ ಗಾತ್ರವನ್ನೇ ತಾಳಿ ಬಂದಿದೆ. ಯಾರೂ ಈ ಮಾತಿಗೆ ಹೊರತಲ್ಲ. ರಾಮಾಯಣವೇ ಈ ಯುಗಕ್ಕೆ ಬೆಳೆದು ಬಂದಿದೆ. ಈ ಮಹಾಕಾವ್ಯದಲ್ಲಿ ಅಲ್ಲಿನ ಪಾತ್ರಗಳೇ ಉಸಿರಾಡಲು ಮರುಬಾಳನ್ನು ನಡೆಸಲು"[೨].

"ಇಲ್ಲಿಯ ಒಂದೊಂದು ಪಾತ್ರವೂ ಈ ಕಾವ್ಯದ ಸಮಗ್ರ ದರ್ಶನ ವಾರಿಧಿಗೆ ತಮ್ಮ ತಮ್ಮ ಸಾಂಕೇತಿಕ ರಸವಾಹಿನಿಯನ್ನು ಹೊತ್ತು ತರುವ ನದಿಯ ಪಾತ್ರಗಳಿದ್ದಂತೆ"[೩]. 'ಶ್ರೀ ರಾಮಾಯಣ ದರ್ಶನಂ'ದಲ್ಲಿ ಶ್ರೀ ರಾಮನೊಂದಿಗೆ ಇಡೀ ಪಾತ್ರಗಳೆಲ್ಲವೂ ಸಾಮೂಹಿಕವಾಗಿ ವಿಕಾಸವಾದುದನ್ನು ಕಾಣುತ್ತವೆ.

'ಕುವೆಂಪು ರಾಮಾಯಣ'ದಲ್ಲಿ ಒಟ್ಟಾರೆ ಪಾತ್ರಗಳಲ್ಲಿ ನಾನು ಅಧ್ಯಯನಕ್ಕೆ ಎತ್ತಿಕೊಂಡ ವಿಷಯ ಕುವೆಂಪು ರಾಮಾಯಣದಲ್ಲಿ ಸ್ತ್ರೀ ದರ್ಶನ. ಈ ಕಾವ್ಯದಲ್ಲಿ ಬರುವ ಒಟ್ಟು ಸ್ತ್ರೀ ಪಾತ್ರಗಳು ಕವಿಯ ಕಲ್ಪನಾ ಕುಂಚದಲ್ಲಿ ಸುಂದರ ಪ್ರತಿಮೆಗಳಾಗಿ ಮೂರ್ತಿವೆತ್ತಿವೆ. ಈ ಕಾವ್ಯದಲ್ಲಿ ಬರುವ ಪ್ರತಿಯೊಬ್ಬ ಸ್ತ್ರೀಯರೆಲ್ಲರೂ ಅಂತಿಮವಾಗಿ ಅತ್ಮೋದ್ಧಾರ ಮಾಡಿಕೊಳ್ಳುತ್ತಾರೆ. ಕಾವ್ಯಗಳಲ್ಲಿ ಲೋಕದ ತಿರಸ್ಕಾರ, ನಿಂದೆ, ದೂಷಣೆಗೆ ಕೋಪಕ್ಕೆ ಪಾತ್ರಳಾಗಿದ್ದ ಮಂಥರೆ, ಪತಿತ ಪಾವನೆಯಾಗಿದ್ದಾಳೆ. ಈ ಮೊದಲು ರಾಮಾಯಣದ ಕಥೆಯಲ್ಲಿ ಮಲಿನೆಯಾಗಿ ಚಿತ್ರಿತವಾಗಿದ್ದ ಮಂಥರೆ ಶ್ರೀ ರಾಮಾಯಣ ದರ್ಶನಂದಲ್ಲಿ–

"ವಿಶ್ವದೇಶಮಂ
ಪರಿಮಳದ ಪುಣ್ಯಪವನಂ ಪಸರಿಪೋಲಂತೆ,
ತುಂಬುದೇನಿರ್ದಪಳೆ, ಪೇಳ್, ಲೋಕ ಲೋಕಂಗಳೊಳ್
ದೇವಿ ಮಂಥರೆಯಂತರಾತ್ಮದ ದಯಾಲಕ್ಷ್ಮಿ ತಾಂ
ತನ್ನ ಕೀರ್ತಿಯ ಸಯ್ಪಿನಮೃತಮಯ ಸೌಂದರ್ಯಮಂ?"[೪]

[illegible]

[illegible]

[illegible]

[illegible]

[illegible]

ಇಷ್ಟು ಶ್ರೇಷ್ಠತೆಯನ್ನು ಪಡೆದಿದ್ದಾಳೆ. ಮಂಥರೆಯಂಥ ಬರಡು ಬಾಳಿಗೆ ಸಾಕ್ಷಾತ್ಕಾರ ಮಾಡಿಸದಿದ್ದರೆ ಕವಿಗೆ ಸಮಾಧಾನವಾಗುತ್ತಿರಲಿಲ್ಲ.

ಈ ಕಾವ್ಯದಲ್ಲಿಯ ಪ್ರತಿಯೊಂದು ಸ್ತ್ರೀ ಪಾತ್ರವೂ ನನ್ನ ಮನಸ್ಸಿಗೆ ಖುಷಿ ಕೊಟ್ಟಿತು. ಜೊತೆಗೆ ಅವರು ಪಟ್ಟಪಾಡು, ಅನುಭವಿಸಿದ ನೋವು, ಕಂಬನಿಯಲ್ಲಿಯೇ ನೊಂದು ಮಿಂದು ಮುಕ್ತರಾದ ತಾವು ಅನ್ಯರನ್ನು ಉದ್ಧರಿಸಿದ ಸಂಗತಿಯನ್ನು ಹೇಳುವಾಗ ಕವಿ ಕಾವ್ಯದ ಸಹೃದಯರನ್ನು ಸಾಕ್ಷಾತ್ಕಾರಗೊಳಿಸಿದ್ದಾರೆ. ದರ್ಶನದ ಕವಿ ನಾನೇರುವ ಎತ್ತರಕ್ಕೆ ನೀನೇರಬಲ್ಲೆಯಾ ? ನಾನಿಳಿಯುವ ಆಳಕ್ಕೆ ನೀನಿಳಿಯಬಲ್ಲೆಯಾ ? ಎಂದು ವಿಮರ್ಶಕನಿಗೆ ಮಹಾಕವಿ ಸವಾಲು ಹಾಕುತ್ತಾರೆ. ಕುವೆಂಪು ಪ್ರತಿಯೊಂದು ಪಾತ್ರದ ಶರೀರದಲ್ಲಿಯೂ ಪ್ರವೇಶಿಸಿ ನಿಂತು ಮಾತನಾಡಿದ್ದಾರೆ. ಆ ಮಹಾಕವಿಯ ಕಲ್ಪನೆ ಪೂರ್ಣ ಅರ್ಥವಾಗದಿದ್ದರೂ ಅವರ ಭಾವಾವೇಶದ ತನ್ಮಯತೆ ಅರ್ಥವಾಗದಿರದು.

ಕುವೆಂಪು ವರ್ಡ್ಸವರ್ತ್‌ನಂತೆ ಪ್ರತಿಯೊಂದು ಪಾತ್ರವನ್ನೂ ನಿಸರ್ಗದಲ್ಲಿಟ್ಟು ಮಾತನಾಡಿಸಿದ್ದಾರೆ. ಪ್ರಕೃತಿ ಮಾತೆಯ ಪುಣ್ಯ ಶಿಶುವಾದ ಸೀತಾದೇವಿ ಶ್ರೀರಾಮನಿಗೆ ಪಟ್ಟಾಭಿಷೇಕ ತಪ್ಪಿ ವನವಾಸ ನಿಯೋಜಿತವಾದಾಗ ಆತ ನೀನು ಅತ್ತೆ ಮಾವಂದಿರ ಸೇವೆ ಮಾಡುತ್ತ ಅರಮನೆಯಲ್ಲಿಯೇ ಉಳಿದುಕೊಳ್ಳಲು ಹೇಳುತ್ತಾನೆ. ಸೀತೆಯ ಸ್ಥಾನದಲ್ಲಿ ಇಂದಿನ ಯಾವ ಹೆಂಗಸಾಗಿದ್ದರೂ ಖಂಡಿತ ಪ್ರತಿಭಟಿಸಿ ತಂದೆಯ ಮಾತಿಗೆ ಒಪ್ಪಿಕೊಳ್ಳದಂತೆ, ಗಂಡನನ್ನು ಒತ್ತಾಯಿಸುತ್ತಿದ್ದಳು. ಒಂದು ವೇಳೆ ನಿನಗೆ ವನವಾಸವಾದರೆ ನನಗೇನು? ಎಂದು ಅರಮನೆಯಲ್ಲಿದ್ದು ಸುಖೀ ಜೀವನ ಮಾಡುತ್ತಿದ್ದಳು. ಸೀತೆಯನ್ನು ನಾಡಿನ ನಾಡಾಡಿ ಸ್ತ್ರೀಯಂತೆ ಕುವೆಂಪು ಚಿತ್ರಿಸಿದ್ದರೆ ಅವರು ಭಾರತೀಯ ಭವ್ಯ ಸತ್ಪರಂಪರೆಗೆ ಅಪಚಾರವೆಸಗಿದಂತಾಗುತ್ತಿತ್ತು.

> **"ನಿನ್ನನಲ್ಲದೆ ನಲ್ಲ ಕೋಸಲ ನೆಲವನ್ನಲ್ಲ**
> **ನಾನೊಲ್ದುದಂದು ಮೇಣಿಂದಿಗುಂ ಮನೆಯೆನಗೆ**
> **ರಮಣನೆರ್ದೆಯಲ್ಲದೆಯ ಮಾವನರಮನೆಯಲ್ತು**
> **ನೀನಿರಲ್ಕೆನ್ನೊಡನೆ ನಾಡಾದರೆಂತಂತೆ**
> **ಕಾಡಾದೊಡಂ ಸುಖಿಯೆ ನಾಂ, ದು:ಖಿ ನಿನಗಾಗಿ**
> **ನಿನ್ನ ನೋವಿಂಗಲಕೆಯ ಹೊರತೆನಗೆ ಬೇರೆ**
> **ಸಂಕಟದ ಸೋಂಕೆಲ್ಲಿ?"[೫]**

ಎಂದು ಹೇಳಿಸಿದ್ದಾರೆ. ಇಲ್ಲಿ ಜನಕಜಾತೆ ತೋರಿದ ಔನ್ನತ್ಯ–ಭಾರತೀಯ ಪರಂಪರೆಗೆ ಹಿಡಿದ ಕನ್ನಡಿಯಾಗಿದೆ.

[illegible]

[illegible]

[illegible]

[illegible]

[illegible]

ವಾಲ್ಮೀಕಿ ಮಹರ್ಷಿ ಹೇಳದೆ ಬಿಟ್ಟ ಉರ್ಮಿಳಾದೇವಿಯನ್ನು ದರ್ಶನದ ಕವಿ ಮಹೋನ್ನತಿಗೇರಿಸಿದ್ದಾನೆ. ನಿಜಕ್ಕೂ ಶ್ರೀ ರಾಮಾಯಣ ದರ್ಶನಂ ಕಾವ್ಯದ 'ನಾಯಕಿ' ಈ ಊರ್ಮಿಳಾ. ಇದೂ ವರೆಗಿನ ಯಾವ ರಾಮಾಯಣವು ಊರ್ಮಿಳೆಯ ಮೇಲೆ ಚೆಲ್ಲದ ಬೆಳಕನ್ನು ಕುವೆಂಪು ಅವಳ ದಿವ್ಯ ಪಾತ್ರದ ಮೇಲೆ ಮಿಂಚಿನ ಸಿಂಚನ ಮಾಡಿಸಿದ್ದಾರೆ. ಇಡೀ ಕಾವ್ಯದಲ್ಲಿ ಊರ್ಮಿಳಾ ಆಡಿದ್ದು ಮೂರೆ ಮಾತು! ಆದರೆ ಆ ಮೂರೆ ಮಾತಿನಲ್ಲಿ ಮೂರು ಲೋಕಕ್ಕೂ ಭಾರವಾಗುವ ತಾಕತ್ತಿದೆ!

ಅವಳು ತನ್ನ ಗೆಳತಿ ಮಾಂಡವಿಗೆ ಆಡುವ ಕೊನೆಯ ಮಾತು ಆಕೆ ಎಷ್ಟು ಮಾಗಿದ ಫಲ ಎಂಬುದು ಸ್ಪಷ್ಟವಾಗುತ್ತದೆ.

" ಚಿ! ಕಡಲ್ಗಿದರ್
ಪನಿಗೇಂ ಪ್ರದರ್ಶನಂ? ದೇವರ ತಪಕ್ಕಿದಿರ್
ನಮ್ಮದೊರ್ ತೃಣಮಲ್ತೆ! ಸಂತೋಷ ಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ
ಮೇಣ್ ತಪಕೆ ಕೇಳ ತಂಗೆ ಪರಮ ಪ್ರಯೋಜನಂ"'

ತನ್ನ ಘೋರ ತಪವನ್ನೇ ಇಲ್ಲಗೈದ ಪರಮ ಪಾವನ ಮಹಾಸತಿ ಊರ್ಮಿಳೆ! ಇಡೀ ರಾಮಾಯಣ ಪರಂಪರೆಯಲ್ಲಿ 'ಊರ್ಮಿಳೆ' ಎಲ್ಲಿಯೂ ಸ್ವತಂತ್ರ ಪಾತ್ರವಾಗಿ ಚಿತ್ರಿತವಾಗಿಲ್ಲ. ಇದು ಕುವೆಂಪು ಒಬ್ಬರೇ ಸಾಧಿಸಿದ ಏಕಸ್ವಾಮಿತ್ವ!

'ಶೂರ್ಪನಖಿ' ವಾಲ್ಮೀಕಿ ರಾಮಾಯಣ-ದಲ್ಲಿ ರಾಮನ ಮೇಲೆ ಸೇಡು ತೀರಿಸಿಕೊಳ್ಳುವ ದಿಟ್ಟೆಯಾದರೆ ಕುವೆಂಪು ರಾಮಾಯಣದಲ್ಲಿ ಮನ;ಪರಿವರ್ತನೆಗಯಾಗಿ ಅಂತಿಮವಾಗಿ ಸೀತೆಯನ್ನು ರಾಮನಿಗೊಪ್ಪಿಸುವಂತೆ ರಾವಣನಿಗೆ ಬುದ್ಧಿವಾದ ಹೇಳುವ 'ಚಂದ್ರನಖಿ'ಯಾಗಿದ್ದಾಳೆ. ತನ್ನ ಕಾರಣವಾಗಿ ಇಡೀ ಲಂಕಾ ನಗರಿ ದ್ವೇಷದ ದಾವಾನಲದಲ್ಲಿ ದಹಿಸುತ್ತಿರುವುದನ್ನು ಕಂಡು ಮರುಕಪಡುತ್ತಾಳೆ. ಸಾಧ್ವಿಶಿರೋಮಣಿ ಸೀತಾದೇವಿಯ ದು:ಖವೇ ಅಗ್ನಿಜ್ವಾಲೆಯಾಗಿ ಲಂಕೆಯನ್ನು ಸುಡುತ್ತಿದೆ. ಅವಳನ್ನು ಶ್ರೀರಾಮನಿಗೆ ಒಪ್ಪಿಸುವಂತೆ ರಾವಣನಿಗೆ ಮನಃಪೂರ್ವಕ ತಿಳಿಸುತ್ತಾಳೆ. ಅಲ್ಲದೇ ತಾನು ಹೊತ್ತಿಸಿದ ಈ ಬೆಂಕಿಯನ್ನು ನಂದಿಸಲು ತನಗೆ ಅನುಮತಿ ಕೊಡಬೇಕೆಂದು ಪಟ್ಟು ಹಿಡಿಯುತ್ತಾಳೆ. ಅದಕ್ಕೆ ರಾವಣ ನೀನು ಹೊತ್ತಿಸಿದ ಬೆಂಕಿ "ಈಗ ನಿನ್ನ ಕೈಮೀರಿ ಹೋಗಿದೆ. ಒಂದು ವೇಳೆ ನೀನು ಅದನ್ನು ಆರಿಸಲು ಪ್ರಯತ್ನಿಸಿವರೆ ಅದು ನಿನ್ನನ್ನೇ ನುಂಗಿಬಿಡುತ್ತದೆ" ಎನ್ನುತ್ತಾನೆ. ಆಗ ಶೂರ್ಪನಖಿ 'ನನಗದೆ ಪಥ್ಯಂ' ಎನ್ನುತ್ತಾಳೆ.

ಇಲ್ಲಿ ಶೂರ್ಪನಖಿ ತಾನು ಮಾಡಿದ ಪಾಪಕ್ಕೆ ಪಡುವ ಪ್ರಾಯಶ್ಚಿತ ಎಂಥ ಓದುಗನಿಗೂ ಕರುಣೆ ಬರಿಸುವಂತಿದೆ. ವಾಲ್ಮೀಕಿ ರಾಮಾಯಣದಲ್ಲಿ ಅವಳ ಬಗಗೆ ನಮಗೆ ಎಲ್ಲಿಯೂ ಕರುಣೆ ಬಾರದು. ಇದು ಕುವೆಂಪು ಅವರ ನಿರೂಪಣೆಯ ವೈಶಿಷ್ಟ್ಯ.

ರಾವಣಸತಿ ಮಂಡೋದರಿಯ ಪಾತ್ರವನ್ನಂತು ಮಹಾಕವಿ ಪತಿವ್ರತಾ ಧರ್ಮಕ್ಕೆ ಒಪ್ಪವಿಟ್ಟಂತೆ ವರ್ಣಿಸುತ್ತಾನೆ. ಮಂಡೋದರಿ ಪಾಪಿಯನ್ನು ಉದ್ಧಾರಮಾಡಿ ಪುಣ್ಯಕ್ಕೆ ಒಯ್ಯುವ ಮಹಾದೇವಿ! ಕೋ. ಚೆನ್ನಬಸಪ್ಪ ಅವರು ಶ್ರೀರಾಮಾಯಣದರ್ಶನಂ ಮಹಾಕಾವ್ಯ ಸಮೀಕ್ಷೆಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ– "ಕುವೆಂಪು ವಿರಚಿತ 'ಶ್ರೀರಾಮಾಯಣದರ್ಶನಂ'ದಲ್ಲಿ ಮೈವೆತ್ತ ಮಂಡೋದರಿ ಒಬ್ಬ ಅಪೂರ್ವ ಮಹಾಸತಿಯಾಗಿ, ಸೌಂದರ್ಯದಧಿದೇವತೆಯಾಗಿ, ಸುಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಯಾಗಿ ತನ್ನ ಪತಿಯ ಆತ್ಮೋದ್ಧಾರಕಾತರೆಯಾಗಿ, ಸೀತಾದೇವಿಯ ಪಾತಿವ್ರತ್ಯ ರಕ್ಷಣೆಯ ವಜ್ರ ಕವಚವಾಗಿ ಲಂಕೆಯ ಯೋಗಕ್ಷೇಮದ ಮಾತೃಹೃದಯವಾಗಿ ಓರ್ವ ಅನ್ಯಾದೃಶ ಸ್ತ್ರೀಶಕ್ತಿಯಾಗಿ ಬೆಳಗುತ್ತಾಳೆ! ಎನ್ನುತ್ತಾರೆ.

ಕುವೆಂಪು ರಾಮಾಯಣದ ಮಂಡೋದರಿಗೆ ಒಂದುಕಡೆ ಸೀತೆಯ ಪಾತಿವ್ರತ್ಯವನ್ನು ಉಳಿಸುವ ಕಾತರ ಇನ್ನೊಂದು ಕಡೆ ಪತಿ ರಾವಣನ ಆತ್ಮೋದ್ಧಾರ ಮಾಡಿಸಬೇಕೆಂಬ ಆಸಕ್ತಿ ಇವೆರಡು ಅವಳ ಸದ್ಗುಣದ ಭವ್ಯಶಿಖರಗಳು! ರಣರಂಗದಲ್ಲಿ ದುಷ್ಟನಿಗ್ರಹ ಮಾಡುವುದು ಸುಲಭದ ಕೆಲಸ. ಆದರೆ ದುಷ್ಟರ ಮನಃಪರಿವರ್ತನೆ ಮಾಡುವುದು ತುಂಬಾ ಕಠಿಣ ಕೆಲಸ. ಅಂಥ ಕಠಿಣ ಕೆಲಸಕ್ಕೆ ಕೈಹಾಕಿ ಯಶಸ್ವಿಯಾದ ಮಹಾಸತಿಯಾಗಿದ್ದಾಳೆ ಮಂಡೋದರಿ! ಇದರ ಜೊತೆಗೆ ತ್ರಿಜಟಾ ಅನಲಾ ಇವರೆಲ್ಲರ ಪಾತ್ರವೂ ಈ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ಮೂಡಿಬಂದಿದೆ.

ಈ ಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸುವದರೊಂದಿಗೆ ಅಧ್ಯಯನದ ಅಗತ್ಯವನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮಹರ್ಷಿ ವಾಲ್ಮೀಕಿ ಸೃಷ್ಟಿಸಿದ ಸ್ತ್ರೀ ಪಾತ್ರಗಳನ್ನು ಚಿತ್ರಿಸಲಾಗಿದೆ. ಒಂದೊಂದು ಪಾತ್ರವು ಬೇರೆ ರಾಮಾಯಣಗಳಿಗಿಂತ ಮಹರ್ಷಿಯಿಂದ ಹೇಗೆ ರೂಪಗೊಂಡಿದೆ ಎಂಬುದನ್ನು ಸಮಗ್ರವಾಗಿ ಚಿತ್ರಿಸಲಾಗಿದೆ. ಒಟ್ಟು ರಾಮಾಯಣವನ್ನು ಅಧ್ಯಯನ ಮಾಡಿದಾಗ ಅಲ್ಲಿಯ ಸೂಕ್ಷ್ಮತೆಗಳನ್ನು ಗುರುತಿಸಿ ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

ಈ ಪ್ರಬಂಧದ ಕೇಂದ್ರಬಿಂದು ಮೂರನೇ ಅಧ್ಯಾಯ. ಇಲ್ಲಿ ಮಹರ್ಷಿ ವಾಲ್ಮೀಕಿ ಹೇಳದೇ ಇದ್ದುದನ್ನು ಕುವೆಂಪು ರಾಮಾಯಣದ ಪ್ರಮುಖ ಸ್ತ್ರೀ ಪಾತ್ರಗಳಾದ ಮಹಾಸತಿ ಸೀತಾದೇವಿ, ರಾಮನಲ್ಲಿಯ ರಾಮತ್ವವನ್ನು ಪ್ರಕಾಶಿಸಿದ ಕೈಕೇಯಿ, ಮಂಥರಾದೇವಿ ಹಾಗೂ ತನ್ನತನವನಿಲ್ಲಗೈದ

ಊರ್ಮಿಳಾದೇವಿ, ಮಹಾಸತಿ ಮಂಡೋದರಿ ರಾಮನ ಶೋಕದ ರುಜೆಯನ್ನು ಯೋಗ ಶಕ್ತಿಯಿಂದ ಹೀರಿಕೊಂಡು ರಾಮಪಾದದಲ್ಲಿ ಪ್ರಾಣಾರ್ಪಣೆಗೈದ ಶಬರಿಯ ಪಾತ್ರವನ್ನು ವರ್ಣಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪೋಷಕ ಪಾತ್ರಗಳಾದ ತ್ರಿಜಟಾ ಈಕೆ ಅಶೋಕ ವನದಲ್ಲಿ ಸೀತೆಯ ಆಪ್ತಗೆಳತಿ ಮಮತೆಯ ಮಾತೆಯಾಗಿ ಆಕೆಯನ್ನು ಪೋಷಿಸಿದ ಪರಿಯನ್ನು ಹಾಗೂ ವಿಭೀಷಣನ ಮುದ್ದು ಮಗಳು ಅನಲಾ ವಯಸ್ಸಿನಲ್ಲಿ ಕಿರಿಯಳಾದರೂ ಪಾದರಸದಂಥ ತನ್ನ ಬುದ್ಧಿಯಿಂದ ಎಲ್ಲರ ಮನವನ್ನು ಗೆದ್ದವಳು. ಅವಳ ಪಾತ್ರ ಕಿರಿದು; ಪರಿಣಾಮದಲ್ಲಿ ಅತ್ಯಂತ ಹಿರಿದು, ಈ ಪಾತ್ರಗಳನ್ನಿಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮಹಿಳಾ ವಿಮೋಚನೆ ಮತ್ತು ಕುವೆಂಪು ದರ್ಶನ ಇಲ್ಲಿ ಮಹಿಳಾ ವಿಮೋಚನೆಯ ಹಿನ್ನೆಲೆ ವೇದಗಳ ಕಾಲದಿಂದ 'ರಾಮಾಯಣದರ್ಶನಂ' ದವರೆಗೆ ನಡೆದುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಈ ಪ್ರಬಂಧದಲ್ಲಿಯ ಪ್ರತಿಯೊಂದು ಮಹಿಳಾ ಪಾತ್ರ ತಾನಷ್ಟೇ ವಿಮೋಚನೆ ಹೊಂದದೇ ಇಡೀ ಕಾವ್ಯದ ಪ್ರತಿಯೊಂದು ಹೆಣ್ಣು ಗಂಡು ಪಾತ್ರವನ್ನು ವಿಮೋಚನೆಗೊಳಿಸಿವೆ ಎಂಬಷ್ಟರ ಮಟ್ಟಿಗಿನ ಕುವೆಂಪು ಅವರ ಅಭಿವ್ಯಕ್ತಿಯನ್ನು ತಿಳಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದ ಸಾರವನ್ನು ತಿಳಿಸಲಾಗಿದೆ. ಈ ಪ್ರಬಂಧ ತನ್ನ ಚೌಕಟ್ಟಿನ ವ್ಯಾಪ್ತಿ ಹಾಗೂ ಮಿತಿಯನ್ನು ಪಡೆದುಕೊಂಡಿದೆ.

ಟಿಪ್ಪಣಿಗಳು

೧) ಡಾ. ವ್ಹಿ.ಎಸ್. ಮಾಳಿ : ಕನ್ನಡ ಸಾಹಿತ್ಯದಲ್ಲಿ ಕರ್ಣ : ಪುಟ–೧೪–೧೫.

೨) ಡಾ. ಹೆಚ್. ಜೆ. ಲಕ್ಕಪ್ಪಗೌಡ : ಶ್ರೀ ರಾ. ದ. ಪಾತ್ರಲೋಕ : ಪುಟ–೪

೩) ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಶ್ರೀ ರ. ದ. ಮಹಾಕಾವ್ಯ : ಪುಟ–೬೪

೪) ಕುವೆಂಪು : ಶ್ರೀ ರಾ. ದ. ಮಹಾಸಂಪುಟ : ಪುಟ–೧೨೪

೫) ಕುವೆಂಪು : ಶ್ರೀ ರಾ. ದರ್ಶನಂ : ಪುಟ–೮೭

೬) ಕುವೆಂಪು : ಶ್ರೀ ರಾ. ದ. ತಪಸ್ಸಿದ್ಧಿ : ಪುಟ–೮೫೧

ಅಧ್ಯಾಯ - ೨

ವಾಲ್ಮೀಕಿ ರಾಮಾಯಣದ ಸ್ತ್ರೀ ಪಾತ್ರಗಳು

[illegible]

[illegible]

[illegible]

ಅಧ್ಯಾಯ – ೨

ವಾಲ್ಮೀಕಿ ರಾಮಾಯಣದ ಸ್ತ್ರೀಪಾತ್ರಗಳು

ಮಹಾಕವಿಯ ಮಹಾಕಾವ್ಯ ಮಹಾಸಾಗರದಂತೆ ಮಹೋನ್ನತ ಹಾಗೂ ಲೋಕಪೂಜ್ಯವಾಗಿರುತ್ತದೆ. ಮಹಾಕಾವ್ಯಗಳಲ್ಲಿಯ ಸಾಮಾನ್ಯ ಪಾತ್ರಗಳೂ ಕವಿಯ ಕಾವ್ಯ ಕಮ್ಮಟದಲ್ಲಿ ಸಿದ್ಧಗೊಂಡ ಚಂದನದ ಕರ್ಪೂರದಂತೆ ವಿಶ್ವವ್ಯಾಪಕವಾಗಿರುತ್ತವೆ. ಮೇಲ್ನೋಟಕ್ಕೆ ಲೋಕದ ಸಾಮಾನ್ಯ ಜನರಂತೆನಿಸಿದರೂ ಆ ಪಾತ್ರಗಳು ದೇವಮಾನವ ಸ್ವರೂಪದವುಗಳಾಗಿರುತ್ತವೆ. ರಾಮಾಯಣದ ಆದಿಕವಿ ವಾಲ್ಮೀಕಿ ಸೃಜಿಸಿದ ಪೂರ್ಣ ಪಾತ್ರಗಳಿಂದ ಕಾವ್ಯ ಲೋಕಪೂಜ್ಯಗೊಂಡಿದೆ.

ಈ ಕಾವ್ಯದಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರಗಳು :

೧) **ಕೌಸಲ್ಯೆ**

೨) **ಕೈಕೇಯಿ**

೩) **ಮಂಥರೆ**

೪) **ಸುಮಿತ್ರೆ**

೫) **ಶೂರ್ಪನಖಿ**

೬) **ಸೀತಾದೇವಿ**

೭) **ಮಂಡೋದರಿ**

೮) **ಶಬರಿ**

ಕಾವ್ಯದಲ್ಲಿಯ ಒಂದೊಂದು ಪಾತ್ರವೂ ಸ್ತ್ರೀ ಸಹಜವೆನಿಸಿದರೂ ಉತ್ಕೃಷ್ಟತೆಯಿಂದ ಸಮಾಜದ ಇಂದಿನ ಮಹಿಳಾ ಮಹಾಮನಿಗಳ ಗುಣ, ಸ್ವಭಾವ, ನಡತೆಗೆ ಹಿಡಿದ ಸ್ಪಷ್ಟ ನೀಲದರ್ಪಣ. ಈ ಎಲ್ಲ ಪಾತ್ರಗಳ ಪರಿಚಯ ಹೀಗಿದೆ.

೧) **ಕೌಸಲ್ಯೆ :**

ಮಹರ್ಷಿ ವಾಲ್ಮೀಕಿ ವಿರಚಿತ ರಾಮಾಯಣ ಕಾವ್ಯದಲ್ಲಿ ಬದುಕಿನುದ್ದಕ್ಕೂ ಬವಣೆಯನ್ನೇ ಉಂಡು, ದುಃಖದಲ್ಲಿಯೇ ಕೈತೊಳೆದು ಅದನ್ನೇ ಅರಗಿಸಿಕೊಂಡ, ಘನ ಗಾಂಭೀರ್ಯ, ಪೂಜ್ಯನೀಯ ಪಾತ್ರ ಕೌಸಲ್ಯೆಯದು. ಒಂದೆರಡು ಬಾರಿ ಮಾತ್ರ ದುಃಖ ತಡೆಯಲಾರದೇ ಮಾನವ ಸಹಜ ದೌರ್ಬಲ್ಯದಿಂದ ಕಟ್ಟೆಯೊಡೆದು ಬಂದ ತನ್ನ ಹೊಟ್ಟೆಯ ಸಂಕಟಕ್ಕೆ ಧ್ವನಿ ಕೊಟ್ಟಳೇ ಹೊರತು ಚಟದಿಂದಲ್ಲ. ಇಡೀ ಕಾವ್ಯದುದ್ದಕ್ಕೂ ಕಿಂಚಿತ್ ಸುಖವನ್ನು ಕಾಣದೇ ಹೋದರೂ ಶ್ರೀರಾಮನ ಜನನಿ ಸದಾಕಾಲ ಪಾತ್ರ:ಸ್ಮರಣೀಯಳಾಗಿ ಕಾವ್ಯವಾಚಕರ ಮಾನಸದಲ್ಲಿ ಉಳಿಯುತ್ತಾಳೆ.

[illegible]

[illegible]

[illegible]

[illegible]

[illegible]

ಕೋಸಲದೇಶದ ರಾಜಕುಮಾರಿಯಾಗಿದ್ದ ಕೌಸಲ್ಯೆ ದಶರಥನ ಸಮೀಪದ ಬಂಧುವೇ? ಶ್ರೀರಾಮಾಯಣವು ಈಕೆಯ ಜನನ, ತಂದೆ-ತಾಯಿ ವಿವಾಹದ ವಿಚಾರವಾಗಿ ಮೌನವಾಗಿದೆ. ದಶರಥ ಮಹಾರಾಜನ ಧರ್ಮಪತ್ನಿ ಜೇಷ್ಠ ಮತ್ತು ಪಟ್ಟದ ರಾಣಿಯಾದದ್ದೊಂದೇ ಇವಳಿಗೆ ದೊರೆತ ಸ್ಥಾನಭಾಗ್ಯ ಆದರೆ ಆ ಸ್ಥಾನಕ್ಕೆ ತಕ್ಕಂಥ ಭೋಗ ಸುಖಗಳನ್ನು ಪಡೆಯಲಿಲ್ಲ. "ಶ್ರೀರಾಮನನ್ನು ಹೆತ್ತಜನನಿ" ಎಂಬ ಸ್ಥಾನಗೌರವವನ್ನು ಪಡೆದೂ ಭಾಗ್ಯಹೀನೆಯಾದ ಮಾನಿನಿ!

ಮಹಾಭಾರತದ ಕುಂತಿಯನ್ನೇ ಹೋಲುವ ಈಕೆ ಬದುಕಿನುದ್ದಕ್ಕೂ ಕಷ್ಟ ಮತ್ತು ದುಃಖವನ್ನು ಅನುಭವಿಸಿದಳು.

ಕೌಸಲ್ಯೆಯ ವ್ಯಕ್ತಿತ್ವದ ಬಗೆಗೆ ಸೂಕ್ಷ್ಮವಾಗಿ ನಾವು ಅವಲೋಕನ ಮಾಡಿದಾಗ – ಮಗುವನ್ನು ಹೆತ್ತಾಗ ಮತ್ತು ಶ್ರೀರಾಮ ತನ್ನ ಬಾಲಲೀಲೆಗಳಿಂದ ಬೆಳೆಯುತ್ತಿದ್ದಾಗಲೂ ಸಂತೋಷಪಡಲಿಲ್ಲವೇ? ಇವಳನ್ನು ಮಹಾರಾಜ ಏಕೆ ಇಷ್ಟು ಉಪೇಕ್ಷೆ ಮಾಡಿದ್ದ? ದಶರಥ ನಿಜವಾಗಿಯೂ ಇವಳಲ್ಲಿ ಅನುರಕ್ತನಿರಲಿಲ್ಲವೇ? ಕೈಕೇಯಿಗೆ ಪಕ್ಷಪಾತ ಮಾಡಿದನೆಂದರೂ ಪಟ್ಟದರಾಣಿಗೆ, ಕಿರಿಯ ರಾಣಿಯ ಕಡೆಯವರು ಕಿರಿಕಿರಿ ಮಾಡುತ್ತಿದ್ದುದನ್ನು ಸುಮ್ಮನೇ ನೋಡುತ್ತಿದ್ದನೇ ಅಥವಾ ಅವನ ಅರಿವಿಗೆ ಅದು ಬರಲಿಲ್ಲವೇ? ಮಹಾರಾಜನಿಂದ ಹಿಡಿದು ಎಲ್ಲರೂ ಕೈಕೇಯಿಗೆ ಹೆದರುತ್ತಿದ್ದರೇ? ಶ್ರೀರಾಮ ಪ್ರಬುದ್ಧನಾದ ಮೇಲಾದರೂ ಇದನ್ನೇಕೆ ತಪ್ಪಿಸಲಿಲ್ಲ? ಅಥವಾ ಕೈಕೇಯಿಯ ಸ್ವಭಾವ ಅವನಿಗೂ ತಿಳಿಯಲಿಲ್ಲವೇ? ಇವರೆಲ್ಲರ ಉಪೇಕ್ಷೆ ಕೌಸಲ್ಯೆಗೆ ಕ್ರೌರ್ಯವಲ್ಲವೆ?

ಈ ಎಲ್ಲ ಪ್ರಶ್ನೆಗಳಿಗೆ ವಾಲ್ಮೀಕಿಯೇ ಸೂತ್ರರೂಪದಲ್ಲಿ ಉತ್ತರಿಸುತ್ತಾನೆ. "ಶ್ರೀರಾಮ ಹುಟ್ಟುವಾಗಲೇ ಕೌಸಲ್ಯೆ ಬೈರಾಗಿಯಂತೆ ಆಗಿದ್ದಳು. ಇದಕ್ಕೆ ಉದಾ : ರಾಮಾಭಿಷೇಕದ ಶುಭವಾರ್ತೆಯನ್ನು ಕೌಸಲ್ಯೆಯ ದಾದಿಯರು ಅವಳಿಗೆ ತಿಳಿಸುತ್ತಾರೆ. ಆಕೆ ಸಂತೋಷಪಟ್ಟು ಅಂದು ಉತ್ತಮ ರೇಶ್ಮೆ ವಸ್ತ್ರವನ್ನುಟ್ಟು ಜನರಿಗೆ ಎಂದೂ ಇಲ್ಲದಷ್ಟು ಭೂರಿದಕ್ಷಿಣೆ ಹಂಚುತ್ತಾಳೆ. ಅವಳು ಆ ವರೆಗೂ ಹಣ ಪೋಲು ಮಾಡದೆ, ಜಿಪುಣೆ ಎನಿಸಿಕೊಂಡಿದ್ದಳು. ಇದನ್ನು ಮಂಥರೆ ಸ್ವತ: ಕೈಕೇಯಿಯ ಅಂತಃಪುರದ ಮೇಲ್ಛಾವಣಿಯ ಮೇಲೆ ನಿಂತು ನೋಡುತ್ತಾಳೆ. ಅಂದು ಕೌಸಲ್ಯೆಯ ದಾಸಿಯರೂ ಅಂತಃಪುರದ ಮಾಳಿಗೆಯ ಮೇಲೆ ನಿಂತು ಎಂದೂ ಇಲ್ಲದಷ್ಟು ಸಂಭ್ರಮಿಸುತ್ತಿದ್ದರು. ಒಬ್ಬಳು ಹರ್ಷದಿಂದ ಅವಳ ಮುಖ-ಕಂಗಳು ಬಿರಿಯುವಂತೆ ಹಿಗ್ಗಿಬೀಗುತ್ತಿದ್ದಳು. ಇದನ್ನೆಲ್ಲ ನೋಡಿದ ಮಂಥರೆಗೆ ಹೊಟ್ಟೆಯುರಿಯಾಯಿತು. ಸಮಾಚಾರ ಹೇಳುವವರಾರೂ ಹತ್ತಿರದಲ್ಲಿರದೇ ಹೊಟ್ಟೆಯುರಿಯನ್ನು ತಾಳಲಾರದೇ ಆ ಕೌಸಲ್ಯೆಯ ದಾಸಿಯನ್ನೇ ಕೇಳುವ ದುಃಸ್ಥಿತಿ ಮಂಥರೆಗೆ ಒದಗಿತು. ಕೇಳುವ ಮಾತಿನಲ್ಲೇ ಕೌಸಲ್ಯೆಯನ್ನು ಹಾಗೆ ಜಿಪುಣೆಯೆಂದೂ ಅಂದು ಮಾತ್ರ ಒಳ್ಳೆಯ ಉಡುಪು ಧರಿಸಿದವಳೆಂದೂ ಹೇಳುತ್ತಾಳೆ. ಕೌಸಲ್ಯೆ ದುಗುಡವಿಲ್ಲದೇ ಅಂದು ಮಾತ್ರ ಹರ್ಷದಲ್ಲಿದ್ದಳು."[೧]

ಎಂದು ಮಂಥರೆ ಅಸೂಯಾಗ್ರಸ್ತವಾಗಿ ಮಾತನಾಡುತ್ತಾಳೆ.

ಶ್ರೀರಾಮನು ಹುಟ್ಟಿದಾಗ ಕೌಸಲ್ಯೆಗೆ ಹೇಗೆ ಪ್ರೀತಿಯ ಮುದ್ದು ಕಂದನಾಗಿದ್ದನೋ ಅವಳ ಸವತಿಯರಿಗೂ ಅಷ್ಟೇ ಮಮತೆಯ ಖಣಿಯಾಗಿದ್ದ, ಅವನ ವಿವಾಹವಾದ ಮೇಲೆ ಜನಕಜಾತೆ ಸೀತೆ ಆ ಪ್ರೀತಿಯ ಬಹುಪಾಲನ್ನು ಕಸಿದುಕೊಂಡಳು. ಇಂದಿನ ಕುಟುಂಬ ವ್ಯವಸ್ಥೆಯಂತೆ ತಂದೆ, ತಾಯಿ, ಮಕ್ಕಳು, ಸೊಸೆ, ಒಟ್ಟುಗೂಡಿ ಉಣ್ಣುವ ಆತ್ಮೀಯತೆಯಿಂದ ಮಾತನಾಡುವ ವಾತಾವರಣವೇ ಆ ಅರಮನೆಯ ಅಂಗಳದ ವಸತಿಗಳಲ್ಲಿರಲಿಲ್ಲ. ದಶರಥ ಮತ್ತು ಕೈಕೇಯಿಯರ ಭೂರಿಭೋಜನ ಶಯನ ಒಂದು ಕಡೆ, ಸೀತಾ ರಾಮರ ಶಯನ, ಭೋಜನ, ಸ್ನಾನ, ವಿಹಾರಾದಿಗಳು ಬೇರೊಂದು ಕಡೆ ಕೌಸಲ್ಯೆ ಒಂಟಿ ಪಿಶಾಚಿಯಂತೆ ಬಂಧು ಬಾಂಧವರನ್ನು ಬಿಟ್ಟು ಬೇಯಿಸಿಕೊಂಡು ಉಣ್ಣುತ್ತಿದ್ದಳೇನೋ?

ಶ್ರೀರಾಮ ತನಗೆ ಬಂದ ವನವಾಸ ಮತ್ತು ರಾಜ್ಯಾಭಿಷೇಕ ತಪ್ಪಿತೆಂದೂ; ತನಗೆ ಅಪ್ಪಣೆಯಿತ್ತು ಆಶೀರ್ವದಿಸಬೇಕೆಂದು ಕೇಳಲು ಕೌಸಲ್ಯೆಯ ಅಂತಃಪುರಕ್ಕೆ ಬರುತ್ತಾನೆ. ಆ ವೇಳೆಗೆ ಮೊದಲು ಶ್ರೀರಾಮ ಅಲ್ಲಿಗೆ ತನಗೆ ರಾಜ್ಯಾಭಿಷೇಕ ನಿಶ್ಚಯವಾಯಿತೆಂದು ಹೇಳಲು ಬಂದು ಹೋಗಿರುತ್ತಾನೆ. ಈಗ ಮತ್ತೇ ತನಗೆ ರಾಜ್ಯಾಭಿಷೇಕ ತಪ್ಪಿ ಹೋಗಿ ವನವಾಸ ನಿಶ್ಚಯವಾಗಿದೆಯೆಂದು ಹೇಳಲು ಬಂದಿದ್ದಾನೆ. ಆದರೆ ಕೌಸಲ್ಯೆ ಈಗ ಮಡಿಯಿಂದ ಬಿಳೀ ರೇಶ್ಮೆ ಸೀರೆಯುಟ್ಟು ಕುಲದೇವತೆಯಾದ ಶ್ರೀರಂಗನಾಥನ ಮಂದಿರದಲ್ಲಿ ಧ್ಯಾನಸಕ್ತಳಾಗಿ ಕುಳಿತು; ಮಗನಿಗೆ ಈ ಐಶ್ವರ್ಯ ಪ್ರಾಪ್ತವಾಗಲಿ ಎಂದು ಪ್ರಾರ್ಥಿಸುತ್ತಿದ್ದಳು. ಆ ಕ್ಷಣದಲ್ಲಿ ಮಗನನ್ನು ನೋಡಿ ಆಕೆಯಾಡಿದ ಮೊದಲ ಮಾತೇ– "ಮಗು ರಾಮ! ಚಿರಂಜೀವಿಯಾಗು! ನಿನ್ನ ಶತ್ರುಗಳು ಇಂದು ಸತ್ತರಪ್ಪ! ನನ್ನನ್ನು ನನ್ನ ಜ್ಞಾತಿಗಳನ್ನು ಈ ಸುಮಿತ್ರೆಯ ಬಂಧುಗಳನ್ನು ಸಂತೋಷಗೊಳಿಸು ಶ್ರೀಮಂತನಾಗು!"[೨] ಎಂದು. ಈ ಮಾತನ್ನು ನೋಡಿದಾಗ ಅಂದೂ ಅವಳು ನೊಂದುಕೊಂಡೇ ಇದ್ದಳೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಅಭಿಷೇಕಕ್ಕೆ ಭಂಗಬಾರದೇ ನಿರ್ವಿಘ್ನವಾಗಿ ನೆರವೇರಲಿ ಎಂದೇ ಕೌಸಲ್ಯೆ ಪೂಜೆ ಸಲ್ಲಿಸುತ್ತಿದ್ದಳು. ತನ್ನೆದುರೇ ನಿಂತಿದ್ದ ರಘು ರಾಮನಿಗೆ ಕುಳಿತುಕೊಳ್ಳಲು ಬಂಗಾರದ ಆಸನ ತೋರಿಸಿ ಅಂದು ತನ್ನೊಡನೆ ಊಟಕ್ಕೆ ಆಹ್ವಾನಿಸುತ್ತಾಳೆ. 'ಕನಕಪೀಠ'ದಲ್ಲಿ ಕುಳಿತುಕೊಳ್ಳುವ ಹಕ್ಕನ್ನು ಆ ವೇಳೆಗಾಗಲೇ ಕಳೆದುಕೊಂಡಿದ್ದ ಶ್ರೀರಾಮ ಆ ಆಸನವನ್ನು ಮರ್ಯಾದೆಗಾಗಿ ಮುಟ್ಟಿ, ತನ್ನ ಸ್ಥಿತಿಯರಿಯದೇ ಊಟಕ್ಕೆ ನಿರ್ಬಂಧಿಸುವ ಆ ದುಃಖಿ ವೃದ್ಧೆ ತಾಯಿಗೆ ತನ್ನ ವನವಾಸದ ದುರ್ವಾರ್ತೆಯನ್ನು ಹೇಗೆ ತಿಳಿಸಬೇಕೆಂಬುದು ತಿಳಿಯದೇ–

"ದತ್ತಮಾಸನ ಮಾಲಭ್ಯ, ಭೋಜನೇನ ನಿಮಂತ್ರಿತ;" [೩]

ಎಂದು ತಾಯಿಗೆ ಕೈಮುಗಿದು ತಲೆ ಆಡಿಸಿ ತಾಯಿ ನಾನು ದಂಡಕಾರಣ್ಯವಾಸಕ್ಕೆ ಹೊರಡುವ ಕಾಲ ಬಂದಿತು! ಹುಲ್ಲಿನ ಚಾಪೆಯ ಮೇಲೆ ಕೂಡಬೇಕಾದ ನನಗೆ ಈ ರಾಜ್ಯಾಸನದಿಂದೇನೆಂದು ವ್ಯಂಗ್ಯವಾಗಿಯೇ ಉತ್ತರಿಸುತ್ತಾನೆ.

ಕೌಸಲ್ಯೆಗೆ ಇದೆಲ್ಲ ಗೊತ್ತಾಗಿ ಬೇರೆದಾರಿಯೇ ಇಲ್ಲದೇ ಶ್ರೀರಾಮನನ್ನು ಕಾಡಿಗೆ ಕಳುಹಿಸಲು ಒಪ್ಪಿ, ಅವನಿಗೆ ರಕ್ಷೆಯನ್ನು ಕೋರುವ ತಾಯಿಯ ಕೋರಿಕೆ ಇಲ್ಲದೆ, ಅಮೋಘವಾದ ವೇದೋಕ್ತ

ಮಂಗಳಗಳನ್ನು ಹೇಳಿ. ಆಶೀರ್ವದಿಸಿದ ನಂತರ ಅವನ ತೋಳಿಗೆ ರಕ್ಷೆಯನ್ನು ಕಟ್ಟುತ್ತಾಳೆ. ನಂತರ ಮಂತ್ರಗಳಿಂದ ಅಭಿಜಪಿಸಿ ದುಃಖವಿದ್ದರೂ, ಕಣ್ಣೊರೆಸಿಕೊಂಡು, ನಗು ಮುಖವನ್ನು ತೋರಿ, ಬಾಯಿ ಮಾತಿಗೆ ಹೋಗಿ ಬರುವೆಯಾ ಮಗು ರಾಮ! ಶುಭವಾಗಲಿ' ಎನ್ನುತ್ತ ಕಷ್ಟಪಟ್ಟು ಹೇಳಿ ಮಗನನ್ನು ತಬ್ಬಿ, ನೆತ್ತಿ ಮೂಸಿ ನೋಡಿ, ಮತ್ತೆ ನಿನ್ನನ್ನು ಸುಖವಾಗಿ ಕಾಣುವಂತಾಗಲಿ ಎಂದು ಗದ್ಗದಿಸಿ ಹರಸುತ್ತಾ, ಅವನನ್ನು ಒಂದು ಸುತ್ತು ಹಾಕುತ್ತಾಳೆ. ಏಕೆಂದರೆ ಪತಿವ್ರತೆಯೂ, ತಪಸ್ವಿನಿಯೂ ಧರ್ಮ ನಿಷ್ಠೆಯುಳ್ಳವಳೂ ಆದ ತನ್ನ ತಪೋಬಲದ ವಜ್ರಕವಚವನ್ನು ಮಗನಿಗೆ ತೊಡಿಸುತ್ತಾಳೆ.

ಶ್ರೀರಾಮ ವನವಾಸ ಮುಗಿಸಿ ಬಂದಾಗ ಹಣ್ಣು ಹಣ್ಣು ಮದುಕಿಯಾದ ಆಕೆ ರಾಮನನ್ನು ಹೇಗೆ ಹರಸಿದಳೆಂಬುದನ್ನು ಮಹರ್ಷಿ ಬರೆಯಲಿಲ್ಲ. ಆದರೆ ಯಾವ ಸುಖವನ್ನು ಕಾಣದೇ ತನ್ನನ್ನೇ ತ್ಯಾಗಕ್ಕೆ ಮುಡಿಪಿಟ್ಟು ಈ ಜನನಿ ಪ್ರಾತಃಸ್ಮರಣೀಯಳು. ಸೂರ್ಯ ಚಂದ್ರರಿರುವ ತನಕ ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುವಂಥವಳು.

೨) ಕೈಕೇಯಿ :

ವಾಲ್ಮೀಕಿ ರಾಮಾಯಣದಲ್ಲಿ ತುಂಬಾ ಜಟಿಲವಾಗಿರುವ ಪಾತ್ರ ಕೈಕೇಯಿಯದು. ಮಹರ್ಷಿ ಚಿತ್ರಿಸಿದ ಈ ಕಠಿಣ ಹೃದಯದ ಸಮಯ ಸಾಧಕ ಚಂಡೀ ಸ್ವಭಾವದ ಹರವಾದೀ ಮಹಿಳೆ ನಮಗೆಲ್ಲೂ ನಿಜ ಜೀವನದಲ್ಲಿ ಕಂಡುಬಾರಳು ಎನ್ನುವ ಅಭಿಪ್ರಾಯವಿರುವಂತೆ, ವಾಲ್ಮೀಕಿ ಹೃದಯ ಅವನ ದೃಷ್ಟಿಯೇ ಅಮಾನವ, ಅಕೋಮಲ ಎಂಬುದೊಂದು ದೃಷ್ಟಿಯಿದೆ. ಅದಕ್ಕಾಗಿಯೋ ಮೂಲ ಕೈಕೇಯಿಯನ್ನು ತಿದ್ದುವ ಪ್ರಯತ್ನ ಕಾವ್ಯಕಾರ್ಖಾನೆಗಳಲ್ಲಿ, ಕಮ್ಮಟಗಳಲ್ಲಿ ಇನ್ನೂ ನಡೆದೇ ಇದೆ. ಕೈಕೇಯಿಗೆ ವಾಲ್ಮೀಕಿ ಕೃತಿಯಲ್ಲಿ ಅನ್ಯಾಯವಾಗಿದೆಯೆಂದು ತಿಳಿದು ಅವಳನ್ನು ಹೊಸ ಕನಿಕರದ, ಹೊಸ ಮಾನವೀಯ ದೃಷ್ಟಿಯಿಂದ ನೋಡುವ ವಿಮರ್ಶಕ ಪರಂಪರೆ ಬೆಳೆಯುತ್ತಲೇ ಇದೆ.

ವಾಲ್ಮೀಕಿ ಕೈಕೇಯಿಯನ್ನು ಪ್ರತ್ಯಕ್ಷವಾಗಿ ಕಂಡಿದ್ದವರು. ಇದ್ದುದ್ದನ್ನು ಇದ್ದ ಹಾಗೇ ವರ್ಣಿಸಿದವರು. ಅವಳು ನಮ್ಮ ಅನುಕಂಪಕ್ಕೆ ಪಾತ್ರಳಾಗಲಿ, ಬಿಡಲಿ ಅದು ಬೇರೆ ವಿಚಾರ. ಕೈಕೇಯ ನಡತೆ ಸಹಜವೇ, ಕೃತಕವೇ? ಎಂಬುವದಕ್ಕೆ ಮಾತ್ರ ಉತ್ತರಿಸಬೇಕು. ಮಹರ್ಷಿ ತಾನು ಕಂಡವಳನ್ನೆ ಸರಿಯಾಗಿ ಚಿತ್ರಿಸಿದನೋ?, ಇಲ್ಲವೋ? ಎಂಬುವದಕ್ಕೆ ಸಂಬಂಧಿಸಿದ ಪ್ರಶ್ನೆ ಇದಾಗಿದೆ. ನಿಜವಾಗಿ ಅವಳಿಗೆ ಕವಿಯೇ ಅನ್ಯಾಯ ಮಾಡಿದ್ದಾನೋ? ಅಥವಾ ಅವಳೇ ತನಗೆ ತಾನೇ ಅನ್ಯಾಯ ಮಾಡಿಕೊಂಡಿದ್ದಳೋ? ಓದುಗ ವಿಮರ್ಶಕರೇ ಅವಳಿಗೆ ಅನ್ಯಾಯವೆಸಗಿದ್ದಾರೋ ಎಂಬುದು ಗೊಂದಲದ ಪ್ರಶ್ನೆ!

ಒಂದರ್ಥದಲ್ಲಿ ಕೈಕೇಯಿ ಗಟ್ಟಿ ಹೃದಯದ ದಿಟ್ಟ ಹೆಣ್ಣು. ಹುಟ್ಟಿನಿಂದಲೇ ಭರತನನ್ನು ಬಿಟ್ಟು ಅಯೋಧ್ಯೆಯಲ್ಲಿ ಏಕಾಂಗಿಯಾಗಿ ಬಾಳಲು ಸಿದ್ಧವಿದ್ದಳು. ಅವಳ ಸಹೋದರ ಭರತನನ್ನು ಕೇಕೆಯ ರಾಜ್ಯಕ್ಕೆ ಕರೆದೊಯ್ದುಬಿಟ್ಟನು. ಕೈಕೇಯಿಯ ಮಾತೃಹೃದಯ ಇದಕ್ಕೊಪ್ಪಿತೇ? ಇದು ಸಹಜವೇ? ಎಂಬುದಕ್ಕೆ

[illegible]

ವಿಮರ್ಶಕರೇ ಉತ್ತರಿಸಬೇಕು. ರಾಜನಿಗೆ ತಾನು ನೆಚ್ಚಿನ ರಾಣಿಯಾಗಿದ್ದು ಅರಮನೆಯ ಸುಖ, ಭೋಗ, ತನ್ನ ದರ್ಪ, ದರ್ಬಾರುಗಳ ವಿಲಾಸದಲ್ಲಿ ಭರತನ ಅಗಲಿಕೆಯನ್ನು ಮರೆಯಲು ಪ್ರಯತ್ನಿಸಿರಬೇಕು.

ವಾಲ್ಮೀಕಿ ರಾಮಾಯಣದಲ್ಲಿಯ ಕೈಕೇಯಿಗೆ ಶ್ರೀರಾಮನಲ್ಲೂ ಅಪಾರ ಪ್ರೀತಿ ಇತ್ತು. ಅಲ್ಲಿ ಅವಳಿಗೆ ಸವತಿ ಮಾತ್ಸರ್ಯ ವಿರೋಧವಾಗಲಿಲ್ಲವೆಂದು ಚಿತ್ರಿಸಲಾಗಿದೆ. ರಾಮಾಭಿಷೇಕದ ವಾರ್ತೆಯನ್ನು ಮಧ್ಯರಾತ್ರಿಯಲ್ಲಿಯೇ ಮಂಥರೆಯಿಂದ ಕೇಳಿದ ಕೈಕೇಯಿ ಸಂತೋಷಗೊಂಡು ಅವಳಿಗೆ–

"ತೀವ ಪಾ ಸುಸಂಹೃಷ್ಟಾ"

ಎನ್ನುತ್ತಾಳೆ.

ಇಷ್ಟು ಪ್ರೀಯ ಸಮಾಚಾರವನ್ನು ನನಗೆ ಹೇಳಿದೆಯಲ್ಲ! ಎಂಥ ಪರಮಪ್ರೀಯ ವಾರ್ತೆ! ಎಂದಳು. ಜೊತೆಗೆ ನನಗೆ ರಾಮನೇ ಇರಲಿ, ಭರತನೇ ಇರಲಿ ಇಬ್ಬರೂ ಒಂದೇ, ಅವರಲ್ಲಿ ನಾನು ವ್ಯತ್ಯಾಸವನ್ನು ಕಾಣಲಾರೆ ಎನ್ನುತ್ತಾಳೆ. ದಶರಥ ಮಹಾರಾಜ ಶ್ರೀರಾಮನಿಗೆ ಪಟ್ಟಗಟ್ಟುವನಾದರೆ ಅದರಿಂದ ನನಗೆ ಖಂಡಿತ ಸಂತೋಷವೆ! ಎನ್ನುತ್ತಾಳೆ. ಇದೆಲ್ಲ ಗುಣವೇ ಇದ್ದರೂ ಹಾಗೆ ಚಿತ್ರಿಸಿದ ವಾಲ್ಮೀಕಿ ಎಲ್ಲಿ ಅನ್ಯಾಯ ಮಾಡಿದ ?

ಇದಕ್ಕೆ "ತುಳಸಿರಾಮಾಯಣ ಕೈಕೇಯಿಯ ಬಾಯಿಂದಲೇ ವಿಸ್ತಾರವಾಗಿ ಹೇಳಿಸಿದೆ– ಎಲೈ ಪ್ರೀಯವಾದಿನಿ! ಮಂಥರೆ! ನಿನ್ನ ಮಾತು ನಿಜವಾಗಿ ರಾಮಾಭಿಷೇಕವಾಗುವುದಾದರೆ ಅದರಂಥ ಸುದಿನ ಇನ್ನೊಂದಿರಲಾರದು. ಜೇಷ್ಠಪುತ್ರನಿಗೆ ರಾಜ್ಯಾಭಿಷೇಕವೆಂಬುದು ಸೂರ್ಯವಂಶದ ಪದ್ಧತಿ, ಉಳಿದವರು ಅವನ ಅನುಚರರಾಗಿರುವುದು ನ್ಯಾಯ, ಶ್ರೀರಾಮ ಎಲ್ಲ ತಾಯಂದಿರನ್ನು ಚೆನ್ನಾಗಿ ತನ್ನ ತಾಯಿ ಕೌಸಲ್ಯೆಯಂತೆಯೇ ನೋಡಿಕೊಳ್ಳುತ್ತಾನೆ, ಪ್ರೀತಿಸುತ್ತಾನೆ. ದೇವರು ನನಗಿನ್ನೊಂದು ಜನ್ಮಕೊಟ್ಟರೆ ರಾಮನೇ ನನ್ನ ಮಗನಾಗಲಿ, ಸೀತೆಯೇ ಮತ್ತೇ ನನ್ನ ಸೊಸೆಯಾಗಲಿ, ರಾಮ ನನಗೆ ನನ್ನ ಪ್ರಾಣಕ್ಕಿಂತ ಪ್ರೀಯ, ಈ ಅಭಿಷೇಕ ನಿನಗೆ ಆಘಾತ ತಂದಿದೆಯೇ? ಎನ್ನುತ್ತಾಳೆ.

ವಾಲ್ಮೀಕಿ ರಾಮಾಯಣದಲ್ಲಿಲ್ಲದ ದಶರಥನ ವಂಶದಲ್ಲಿ ಹಿರಿಯನಾದವನಿಗೇ ಪಟ್ಟಾಭಿಷೇಕವೆಂಬುದನ್ನು ತುಳಸೀದಾಸರ ರಾಮಾಯಣ ತಿಳಿಸಿದೆ. ವಾಲ್ಮೀಕಿ ರಾಮಾಯಣದ ಕೈಕೆ ರಾಜಕೀಯದಲಿ ಮುಗ್ಧೆ, ಹಾಗೂ ಮನುಷ್ಯ ಸಹಜ ಮಿಶ್ರನದ ಸ್ವಭಾವದವಳು. 'ಒಲಿದರೆ ನಾರಿ, ಮುನಿದರೆ ಮಾರಿ' ಎಂಬ ಗಾದೆಗೆ ಹೇಳಿ ಮಾಡಿಸಿದ ಉದಾಹರಣೆಯಾಗಿದ್ದಾಳೆ. ಅವಳು ಅರಮನೆಯ ಭೋಗ ವಾತಾವರಣದಲ್ಲಿ – ತನ್ನ ಗಂಡ ತಾನು ಹೇಳಿದಂತೆ ನಡೆಯುವ ಚಕ್ರವರ್ತಿ ಎಂಬ ಅಹಂನಿಂದ ಉಳಿದ ರಾಣಿಯರ ಮೇಲೂ, ದೊರೆಯ ಮೇಲೂ, ಮಂತ್ರಿಗಳ ಮೇಲೂ ಅಧಿಕಾರ ಚಲಾಯಿಸುತ್ತ, ಉಡುಗೆ ತೊಡುಗೆಗಳ ಸೊಬಗಿನಲ್ಲಿ ಕಾಲ ಕಳೆಯುತ್ತ ಬಂದಳು. ಇವಳು ಕಡು ಚಲುವೆಯೆಂಬುದೂ, ಆಭರಣ ಪ್ರೀಯ ಎಂಬುದೂ, ದೊರೆ ತನ್ನಲ್ಲಿ ಎಷ್ಟರ ಮಟ್ಟಿಗೆ ಅನುರಕ್ತನಾಗಿದ್ದನೆಂಬುದನ್ನು ಮಂಥರೆಯೊಡನೆ ದಿನಾಲು ಹೇಳಿಕೊಂಡು ಅಭಿಮಾನ ಪಡುತ್ತಿದ್ದಳೆಂದು ರಾಮಾಯಣದಲ್ಲಿ ವ್ಯಕ್ತವಾಗಿದೆ.

ಪ್ರಸ್ತುತ ಸಮಾಜದ ಸ್ತ್ರೀಯರಲ್ಲಿ ಕಾಣುವ ಕೆಲವು ಗುಣಗಳು ಕೈಕೇಯಿಯಲ್ಲಿದ್ದವು. ಅವಳಲ್ಲಿ ಸವತಿ ಮಾತ್ಸರ್ಯ, ಅತೀಯಾಗಿತ್ತು. ಅಲ್ಲದೇ ತಾನು ಹೇಳಿದಂತೆಯೇ ಪ್ರತಿಯೊಂದು ನಡೆಯಬೇಕೆಂಬ ಹಠಮಾರಿತನ ಇತ್ತು. ಕೋಪಬಂದಾಗ ದೊರೆ ಆಳು, ಎಂಬ ವ್ಯತ್ಯಾಸವಿಲ್ಲದೇ ಇತರರಿಗೆ ಒರಟಾಗಿ ಮಾತನಾಡುವುದು ಇವಳ ಸ್ವಭಾವವಾಗಿತ್ತು. ಅವಳಲ್ಲಿದ್ದ ಸವತಿ ಮಾತ್ಸರ್ಯವನ್ನು ರಾಮನ ಗುಣಗಳೇ ಮರೆಸಿದ್ದವೆಂದು ಅವಳೇ ಹೇಳುತ್ತಾಳೆ.

ರಾಮಸ್ಯೈವ ಗುರ್ಣಾದೇವೀ ಕೈಕೇಯಿ ಪ್ರಶಶಂಸಹ ।
ಧರ್ಮಜ್ಞೋ ಗುರುಭಿರ್ದಾಂತ; ಕೃತಜ್ಞ; ಸತ್ಯವಾಕ್ ಶುಚಿ; ॥ "

ರಾಮನು ಧರ್ಮಜ್ಞ, ದಯೆಯುಳ್ಳವನು. ಮಹಾಗುಣಿ ಕೃತಜ್ಞ ಸತ್ಯವಾದಿ ನಿಸ್ಪೃಹ ಎಂದೆಲ್ಲ ಅವಳೇ ಮಂಥರೆಗೆ ವಿವರಿಸುತ್ತಾಳೆ.

ಭರತನು ತನ್ನ ತಾಯಿಯನ್ನು ಒಮ್ಮೆ ಹೀಗೆ ವರ್ಣಿಸುತ್ತಾನೆ. ಅವಳು ಸದಾ ಹಠವನ್ನು ಸಾಧಿಸುವವಳು. ತನ್ನನ್ನು ತಾನೇ ಪ್ರೀತಿಸುವ ಅಹಂಕಾರಿ, ದುರಭಿಮಾನಿ, ಕೋಪಿಷ್ಠೆ, ತಾನೇ ಎಲ್ಲ ಬಲ್ಲವಳೆಂಬ ಭ್ರಮೆ ಉಳ್ಳವಳು ಆದ ನನ್ನ ತಾಯಿ ಆರೋಗ್ಯವೇ? ಅವಳೇನು ಹೇಳಿ ಕಳುಹಿದಳು? ಎಂದು ಕೈಕೇಯಿ ಅಲ್ಲಿ ಮಾಡಿದ ಅನಾಹುತ ತಿಳಿಯುವ ಮೊದಲೇ ಇನ್ನೂ ಲೋಕಾಭಿರಾಮವಾಗಿ ಕುಶಲಪ್ರಶ್ನೆ ಮಾಡುವಾಗ ಭರತ ಹೀಗೆ ಹೇಳಬೇಕಾದರೆ ಇದು ಅವಳ ನೈಜ ಸ್ವಭಾವವೇ ಎಂಬುದರಲ್ಲಿ ಸಂದೇಹವೇ ಇಲ್ಲ.

ಕೈಕೇಯಿಯಲ್ಲಿ ಸೌಂದರ್ಯದ ಮದವಿತ್ತು. ಸೌಭಾಗ್ಯದ ದೆಸೆಯಿಂದ ಅಹಂಕಾರ ತಲೆಗೇರಿತ್ತು. ಈ ಕಾರಣಗಳಿಂದ ಅವಳು ತನ್ನ ಸವತಿಯರನ್ನು ದ್ವೇಷಿಸುತ್ತಿದ್ದಳು. ಕೈಕೇಯಿಯಲ್ಲಿರುವ ದುರ್ಗುಣಗಳು ಅರಮನೆಯಲ್ಲೆಲ್ಲ ವಿಖ್ಯಾತವಾಗಿದ್ದವು. ಆಕೆ ತಲೆ ನೆಟ್ಟಗಿಲ್ಲದಾಗ ಒಂದು ರೀತಿ ನಡೆಯುತ್ತಿದ್ದಳು. ಆದರೆ ಯಾವುದೆ ಒಂದು ವಿಚಾರ, ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ತಲೆಗೆ ಹತ್ತಿತೆಂದರೆ ಅವಳಷ್ಟು ಕಠಿಣ ಹೃದಯಿ ಬೇರಾರೂ ಆಗುತ್ತಿರಲಿಲ್ಲ. ಅಷ್ಟು ಜಟಿಲ ಸ್ವಭಾವದ ಚಂಡಿಯಾಗಿದ್ದಳು. ಮುಂದಾಗಬಹುದಾದ ಪರಿಣಾಮದ ಬಗೆಗೆ ಅವಳೆಂದೂ ಯೋಚಿಸುತ್ತಿರಲಿಲ್ಲ. ಆ ಪರಿಣಾಮ ಗೊತ್ತಿದ್ದರೂ ಅದರ ಕಡೆಗೆ ಕುರುಡಾಗಿ ಬಿಡುತ್ತಿದ್ದಳು. ಅವಳ ಸ್ವಭಾವ ಅಷ್ಟು ಭೀಕರವಾಗಿತ್ತು. ಆರಂಭದಲ್ಲಿ ರಾಮನನ್ನು ತುಂಬಾ ಪ್ರೀತಿಸುತ್ತಿದ್ದಳು. ಆದರೆ ಈಗ ಅಷ್ಟೇ ಅವನ ರಾಜ್ಯಾಭಿಷೇಕವನ್ನು ದ್ವೇಷಿಸಲಾರಂಭಿಸಿದಳು. ಇಂಥ ಸ್ವಭಾವ ಅವಳಿಗೆ ತನ್ನ ತಾಯಿಯಿಂದಲೇ ಬಂದಿರಬೇಕು.

ಒಮ್ಮೆ ದಶರಥನ ಮಂತ್ರಿ ಅವಳ ಗುಣ, ಶೀಲದ ಬಗೆಗೆ ದಶರಥನ ಎದುರೇ ಅವಾಚ್ಯ ಶಬ್ದಗಳಲ್ಲಿ ಬೈಯ್ಯುತ್ತಾನೆ. ಇದರರ್ಥ ಮಂತ್ರಿಯ ವರೆಗೂ ಅವಳ ಶೀಲ ಬಹಿರಂಗವಾಗಿತ್ತು. ಈ ಮಾತಿಗೆ ಆಕೆ ಕೋಪಗೊಳ್ಳಲಿಲ್ಲ, ರೇಗಲಿಲ್ಲ, ಮುಖ ವಿಕಾರ ಸಹ ಮಾಡಿಕೊಳ್ಳಲಿಲ್ಲ, ದಶರಥ

ತಾನೂ ಕಾಡಿಗೆ ಹೋಗುವುದಾಗಿ, ನಗರದಲ್ಲಿ ರಾಮ ಪ್ರೀತಿಯುಳ್ಳವರೆಲ್ಲರೂ, ಕಾಡಿಗೇ ತನ್ನೊಡನೆ ಬರಲೆಂದು ಹೇಳಿದಾಗ ಆಕೆಗೆ ಗಾಬರಿಯಾಗಿ– ಮುಖ ಒಣಗಿ, ಧ್ವನಿ ಕಂಪಿಸಿ – "ನೊರೆ ಹೆಂಡವನೆಲ್ಲ ಕುಡಿದು ಖಾಲಿಯಾದ ಸಾರಹೀನ ಸೋರೇ ಬರುಡೆಯಂತೆ, ರುಚಿಯಿಲ್ಲದ ಜನಶೂನ್ಯವಾದ ಈ ಅಯೋಧ್ಯ ಭರತನಿಗೆ ಬೇಡ"[೬] ಎನ್ನುತ್ತಾಳೆ. ವಾಲ್ಮೀಕಿ ಸ್ವತಃ ಈ ಹೀನೋಪಮೆಯನ್ನು ಬರೆದವರಲ್ಲ. ಕೈಕೇಯಿಂದಾಗಿಯೇ ಇದು ಜಗತ್ಪ್ರಸಿದ್ಧವಾಗಿದೆ.

ಮಂಥರೆಯ ದುರ್ಬೋಧನೆಯೊಂದಿಲ್ಲದಿದ್ದರೆ ಕೈಕೇಯಿಗೆ ರಾಮನಲ್ಲಿ ಯಾವ ಆಕ್ರೋಶವೂ ಇರುತ್ತಿರಲಿಲ್ಲ. ಕೈಕೇಯಿಯನ್ನು ವಾಲ್ಮೀಕಿಯಂತೆ ಚಿತ್ರಿಸಿದವರು ಯಾರೂ ಇಲ್ಲ. ಅಂದು ಮಂಥರೆ ರಾಮಾಭಿಷೇಕ ಸಂಭ್ರಮವನ್ನು ಕೈಕೇಯಿಯ ಛಾವಣಿಯ ಮೇಲೆ ಅವಳು ನೋಡಿದುದು ಆಕಸ್ಮಿಕ ಎಂಬಲ್ಲಿ ದೈವವಶಾತ್ ಎಂಬ ಸೂಚನೆ ಇದ್ದರೂ ಅದು ಪ್ರಬಲವಾದ ಧ್ವನಿ ಹೊಂದಿಲ್ಲ. ಸೂಚಿಸಿಯೂ ಇಲ್ಲದಂತೆ ಕೈಬಿಟ್ಟ ಜಾಣತನ.

ರಾಮನನ್ನು ಕಾಡಿಗಟ್ಟಿ ಗಂಡನಾದ ದಶರಥನ ಮರಣಕ್ಕೆ ಕಾರಣಳಾದ ಕೈಕೇಯಿಗೆ ಅನಂತರ ಪಶ್ಚಾತ್ತಾಪ ಆಗಲಿಲ್ಲವೇ? – ಆಗಿರಬೇಕು ಎಂದು ಸೂಚಿಸುತ್ತಾನೆ. ಮುನಿರತ್ನ ವಾಲ್ಮೀಕಿ, ಭರತ ರಾಜ್ಯವನ್ನೊಲ್ಲದೇ ತನ್ನನ್ನು ಧಿಕ್ಕರಿಸಿದಾಗ ಈ ಪರಿವರ್ತನೆ ಆಗಿ, ರಾಮನನ್ನು ಕರೆತರುವ ಸೈನ್ಯದ ಮುಂಭಾಗದಲ್ಲಿ ಅವಳೂ ನಿಂತಿದ್ದಳೆಂದು ಮಹರ್ಷಿ ವರ್ಣಿಸಿದ್ದಾನೆ. ರಾಮ ಮತ್ತೆ ವನವಾಸದಿಂದ ಮರಳುವಾಗಲೂ ಸಹ ಸ್ವಾಗತಕ್ಕಾಗಿ। ಕೈಕೇಯಿಯ ಮುಚ್ಚಿದ ಚಂದ್ರಶಿಲೆ ಚಂದ್ರನಿಗೆ ಕರಗದಂತೆ, ಬಳ್ಳಿ ಕಿತ್ತೊಗೆದಾಗ ಅದು ಆ ಚಂದ್ರನಿಗೆ ಕರಗಿತು. ಅದರಿಂದಲೇ ಭರತ ಕೈಕೇಯ್ಯಾನಂದವರ್ಧನ ಆಗಿದ್ದು. ಕೈಕೇಯಿ ಜಟಿಲವಾದ ಒಗಟೆಯಾದರೂ, ಜೀವನದ ನೆರಳು ಬಿಸಿಲುಗಳಲ್ಲಿ ಒಣಗಿದ ಕಗ್ಗಂಟಾದ ಜೀವನವನ್ನು ಬಲ್ಲವರು ಬಿಡಿಸಬಹುದು.

೩. ಮಂಥರೆ :

ರಾಮಾಯಣ ಕಥೆಗೆ ತಿರುವನ್ನೇ ನೀಡಿದ ಪ್ರಮುಖ ಪಾತ್ರ ಮಂಥರೆಯದು. ಇವಳ ಪೂರ್ವೋತ್ತರ ಕುರಿತು ಮಹರ್ಷಿ.

"ಜ್ಞಾತಿದಾನೇ ಯತೋ ಜಾತಾ ಕೈಕೇಯ್ಯಾತ್ತು ಸಹೋಷಿತಾ"[೭] ಎಂದು ಹೇಳುತ್ತಾನೆ. ಇವಳು ಕೈಕೇಯಿಯ ದಾಯಾದಿ ವರ್ಗದ ಕಡೆಯವಳು. ಅವಳ ರಕ್ತ ಸಂಬಂಧಿಕಳೇ ಇರಬೇಕು. ಕೈಕೇಯಿಯ ವಿವಾಹ ಕಾಲದಲ್ಲಿ ಅವಳೊಂದಿಗೆ ಅಯೋಧ್ಯೆಗೆ ಬಂದವಳು ಕೈಕೇಯಿಯ ಬಳಿಯಲ್ಲಿದ್ದ ಎಷ್ಟೋ ಜನ ದಾಸಿಯರಲ್ಲಿ ಇವಳೂ ಒಬ್ಬಳು. ಕೈಕೇಯಿಯ ತೌರುಮನೆಯಿಂದ ಅವಳೊಂದಿಗೆ ಬಂದು ಆಕೆಗೆ ದಶರಥನೊಂದಿಗೆ ವಿವಾಹವಾದಾಗಿನಿಂದಲೂ ಅಯೋಧ್ಯೆಯಲ್ಲೇ ಸೇವೆ ಮಾಡಿಕೊಂಡಿದ್ದಳು. ಇದಿಷ್ಟು ಅವಳ ಪೂರ್ವ ವೃತ್ತಾಂತ. ಇದಕ್ಕಿಂತ ಹೆಚ್ಚಿನ್ನೇನೂ ತಿಳಿಯುವುದಿಲ್ಲ.

"ಮಂಥರೆ ಅಬಲೆ, ಮುದುಕಿಯಾಗಿದ್ದಳೆಂದೂ ಚಿತ್ರಕಾರರು ಚಿತ್ರಿಸುವುದು ವಾಡಿಕೆ. ಆದರೆ ವಾಲ್ಮೀಕಿ ಮಂಥರೆ ಅಬಲೆಯಲ್ಲ ಸಬಲೆಯಾಗಿದ್ದಳು ಮತ್ತು ಅವಳ ಬುದ್ಧಿ ರಾಜಕೀಯದಲ್ಲಿ ಎಷ್ಟು ಚುರುಕಾಗಿತ್ತೆಂಬುದನ್ನು ಚಿತ್ರಿಸುತ್ತಾರೆ. ಇವಳು ರಾಮಾಭಿಷೇಕ ವಿಘಾತವನ್ನು ಎಷ್ಟು ಚಾಣಾಕ್ಷತೆಯಿಂದ ಮಾಡಿದಳೆಂಬುದನ್ನು ವಿವರಿಸುತ್ತಾರೆ".

ವಿಷಯವನ್ನು ಪೂರ್ಣವಾಗಿ ತಿಳಿದುಕೊಂಡು ನಡುರಾತ್ರಿಯಲ್ಲಿ ಕೈಕೇಯಿಯನ್ನು ಎಬ್ಬಿಸಿ ಅವಳಿಗೆ ತಿಳಿಸುವ ರೀತಿ.

> **"ಭಯ ನಿನ್ನನ್ನು ಅಟ್ಟಿಬರುತ್ತಿದೆ! ಸುಂದರಿಯೇ! ಸೌಂದರ್ಯದ ಜಂಭಕೊಚ್ಚುವವಳೇ! ನಿನ್ನ ಸೌಂದರ್ಯವೆಲ್ಲ ದಶರಥನ ಮೋಹದ ಹೊಳೆಯಲ್ಲಿ ಕೊಚ್ಚಿ ಹೋಯಿತು!"**[೮]

ಎಂದು ವಿಷಯವನ್ನೇ ಮೊದಲು ಹೇಳದೇ ಅದರ ಪರಿಣಾಮವನ್ನು ಉತ್ಪ್ರೇಕ್ಷೆಯಲ್ಲಿ ಚಿತ್ರಿಸುವ ಇವಳು ಮಾತಿನಲ್ಲಿ ಎಷ್ಟು ಚತುರೆಯಾಗಿದ್ದಳೆಂಬುದು ಗೊತ್ತಾಗುತ್ತದೆ. ಕೈಕೇಯಿ ನಿದ್ರೆಯಿಂದ ಎದ್ದು ವಿಚಾರಿಸಿದಾಗ, ರಾಮಾಭಿಷೇಕ ವಾರ್ತೆಯನ್ನು ತಿಳಿಸುವ ಈ ವಾಕ್ಚಾತುರ್ಯ– ದಶರಥ ನಾಳೆ ರಾಮನಿಗೆ ಪಟ್ಟಗಟ್ಟುವನಂತೆ! ದುಃಖ ಶೋಕ ಭಯಗಳೆಲ್ಲ ನನ್ನನ್ನಾವರಿಸಿವೆ, ಸುಡುತ್ತಿವೆ. ನಿನ್ನ ದುಃಖವೇ ನನ್ನ ದುಃಖ, ನೀನು ಈಗ ರಾಣಿಯಾಗಿಯೂ, ರಾಜಧರ್ಮದ ಉಗ್ರತೆಯನ್ನರಿಯದೆ ಹೋದೆಯಲ್ಲ! ನಿನ್ನ ಗಂಡ ಬಾಯಲ್ಲಿ ಧರ್ಮಹೇಳುತ್ತಾನೇ ಹೊರತು ಹಿಡಿದುದನ್ನು ಉಪಾಯದಿಂದ ಸಾಧಿಸಿಯೇ ತೀರುವ ಛಲಗಾರ. ನಿನಗೆ ಪ್ರೀಯ ಮಾತನಾಡುತ್ತ ಘೋರವಾದ ಸಂಕಟವನ್ನೇ ತಂದೊಡ್ಡಿದ್ದಾನೆ. ನಿನಗೆ ಅವನ ಕಪಟ ಗೊತ್ತಾಗದು. ಈಗ ವಂಚಿತಳಾಗಿ ಬಿಟ್ಟೆ, ಸಂಪತ್ತನ್ನೆಲ್ಲ ದೊರೆ ಕೌಸಲ್ಯೆಗೆ ಬಿಟ್ಟುಕೊಟ್ಟಾ ನಮ್ಮ ದುಷ್ಟನಾದ ನಿನ್ನ ಗಂಡ ಮೊದಲೇ ಭರತನನ್ನು ದೂರದ ನಿನ್ನ ತೌರಿಗೆ ಅಟ್ಟಿ. ಸಕಾಲದಲ್ಲಿ ರಾಮನನ್ನು ಯೌವ್ವ ರಾಜ್ಯಕ್ಕೆ ನಿಯೋಗಿಸಿದನೆಂದರೇನರ್ಥ ನಿನ್ನ ಮಗನಿಗೆ ನೀನೇ ಶತ್ರುವಾಗಿ ಹೋದೆಯಲ್ಲ! ಮಡಿಲಲ್ಲಿನ ಹಾವನ್ನು ಉಪಾಯದಿಂದ ದೂರಕ್ಕೆ ಹೊರಗೆಸೆಯುವಂತೆ, ನಿನ್ನ ಗಂಡ ನಿನ್ನನ್ನು ಎಷ್ಟು ಉಪಾಯದಿಂದ ಪರಿಹರಿಸಿದ ನೋಡಿದೆಯಾ ? ಸುಳ್ಳು ಸಾಂತ್ವನಗಳಿಂದ ನಿನ್ನನ್ನು ಅನುಭವಿಸಿ ಈಗ ರಾಮನನ್ನು ರಾಜ್ಯದಲ್ಲಿ ಸ್ಥಾಪಿಸಿ, ನಿನ್ನನ್ನು ಸಮಸ್ತ ಬಂಧು ಸೇವಕರೊಡನೆ ನಿನ್ನ ಗಂಡ ಕೊಂದ!, ಕಾಲ ಕೈಮೀರಿ ಹೋಗುವ ಮೊದಲು ನಿನ್ನ ಮಗನನ್ನುಳಿಸು ನನ್ನನ್ನು ರಕ್ಷಿಸು, ಸುಮ್ಮನೆ ಆಶ್ಚರ್ಯದಿಂದ ಕಣ್ಣರಳಿಸುತ್ತಿರಬೇಡ ಎಂದು ಎಚ್ಚರಿಸುತ್ತಾಳೆ. ಈ ಮಾತುಗಳು ಯಾವುದೇ ಪರಿಣಾಮ ಬೀರದೇ ಇದ್ದಾಗ ಮತ್ತೆ –

ನಾಳೆಯಿಂದ ನೀನು ಕೌಸಲ್ಯೆಗೆ ದಾಸಿಯಾಗುತ್ತಿ! ಇನ್ನು ಮೇಲೆ ನೀನು ಅವಳಿಗೆ ತಲೆಯ ಮೇಲೆ ಕೈಮುಗಿಯಬೇಕಾಗುತ್ತದೆ. ನಿಜವಾಗಿಯೂ ಕೈಕೇಯಿಗೆ ಭಯವಿದ್ದುದು ಈ ಒಂದು ವಿಷಯದಲ್ಲಿ ಮಾತ್ರ ಭರತನೂ ರಾಮನ ಸೇವಕನಾಗಿರಬೇಕಾಗುತ್ತದೆ ಎನ್ನುತ್ತಾಳೆ. ಇದನ್ನೂ ಉಪೇಕ್ಷೆ ಮಾಡಿದ ಕೈಕೇಯಿಯನ್ನು ಕಂಡು

"ದರ್ಪಾಗ್ನಿ ರಾಕೃತಾ ಪೂರ್ವಂ ತ್ವಯಾ ಸೌಭಾಗ್ಯವತ್ತಯಾ।
ರಾಮಮಾತಾ ಸಪತ್ನೀ ತೇ ಕಥಂ ವೈರಂ ನ ಯಾತಯೇತ್॥"[೯]

ಈ ಕೊನೆಯ ಮಾತು ಕೈಕೇಯಿಯ ಹೃದಯಕ್ಕೆ ನೆಟ್ಟಿತೆಂದು ಕಾಣುತ್ತದೆ. ಇದರ ಪೂರ್ವಾರ್ಧ ಇವಳ ಅನುಭವದಲ್ಲೇ ಇತ್ತು. ಉತ್ತರಾರ್ಧ ನಿಜವಾಗುವುದು ದೂರವಿಲ್ಲವೆಂದು ಮನ ಸಮರ್ಥಿಸುವಂತೆ ಮಂಥರೆ ತನ್ನ ಬೋಧನಾ ಸರಣಿಯನ್ನು ಹೆಣೆದಳು.

ತನ್ನೆದುರಿಗೇ ಲೋಕೋತ್ತರ ನಡತೆಯ ತ್ಯಾಗ ಮೂರ್ತಿಯಾದ ತ್ಯಾಗರಾಜನಾದ, ಪ್ರೇಮಸ್ವರೂಪನಾದ, ಶ್ರೀರಾಮನೇ ಇದ್ದರೂ ಅವನೊಡನೆ ೨೫ ವರ್ಷ ಬದುಕಿಯೂ ಮಂಥರೆಗೆ ಅವನೆಷ್ಟು ಅರ್ಥವಾಗಿದ್ದ ಎಂಬುದು ವಿಚಾರಿಸುವ ಮಾತು, ಸಂಸ್ಕೃತಿ ಸಂಪನ್ನನಾದ ಒಬ್ಬ ಮನುಷ್ಯ ಒಂದು ರಣಹದ್ದಿನೆದುರು ನೂರುವರ್ಷ ಬಾಳಿದರೂ ಅದಕ್ಕೆ ಆತ ಕೇವಲ ಮಾಂಸದ ಮುದ್ದೆ, ಆಹಾರವಾಗಿ ಮಾತ್ರ ಕಾಣುವಂತೆ ಶ್ರೀರಾಮ ಮಂಥರೆಗೆ ಕಾಣಿಸಿರಬೇಕು. ಒಬ್ಬಾತ ಪೆನ್ನುಕೆಳಗೆ ಬಿದ್ದಿತೆಂದು ಎತ್ತಿಕೊಳ್ಳಲು ಬಗ್ಗಿದಾಗ ದೂರದಲ್ಲಿ ಮಲಗಿರುವ ನಾಯಿಯೊಂದು ತನ್ನನ್ನೇ ಹೊಡೆಯಲು ಇವನು ಕಲ್ಲೆತ್ತಿಕೊಳ್ಳಲು ಬಗ್ಗಿದನೆಂದು ಭಾವಿಸುವಂತೆ, ಮಂಥರೆಯೂ ರಾಮಾಭಿಷೇಕವೆಂದೊಡನೆ ಬೇರೇನೂ ಅರ್ಥಕಲ್ಪಿಸದೇ, ಭರತನ ಮರಣ, ಕೈಕೇಯಿಯ ದಾಸ್ಯ, ತನಗೂ ಶಿಕ್ಷೆ, ಇವೇ ಇವಳ ಭಾವನೆಗೆ ಎಟಕಿದುವೆಂದರೆ ನಾಯಿಬುದ್ಧಿಗಿಂತ ಇದು ಬೇರೆಯಲ್ಲ.

ಇಂದಿನ ಸಮಾಜದಲ್ಲಿರುವ ಕುಟಿಲ ಬುದ್ಧಿಯ ಸಮಾಜ ದ್ರೋಹಿಗಳೆಲ್ಲ ಮಂಥರೆಯ ಜೀವಂತ ರೂಪಾಂತರಗಳೇ. ಮಂಥರೆ ಸತ್ತುಹೋದ ಕೇವಲ ಒಬ್ಬ ಇತಿಹಾಸದ ಹೆಣ್ಣಲ್ಲ. ಸಜೀವವಾಗಿ ನಿತ್ಯಸತ್ಯದಲ್ಲಿ ಇನ್ನೂ ಇರುವ ಜೀವನ ದ್ರೋಹಶಕ್ತಿ ದಶರಥನ ಅರಮನೆಯಲ್ಲೇ ಕೈಕೆಯ ರಾಜ್ಯವಿಟ್ಟ ಒಂದು ಸಕಾಲದಲ್ಲಿ ಸಿಡಿಯುವ Time Bomb ! ಇಂದಿನ ಸಮಾಜಘಾತಕ ಶಕ್ತಿಗಳೆಲ್ಲ ಮಂಥರಾ ಪಾತ್ರದ ಅಡಿ ಟಿಪ್ಪಣಿಯಲ್ಲಿ ಸೇರಿ ಮುಳುಗಿ ಹೋಗುವವರೇ। ಶಕುನಿಗೆ ಪಾಂಡವರ ಸೋದರ ಪ್ರೇಮ, ಸತ್ಯ, ನಿಷ್ಠೆ, ತ್ಯಾಗಗಳು, ಎಷ್ಟು ಅಪಥ್ಯವಾಗಿ ಕಂಡುಬಂದವೋ, ಮಂಥರೆಗೆ ರಾಮ ಭರತರ ಪ್ರೇಮ, ಅವನ ಗುಣಗಳು ಹಾಗೇ ಆದವು. ದಶರಥನನ್ನೇ ಕೊಂದಶಕ್ತಿ, ಕೈಕೇಯಿಯನ್ನು ಮುಂಡೆಯಾಗಿಸಿದ ಶಕ್ತಿ. ಕೋಟ್ಯಾವಧಿಯ ನಿರಪರಾಧಿಗಳನ್ನು ನಿರಾಶೆ ಹಾಗೂ ದುಃಖದ ಕಡಲಿನಲ್ಲಿ ಹದಿನಾಲ್ಕುವರ್ಷ ಮುಳುಗಿಸಿದ ಶಕ್ತಿ. ಭರತನಿಗೆ ವಿನಾಕಾರಣ, ಅಪವಾದ, ದುಃಖವನ್ನು ತಲೆಗೆ ಕಟ್ಟಿದ ಶಕ್ತಿ. ಇಂಥ ಮನೆ ಮುರುಕ ಮಂಥರೆಯರು ಪ್ರತಿಯೊಂದು ಮನೆಯಲ್ಲಿಯೂ ಇನ್ನೂ ಇದ್ದಾರೆ.

ಮಂಥರೆ ಕೋಸಲದೇಶದ ಜನರನ್ನು ಮತ್ತು ದಶರಥನ ರಾಜ್ಯದ ಸಂಸ್ಕೃತಿಯನ್ನು ಎಂದೂ ಪ್ರೀತಿಸಲಿಲ್ಲ. ಕೈಕೇಯಿಯನ್ನು ಪ್ರೀತಿಸಬಿಡಲಿಲ್ಲ. ಪರೀಕ್ಷಿತನ ಕೊನೆಗಾಲದ ಅವನ ಕೊರಳಿನ ಸುತ್ತಣ ತಕ್ಷಕನಂತೆ ಕೈಕೇಯಿಯನ್ನು ತನ್ನ ದುರ್ಬೋಧನೆಯಿಂದ ಕೊಂದಳು. ತಾನೂ ಸತ್ತಳು. ಕುಹಕ ಕುಚೋದ್ಯ, ಕುತಂತ್ರಗಳಿಗೆ ಚಿರಸ್ಥಾಯಿಯಾದ ಕೆಟ್ಟ ಸ್ಮಾರಕವಾದಳು.

೪. ಸುಮಿತ್ರೆ :

ರಾಮಾಯಣದಲಿ ಚಿತ್ರವಿಕಾರವಿಲ್ಲದೇ ತನಗೆ ಬಂದ ಮಹಾವಿಪತ್ತುಗಳನ್ನು ಧೈರ್ಯದಿಂದ ನುಂಗಿ, ಜೀರ್ಣಿಸಿಕೊಂಡು ಬಾಳಿದ ಮಹಾಸಾಧ್ವೀಮಣಿ, ತಪಸ್ವಿನೀ, ಸುಮಿತ್ರೆ ಪರಿಪೂರ್ಣತೆಯ ಗುರಿಯತ್ತ ಸಾಗುತ್ತೆ ಮಾನವ ಪಾತ್ರಗಳು ಕಾವ್ಯಗಳಲ್ಲಿ ವರ್ಣಮಯತೆ ಮತ್ತು ಆಕರ್ಷಣೆಗಳನ್ನು ಕಳೆದುಕೊಳ್ಳುವುದು ಕಾವ್ಯ ಪ್ರಪಂಚದ ವೈಪರೀತ್ಯಗಳಲ್ಲೊಂದು! ಒಂದು ಬಿಳಿ ಸೂರ್ಯರಶ್ಮಿಯಲ್ಲಿರುವ ಯಾವುದೇ ಬಿಡಿವರ್ಣವು ನಮ್ಮ ಕಣ್ಮನಗಳನ್ನು ಸೆಳೆಯುವಂತೆ ಇಡೀ ರಶ್ಮಿಯು ಸೆಳೆಯುವುದಿಲ್ಲ. ಆದರೇ ಪೂರ್ಣವು ಪೂರ್ಣವೇ ಅಪೂರ್ಣವು ಅಪೂರ್ಣವೇ! ವಾಲ್ಮೀಕಿ ಮುನಿಯು ಸುಮಿತ್ರೆಯನ್ನು ಶ್ರೀ ರಾಮಾಯಣದುದ್ದಕ್ಕೂ ಚಿತ್ರಿಸಲಿಲ್ಲವೆಂದರೂ ಚಿತ್ರಿಸಿರುವ ಕೆಲವೇ ರೇಖೆಗಳಿಂದ, ಅವುಗಳೊಳಗೆ ಎರಚಿದ ಸಮಯೋಚಿತ ವರ್ಣಗಳಿಂದ ಈ ನಾರೀಮಣಿಯ ಉಜ್ವಲ ಶೀಲಚಾರಿತ್ರ್ಯಗಳು. ಕಥೆಯಲ್ಲಿ ಅವಳ ಪಾತ್ರದ ಮಹತ್ವವನ್ನು ನಮ್ಮ ಮನಃಪಟಲದ ಮೇಲೆ ಅಚ್ಚಳಿಯದಂತೆ ಮೂಡಿಸಿದೆ.

ಸುಮಿತ್ರೆಯ ಪಾತ್ರ ಪರಿಚಯವನ್ನು ರಾಮಾಯಣದ ಇನ್ನೊಂದು ಪಾತ್ರದ ಬಾಯಲ್ಲಿ ವಾಲ್ಮೀಕಿಯೇ ಹೀಗೆ ವರ್ಣಿಸುತ್ತಾನೆ. ಅವಳನ್ನು ಭರದ್ವಾಜಾಶ್ರಯದಲ್ಲಿ ಮುನಿಗೆ ಭರತ ವರ್ಣಿಸಿದ ರೀತಿ–

"ಮುನಿಯೇ! ಇದೋ ಇವಳೇ ಸುಮಿತ್ರಾದೇವಿ:

ಈಗ ದುಃಖದಿಂದ ಕೊರಗಿ ಸೊರಗಿದ್ದಾಳೆ, ನನ್ನ ತಂದೆಗೆ ಮಧ್ಯಮಪತ್ನಿಯಾದ ಈ ನನ್ನ ತಾಯಿ, ಕಣಿಗಲೇ ಗಿಡದ ಟೊಂಗೆಯಂತೆ ಕಾಡಿನಲ್ಲಿ ಹೂ ಬಿಟ್ಟೂ ಆ ಹೂವುಗಳೆಲ್ಲ ಉದುರಿ, ತನ್ನೆಲ್ಲ ಸೊಬಗನ್ನು ಕಳೆದುಕೊಂಡು ಬರಿದೇ ಕಾಂತಿಹೀನವಾಗಿ ಕಾಣುವಂತೆ ನಿಂತಿದ್ದಾಳೆ. ದೇವ ಕುಮಾರರಂಥ ಲಕ್ಷ್ಮಣ, ಶತ್ರುಘ್ನರೆಂಬ ಇಬ್ಬರು ವೀರ ಪುತ್ರರಿಗೆ ಅಸಾಧಾರಣ ಪರಾಕ್ರಮಗಳಿಗೆ ಜನ್ಮವಿತ್ತ ಮಾತೆ ಇವಳು"[೧೦]

ಮೊದಲಿನಿಂದ ಉಪವಾಸ, ನೇಮನಿಷ್ಠೆಗಳಿಂದ ಈಗ ದುಃಖದಿಂದ ತುಂಬ ಕೃಶಳಾಗಿ, ನಿಲ್ಲಲೂ ಸಾಮರ್ಥ್ಯವಿಲ್ಲದ ಕೌಸಲ್ಯೆಯ ಎಡಭುಜಕ್ಕೆ ತಾನು ಆಶ್ರಯಳಾಗಿ ಆಗ ನಿಂತಿದ್ದ ಸುಮಿತ್ರೆಯು ಅರಮನೆಯಲ್ಲಿ ಕೌಸಲ್ಯೆಗೆ ಪ್ರಿಯಕರಳಾಗಿ, ಸಮಾಧಾನ ಹೇಳುವವಳಾಗಿ, ಸದ್ಗುಣ ಪಕ್ಷಪಾತಿಯಾಗಿರುತ್ತ, ಕೈಕೇಯಿಗೆ ಸಮಾನವಾಗಿಯೇ ಪ್ರೀಯಳಾಗಿದ್ದಳೆಂದು ಕಾಣುತ್ತದೆ. ಕೌಸಲ್ಯೆಗೆ ನೋವಾದಾಗಲೆಲ್ಲ ಸುಮಿತ್ರೆ ಅವಳೊಡನೆಯೇ ಇದ್ದು ಧೈರ್ಯ ಹೇಳುತ್ತಿದ್ದಳು. ದೊರೆಯ ನಿರ್ಲಕ್ಷ ಇಬ್ಬರ ಭಾಗದ ದಾರಿದ್ರ್ಯವೂ ಆಗಿತ್ತು. ಕೌಸಲ್ಯೆ ರಾಮಾಭಿಷೇಕದ ಸುವಾರ್ತೆಯನ್ನು ಕೇಳಿದೊಡನೆ – "ಸೌಮಿತ್ರೆಯನ್ನು ಕರೆದು ತಾ" ಎಂದು ಪರಿಚಾರಕಿಯರ ಮೂಲಕ ಕರೆಸಿ, ಅವಳೊಡನೆ ಈ ಸಿಹಿ ವಾರ್ತೆಯನ್ನು ಹಂಚಿಕೊಂಡಳೆಂದರೆ ಆ ಅರಮನೆಯಲ್ಲಿ ಇವಳು ಅವಳಿಗೆಷ್ಟು ಪ್ರೀಯಳೆಂಬುದನ್ನು ಊಹಿಸಬಹುದು. ಹೀಗಾಗಿ ಲಕ್ಷ್ಮಣನಿಗೆ ಸಹಜವಾಗಿಯೇ ಕೌಸಲ್ಯೆಯಲ್ಲಿ ಪೂಜ್ಯತೆಯೂ, ಹಿತೈಷಿತ್ವ ಭಾವವೂ ಹುಟ್ಟಿದವು. ತಾನು ಪಟ್ಟದ ರಾಣಿಯಾಗಲಿಲ್ಲವೆಂಬ ಅಸೂಯೆ ಸುಮಿತ್ರೆಯನ್ನು ಎಂದೂ ಕಾಡಲಿಲ್ಲ. ಕೈಕೇಯಿಯ ಕಾಟದಿಂದ

[illegible]

[illegible]

[illegible]

[illegible]

[illegible]

ಕೌಸಲ್ಯೆಯಂತೆ ಇವಳು ಕೊರಗಿದವಳೂ ಅಲ್ಲ! ಸುಖ ದುಃಖಗಳನ್ನು ಸಮಾನ ಭಾವದಿಂದ ಸ್ವಾಗತಿಸಿ, ಗಟ್ಟಿ ಮನಸ್ಸಿನಿಂದ ತಾನು ಮಾಡಬೇಕಾದ ಕರ್ತವ್ಯದಲ್ಲಿ ಎಂದೂ ವಿಮುಖಳಾಗದೆ ನೊಂದ ತನ್ನ ಬಂಧುಗಳಿಗೆ ತಾನೇ ಸಮಾಧಾನ ಹೇಳುತ್ತಿದ್ದಳು ವಾಲ್ಮೀಕಿ ಈಕೆಯನ್ನು ಎಂಥ ಧೀರ ಪ್ರಜ್ಞಾವಂತೆ ಮಹಿಳೆಯೆಂಬುದನ್ನು ಚಿತ್ರಿಸಿದ್ದಾನೆ.

ಕೌಸಲ್ಯೆಗೆ ಒಮ್ಮೊಮ್ಮೆ ದುಃಖವಾದಾಗ ದಶರಥ ಕೈಕೇಯಿಯರನ್ನು ನಿಂದಿಸುತ್ತಿದ್ದಳು. ಆದರೆ ಸುಮಿತ್ರೆ ಮಾತ್ರ ಎಂದೂ ಯಾರನ್ನೂ ದ್ವೇಷಿಸದ ಶಾಂತಿನಿಧಿ.

ರಾಮನೊಡನೆ ಅರಣ್ಯಯಾತ್ರೆಗೆ ಹೊರಟ ಲಕ್ಷ್ಮಣ ತಾಯಿಗೆ ನಮಸ್ಕರಿಸಿ ಅಪ್ಪಣೆ ಬೇಡುತ್ತಾನೆ. ಹೋಗಿ ಬಾ! ನೀನು ಹುಟ್ಟಿದ್ದೇ ಈ ವನವಾಸ ಕಾಲದಲ್ಲಿ ರಾಮನೊಡನೆ ಅರಣ್ಯಯಾತ್ರೆ ಮಾಡಲು ಎಂದೆನ್ನುವಾಗ ಅವಳು ನಮ್ಮನ್ನು ಚಕಿತಗೊಳಿಸುತ್ತಾಳೆ. ಅವಳೂ ಮಗನ ಅಗಲಿಕೆಯನ್ನು ತಾಳಲಾರದೆ ಅಳುತ್ತಿದ್ದರೂ, ಕೃತಿಯಲ್ಲಿ ದಿಟ್ಟವಾಗಿ ಕರ್ತವ್ಯವನ್ನು ಎದುರಿಸಿದಳು. ಹೋಗಬೇಡ ಎನ್ನಲಿಲ್ಲ. ಸುಮಿತ್ರೆ ಇಬ್ಬರು ಪುತ್ರರನ್ನು ಹಡೆದರೂ ಪುತ್ರ ವ್ಯಾಮೋಹ ಅವಳಿಗೆ ಕಾಡಲಿಲ್ಲ.

ನೀನು ಹುಟ್ಟಿದ್ದೇ ಈ ವನವಾಸಕ್ಕೆಂದು ಎನ್ನುವಲ್ಲಿ ಸುಮಿತ್ರೆಗೆ ಈ ಹಿಂದೆಯೂ, ಈಗ ನಡೆಯುತ್ತಿರುವ ವನವಾಸ ಹಾಗೂ ದುಃಖ ಘಟನೆಗಳ ಕಲ್ಪನೆಯಿತ್ತೇ? ಎಂಬ ಪ್ರಶ್ನೆ ರಾಮಾಯಣದ ಸೂಕ್ಷ್ಮ ಅಭ್ಯಾಸಿಯನ್ನು ಇಲ್ಲಿ ಕಾಡಲಾರಂಭಿಸುತ್ತದೆ. ವ್ಯಾಖ್ಯಾನಕಾರರು ಇತ್ತು ಎಂದು ದೃಢಪಡಿಸುತ್ತಾರೆ. ಸುಮಿತ್ರೆಯ ಮುಂದಿನ ಮಾತುಗಳು ಸರಣಿಯನ್ನು ಬೇರೆ ಪ್ರಸಂಗಗಳಲ್ಲಿ ಅವಳಾಡುವ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಇನ್ನಷ್ಟು ದೃಢವಾಗುತ್ತದೆ. ಕೌಸಲ್ಯೆ ಲೋಕರಕ್ಷಣಾರ್ಥವಾಗಿ ರಾಮನನ್ನು ಹಡೆದಳೆಂಬುದು ಎಷ್ಟು ಸತ್ಯವೋ, ನೀನು ಆ ರಾಮನನ್ನೇ ನಾಡಿನಲ್ಲಿ ಅನುಸರಿಸಲು ಹುಟ್ಟಿದೆ ಎಂಬುದು ಸುಮಿತ್ರೆಯ ವಾಕ್ಯದ ಧ್ವನಿ.

ಹೀಗೆ ಹೇಳುವ ಸುಮಿತ್ರೆಯನ್ನೇ ವಾಲ್ಮೀಕಿ ಹಿತಕಾಮಾ ಎಂದು ಬಣ್ಣಿಸಿದ್ದಾನೆ. ಮಗನಿಗೆ ಅವಳು ಈ ಸೋದರ ಸೇವೆಯೆಂಬುದನ್ನು ಹಿತಬುದ್ಧಿಯಿಂದಲೇ ಹೇಳಿದ್ದಳೇ ಹೊರತು 'ಮಗನನ್ನೇ ಗುಲಾಮನನ್ನಾಗಿಸಲು ಅಲ್ಲ' ಎಂಬ ಈಚಿನವರ ದು:ಸ್ವಾತಂತ್ರ್ಯದ ಅತಿರೇಕದ ಕಲ್ಪನೆಯಂತಲ್ಲ!

ಸುಮಿತ್ರೆಗೆ ನಡುವಳಿಕೆಯಲ್ಲಿ ಬೇರೆ ಸಂದರ್ಭಗಳ ಮಾತಿನಲ್ಲಿ ಅವಳಿಗೆ ಶ್ರೀರಾಮನ ಪರಾತ್ಪರ ತತ್ವ ಹಾಗೂ ಭವಿಷ್ಯತ್ತಿನ ಜ್ಞಾನ ಇದ್ದಿರಬಹುದೆಂದು ಗೊತ್ತಾಗುತ್ತದೆ. ರಾಮ ಕಾಡಿಗೆ ಹೋದ ರಾತ್ರಿ ದಶರಥನಿಗೆ ಇಂದ್ರಿಯಗಳು ಶಿಥಿಲವಾಗುತ್ತವೆ. ಕೌಸಲ್ಯೆಯ ದುಃಖದ ಕಟ್ಟೆಯೊಡೆದು ದಶರಥನ ಮನನೋಯುವಂತೆ, ತನಗೆ ನಿಷ್ಠುರ ವಾಕ್ಯಗಳನ್ನಾಡಿ ಬಿಡುತ್ತಾಳೆ. ಅಂದು ರಾತ್ರಿ ಯಾರೂ ಅರಮನೆಯಲ್ಲಿ ನಿದ್ರಿಸಲಿಲ್ಲ. ಗಜಶಾಲೆಯ ಆನೆಗಳೂ ಕೂಡ ಅಂದು ಮೇವು ತಿನ್ನಲಿಲ್ಲವಂತೆ. ಆ ವರ್ಷ ಹೊಸದಾಗಿ ಗಂಡು ಮಗನನ್ನು ಹಡೆದ ತಾಯಿಗೂ ಈ ಹಾಳು ರಾಮ ಕಾಡಿಗೆ ಹೋದ ದಿನದಂದು ಪ್ರತಿವರ್ಷವೂ

ನೆನೆಯುವಂತಾಯಿತು ಎಂಬ ದುಃಖದಿಂದ ಅವಳ ಆನಂದವೇ ಮಾಯವಾಯಿತು. ಬ್ರಾಹ್ಮಣರು ಅಗ್ನಿ ಹೋತ್ರ ಮಾಡುವುದನ್ನೇ ಬಿಟ್ಟಿದ್ದರು!

ಆ ರಾತ್ರಿ ಸುಮಿತ್ರೆ ಕೌಸಲ್ಯೆಗೆ ಹೀಗೆ ಹೇಳುತ್ತಾಳೆ. ನಿನ್ನ ಮಗ ಸಾಮಾನ್ಯ ಮನುಷ್ಯನಲ್ಲ. ಅವನು ಸಕಲ ಗುಣಸಂಪನ್ನನಾದ ಪುರುಷೋತ್ತಮ. ಅವನನ್ನು ಸೂರ್ಯ ಕಿರಣಗಳು ಸುಡುವುದಿಲ್ಲ. ಗಾಳಿ ಸುಖಕರವಾಗಿ, ಎಲ್ಲ ಋತುಗಳಲ್ಲಿ ಸೇವಿಸುವುದು. ಚಂದ್ರನೂ ಕೂಡ ತಂದೆಯಂತೆ ಅವನನ್ನು ಸಂತೋಷಗೊಳಿಸುತ್ತಾನೆ. ಏಕೆಂದರೆ ನಿನ್ನ ಮಗ ಸೂರ್ಯನಿಗೂ ಸೂರ್ಯನಾಗಿದ್ದಾನೆ. ಅಗ್ನಿಗೂ ಅಗ್ನಿ! ಪ್ರಭುವಿಗೂ ಪ್ರಭು! ಶ್ರೀದೇವಿಗೂ ಮಂಗಳಪ್ರಾಯ. ಸಕಲ ದೇವತೆಗಳಿಗೂ ಅವನು ಪೂಜ್ಯದೇವನಾಗಿದ್ದಾನೆ.

ಸಾಮಾನ್ಯ ಮನುಷ್ಯನೊಬ್ಬನ ವಿಷಯದಲ್ಲಿ ಅಸಂಗತವೋ ಅಥವಾ ಉತ್ಪ್ರೇಕ್ಷೆಯೋ ಆಗಬಹುದಾದ ಈ ಪವಿತ್ರ ವಾಕ್ಯಗಳನ್ನು ಆಡುವ ಸುಮಿತ್ರೆ ಪರಮಜ್ಞಾನಿ ಎಂಬುದು ಇಲ್ಲಿ ಸ್ಪಷ್ಟ.

೫. ಶೂರ್ಪನಖಿ :

ಶ್ರೀ ರಾಮಾಯಣದಲ್ಲಿ ಶೂರ್ಪನಖಿ ಮೌಲಿಕವಾಗಿ ಅಷ್ಟೊಂದು ಮುಖ್ಯಪಾತ್ರವಲ್ಲದಿದ್ದರೂ ರಾಮ, ಸೀತೆ, ಕೌಸಲ್ಯೆಯರ ಅಥವಾ ಪ್ರತಿಪಕ್ಷದ ರಾವಣಾದಿಗಳ ಸಾಲಿಗೆ ಸೇರುವ ಘನತೆ ಅವಳಿಗಿಲ್ಲ. ಆದರೆ ರಾಮಯಣದ ಕಥೆಯ ತಿರುವಿಗೆ ಮುಖ್ಯಕಾರಣವಾಗಿ, ರಾಜಕಾರಣ ದೃಷ್ಟಿಯಿಂದ ಒಂದು ವಿಕೃತ ಮನಸ್ಸಿನ ಅಧ್ಯಯನ ದೃಷ್ಟಿಯಿಂದ ಇವಳೂ ಅಲ್ಪಸ್ವಲ್ಪ ಪ್ರಾಮುಖ್ಯತೆ ಪಡೆದವಳೇ ಆಗಿದ್ದಾಳೆ.

ಮಹರ್ಷಿಯ ಕಾವ್ಯದಲ್ಲಿ ಈಕೆ ಮೊದಲ ಬಾರಿಗೆ ಸೀತಾರಾಮರ ಮುಂದೆ 'ಪಂಚವಟಿಯ' ಆಶ್ರಯದಲ್ಲಿ ಕಾಣಿಸಿಕೊಳ್ಳುತ್ತಾಳೆ. ಆ ಹೊತ್ತಿಗೆ ರಾಮಚಂದ್ರನ ವನವಾಸದ ಅವಧಿಯ ಹದಿಮೂರು ವರ್ಷಗಳೂ ಮುಗಿದು ಇನ್ನೇನು ಕೇವಲ ಒಂದೇ ವರ್ಷ ಬಾಕಿ ಉಳಿದಿತ್ತು. ಆ ಸಂದರ್ಭದಲ್ಲಿ ಶೂರ್ಪನಖಿ ಬಾರದೇ ಹೋಗಿದ್ದರೆ ಬಹುಶಃ ರಾಮಾಯಣ ಕಥೆ ಹಾಗೆಯೇ ನೀರಸವಾಗಿ ಮುಗಿದುಹೋಗಬಹುದಿತ್ತೇನೋ?

ರಾಮನನ್ನು ಕಾಡಿಗೆ ಕಳಿಸುವಲ್ಲಿ ಮಂಥರೆ ಎಷ್ಟು ಮುಖ್ಯಳೋ. ಆ ಕಾಡಿನಲ್ಲಿ ರಾವಣ ಮುಂತಾದವರ 'ದುರ್ಮರಣ'ಕ್ಕೆ ಈ ಶೂರ್ಪನಖಿ ಅಷ್ಟೇ ಪ್ರಮುಖಳು! ಅದನ್ನು ಹಾಗೆಯೋ ಎಂದು ಸೂಚಿಸಲು ಮಹರ್ಷಿ ಇಬ್ಬರ ಪ್ರಥಮ ಪರಿಚಯದ ಕಾಲದಲ್ಲಿಯೂ ಒಂದೇ ಅದ್ಭುತ ಶಬ್ಧ ಪ್ರಯೋಗ ಮಾಡಿದ್ದಾನೆ.

ಶ್ರೀರಾಮನ ಪಟ್ಟಾಭಿಷೇಕ ನಿಶ್ಚಿತವಾಗಿ, ಘೋಷಣೆಯಾದ ಆ ರಾತ್ರಿ, ಮಂಥರೆಯು ಕೈಕೇಯಿಯ ಅಂತಃಪುರದ ಮಾಳಿಗೆಯನ್ನು ಹತ್ತಿದ್ದು ಎಷ್ಟು 'ಆಕಸ್ಮಿಕವೋ' ಗೋದಾವರಿ ತೀರದ ಪಂಚವಟಿಯ ರಾಮಾಶ್ರಯದಲ್ಲಿ ಈ ಶೂರ್ಪನಖಿ ಹಾಜರಾದದ್ದೂ ಅಷ್ಟೇ ಆಕಸ್ಮಿಕ.

'ಶೂರ್ಪನಖಿ ರಾವಣ ಕುಂಭಕರ್ಣರಿಗೆ ತಂಗಿ ಮತ್ತು ಅನಲೆಯ ತಂದೆ ವಿಭೀಷಣನ ಅಕ್ಕ.' ಇವಳನ್ನು ಯಾವನೋ ರಾಕ್ಷಸನಿಗೋ ಅಥವಾ ಯಕ್ಷನಿಗೋ ಕೊಟ್ಟು ವಿವಾಹ ಮಾಡಲಾಗಿತ್ತು. ರಾವಣ ಯಾವುದೋ ಒಂದು ದಿಗ್ವಿಜಯ ಕಾಲಕ್ಕೆ ಅವನನ್ನು ಯಾರೆಂದು ತಿಳಿಯದೇ ಕೊಂದು ಹಾಕಿದ್ದ! ಅಂದಿನಿಂದ ಶೂರ್ಪನಖಿ ವಿಧವೆಯಾದಳು. ಗಂಡ ತನ್ನಣ್ಣನಿಂದಲೇ ಹತನಾದುದಕ್ಕೆ ಅಬ್ಬರಿಸುತ್ತ ಅಣ್ಣನ ಮುಂದೆ ಹಾಜರಾಗಿ ತನ್ನ ಅಳಲನ್ನು ತೋಡಿಕೊಂಡಳು. ನನ್ನ ಗಂಡ ಕಾಲಕೇಯರಿಗೆ ಅಧಿಪತಿಯಾಗಿದ್ದ. ನನಗೆ ನನ್ನ ಪ್ರಾಣಕ್ಕಿಂತ ಪ್ರೀಯನಾಗಿದ್ದ ಅವನನ್ನು ಸ್ವಂತ ಅಣ್ಣನಾದ ನೀನೇ ಹೀಗೆ ಹಿಂದುಮುಂದು ನೋಡದೇ ಕೊಲ್ಲಬಹುದೇ? ನಿನ್ನಿಂದಲೇ ನನಗೀಗ ವೈಧವ್ಯ ಪ್ರಾಪ್ತವಾಗಿದೆ. ಅಳಿಯನನ್ನು ಕಾಪಾಡಬೇಕಾದ ನಿನಗೆ ನಾಚಿಕೆ ಆಗುವುದಿಲ್ಲವೇ? ಎನ್ನುತ್ತಾಳೆ.

ಇಷ್ಟೆಲ್ಲವನ್ನು ಕೇಳಿದ ರಾವಣ ದಿಗ್ಭ್ರಾಂತನಾದ. ಈ ಮೇಲೆ ಅವಳು ರಾವಣನ ಬಗೆಗೆ ಆಡುವ ಮಾತುಗಳಿಂದ ಅವನು ಇದು ವರೆಗೂ ತಂಗಿಯ ಗಂಡನನ್ನು ನೋಡಿರಲಿಕ್ಕಿಲ್ಲ. ರಾವಣನೇ ಸ್ವತಃ ಆಡುವ ಮಾತು 'ತಂಗೀ' ಅಳಬೇಡ. ಯುದ್ಧದ ಅಮಲು ನೆತ್ತಿಗೇರಿದ ಜಯ ಕಾಂಕ್ಷಿಯಾದ ನನಗೆ ನನ್ನವರಾರು, ಶತ್ರುಗಳಾರೆಂಬುದೇ ಗೊತ್ತಾಗಲಿಲ್ಲ. ಅವನು ಅಳಿಯನೆಂಬುದು ನನಗೆ ಮರೆತು ಹೋಗಿತ್ತು. ಈಗ ನಿನಗೆ ಐಶ್ವರ್ಯವನ್ನು ಪದವಿಯನ್ನು ಕೊಟ್ಟು ಗೌರವಿಸುತ್ತೇನೆ. ಹೆದರಬೇಡ ದುಃಖಿಸಬೇಡ ಎಂದವನೇ ಅವಳಿಗೆ ದಂಡಕಾರಣ್ಯದ ಪಂಚವಟೀ ಕ್ಷೇತ್ರದ ಹದಿನಾಲ್ಕು ಸಾವಿರ ರಾಕ್ಷಸ ಸೈನ್ಯದ ಮೇಲೂ, ಅವರಿಗೆ ಅಧಿಪತಿಯಾದ ತನ್ನ ಚಿಕ್ಕ ತಾಯಿಯ ಮಗ 'ಖರ'ನ ಮೇಲೂ ಅಧಿಕಾರ ಚಲಾಯಿಸುವ ಒಡತಿಯ ಪದವಿಯನ್ನು ನೀಡುತ್ತಾನೆ.

ಹದಿನಾಲ್ಕು ಸಾವಿರ ಸೈನ್ಯ ತುಕುಡಿಯ ಅಧ್ಯಕ್ಷನಾದ 'ದೂಷಣ' ಹಾಗೂ ಆ ಜನಸ್ಥಾನಕ್ಕೆ ಅಧಿಪತಿಯಾದ ನನ್ನ ಪ್ರತಿನಿಧಿಯಾದ 'ಖರ' ನೀನು ಹೇಳಿದಂತೆ ಕೇಳುತ್ತಾರೆ ಎಂದು ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾನೆ. ಇದನ್ನು ಗಮನಿಸಿದಾಗ ರಾವಣ ಶೂರ್ಪನಖಿಯನ್ನು ರಾಜ್ಯಪಾಲೆಯನ್ನಾಗಿ ಮಾಡಿದ ಎಂಬುದು ಗೊತ್ತಾಗುತ್ತದೆ.

ಆ ಕಾಲದಲ್ಲಿ 'ಹೆಣ್ಣಿಗೇಕೆ ರಾಜಕೀಯ?' ಎಂದು ಪ್ರಶ್ನಿಸುವ ಪ್ರವೃತ್ತಿ ಇರಲಿಲ್ಲವೆಂಬುದು ಗೊತ್ತಾಗುತ್ತದೆ. ಈ ವೇಳೆಗಾಗಲೇ ತಾಟಕಿ ರಾವಣನ ಊಳಿಗದಲ್ಲಿ ಸಕ್ರಿಯನಾಗಿದ್ದು ಭಯೋತ್ಪಾದಕ ಸೇನೆಯೊಂದಕ್ಕೆ ಮುಖಂಡಳಾಗಿದ್ದಳು! ಆದರೆ ಶೂರ್ಪನಖಿ ಇದನ್ನು ಒಪ್ಪಿದಳೇ? ಒಳಗೊಳಗೇ ಗಂಡನನ್ನು ಕಳೆದುಕೊಂಡ ಸಂಕಟದಿಂದ ನೊಂದುಕೊಂಡಳೇ? ಅಥವಾ ತನ್ನ ಪ್ರೀತಿಯ ಗಂಡನನ್ನೇ ಕೊಂಡ ಪಾತಕಿಯ ಮೇಲೆ ಅವಳಿಗೆ ಹಗೆತನ ಬರಲಿಲ್ಲವೇ? ಉದ್ದೇಶ ಪೂರ್ವಕವಾಗಿಯೇ ರಾಮ

[illegible]

[illegible]

[illegible]

[illegible]

[illegible]

ರಾವಣರೆಂಬ ವೈರಿಗಳನ್ನು ರಾವಣನ ಮೇಲೆ ಎತ್ತಿಕಟ್ಟಿ ತನ್ನ ಹಗೆತನವನ್ನು ತೀರಿಸಿಕೊಂಡಳೆ? ಈ ಯಾವುದಕ್ಕೂ ಮಹರ್ಷಿ ನೇರವಾಗಿ ಉತ್ತರಿಸಲಿಲ್ಲ.

ಗಂಡನನ್ನು ಕಳೆದುಕೊಂಡು ವಿಧವೆಯಾದ ರಾವಣನ ತಂಗಿ ರಾಜಕಾರಣದಲ್ಲೆಷ್ಟು ಪಳಗಿದ್ದಳು? ಅವಳಿಗೆ ರಾಜ್ಯದ ನೀತಿ ನಿಯಮಾವಳಿಗಳ ಅರಿವಿತ್ತೇ? ಇದಕ್ಕೆ ರಾಮಾಯಣ ಸ್ಪಷ್ಟವಾಗಿ ಉತ್ತರ ನೀಡಿಲ್ಲ. ಶೂರ್ಪನಖಿ ರಾಜಕಾರಣದಲ್ಲಿ ಮಹಾಮುತ್ಸದ್ಧಿ ಇದ್ದಳು. ಪ್ರಮಾಣಗಳನ್ನು ನೋಡಿದಾಗ ಜನಸ್ಥಾನವೇ ಹತಸ್ಥಾನವಾದಾಗ ರಾವಣನ ಬಳಿ ಬಂದು ಅವನನ್ನೆಚ್ಚರಿಸುವ ಅವಳ ನೀತಿ ವಾಕ್ಯಗಳನ್ನು ಓದಿದರೆ ಅವಳು ಪಳಗಿದ ರಾಜಕಾರಣಿಯಂತೇ ಗೋಚರಿಸುತ್ತಾಳೆ.

ಶೂರ್ಪನಖಿ ಮಾತಿನಲ್ಲಿ ತುಂಬಾ ಜಾಣೆಯಾಗಿದ್ದಳು. ಉದಾ: ಖರನೊಡನೆ ತನ್ನ ಮೂಗು ಹೋದ ವೃತ್ತಾಂತ ವರ್ಣಿಸುವಾಗ, ರಾಮನ ಮೇಲೆ ತಾನು ಕಾಮಾತುರನಾಗಿದ್ದನ್ನು ಹೇಳದೇ ರಾಮ ಲಕ್ಷ್ಮಣರಿಬ್ಬರ ನಡುವೇ ಒಬ್ಬಳೇ ಸ್ತ್ರೀ ಬಂದಿರುವುದಾಗಿ ಹೇಳಿ – ಸೀತೆಯೂ ಕೆಟ್ಟ ನಡತೆಯವಳು ಎನ್ನುತ್ತಾಳೆ. ಅಂದರೆ ಇಲ್ಲಿ ಮಹಾಪತಿ ಸೀತೆಯನ್ನೇ 'ವ್ಯಭಿಚಾರಿಣಿ' ಎಂಬರ್ಥದಲ್ಲಿ ಸಂಕೇತಿಸಿದ್ದಾಳೆ.

ರಾವಣನಿಗೆ ಸೀತೆಯ ಬಗೆಗೆ ಹೇಳುವಾಗ ಅವಳು ಸುಶೀಲೆ, ರಾಮನ ಪ್ರಿಯ ಧರ್ಮಪತ್ನಿ ಗಂಡನಿಗೆ ಸದಾ ಪ್ರಿಯವಾಗಿರುವವಳು ಸುಂದರಿ ಎಂದು ಆಕೆಯ ರೂಪರಾಶಿ ಈ ಚಪಲಚನ್ನಿಗನಿಗೆ ಮನಸೂರೆಗೊಳ್ಳುವಂತೆ ವರ್ಣಿಸುತ್ತಾಳೆ. ಅವಳು ಯಾರನ್ನು ಅಲಂಕರಿಸುವಳೋ (ಅಪ್ಪಿಕೊಳ್ಳುವಳೋ) ಆತ ದೀರ್ಘಾಯುಷಿಯಾಗಿ ಬದುಕುತ್ತಾನೆ. ನಿನಗೆ ಅವಳು ಅನುರೂಪಳಾದ ಸತಿ ನಿನಗಾಗಿಯೇ ನಾನವಳನ್ನು ತರಲು ಹೋಗಿ ವಿರೂಪಕೊಳಗಾಗಿರುವೆನು ಎನ್ನುತ್ತಾಳೆ. ನೀನೊಮ್ಮೆ ಅವಳನ್ನು ನೋಡಿದರೆ ಸಾಕು ಖಂಡಿತ ಕಾಮವಶನಾಗುತ್ತಿ ಎನ್ನುತ್ತಾಳೆ. ನೀನು ರಾಮಲಕ್ಷ್ಮಣರನ್ನು ಕೊಂದು ಅವಳನ್ನು ತರಬೇಕು. ಒಂದು ವೇಳೆ ಅವರಿಬ್ಬರನ್ನು ಕೊಲ್ಲಲಾಗದಿದ್ದರೆ ಉಪಾಯಾಂತರದಿಂದಲಾದರೂ ಅಪಹರಿಸಿ ನನ್ನಿಚ್ಛೆ ಪೂರೈಸಬೇಕು ಎನ್ನುತ್ತಾಳೆ. ತಾನು ರಾಮನ ಮೇಲೆ ಕಾಮವಶಳಾಗಿದ್ದೆ ಅದುವೇ ಇಷ್ಟಕ್ಕೆಲ್ಲ ಕಾರಣವಾಯಿತೆಂದು ಎಲ್ಲಿಯೂ ಮರೆತೂ ಆಡದ ವಾಕ್ಚತುರೆಯಾಗಿದ್ದಳು.

ಶ್ರೀರಾಮನನ್ನು ಮೊದಲ ಸಲವೇ ಕಂಡಾಗ 'ಪ್ರಥಮನೋಟದಲ್ಲಿಯೇ ಪ್ರೀತಿ' [Love at First Sight] ಅಂಕುರಿಸುತ್ತದೆ. ಅವನನ್ನು ಕಾಮಚೇಷ್ಟೆಯಿಂದ ರೇಗಿಸುತ್ತಾಳೆ. ಆದರೆ ಮುದುಕಿಯಾಗಿದ್ದ ಶೂರ್ಪನಖಿಗೆ ರಾಮನನ್ನು ತಾನು ಕಾಮತೃಪ್ತಿಗಾಗಿ ಪೀಡಿಸುವುದು, ಮುಗ್ಧೆಯಾದ ಸೀತೆಯ ಮೇಲೆ ಕೈ ಮಾಡುವುದು ಅಪಹಾಸ್ಯಕರ. 'ಕಾಮಕ್ಕೆ ಕಣ್ಣಿಲ್ಲ' ಎಂಬುದು ಬೇರೆ ಮಾತು. ಆದರೆ ಶೂರ್ಪನಖಿಗೆ ಇದು ಬೇರೆ ರೀತಿಯಾಗಿ ಕಂಡಿದೆ.

ರಾಮನನ್ನು ಕಾಮಕ್ಕಾಗಿ ಕಾಡುವ ಈ ಶೂರ್ಪನಖಿ ವಾಸ್ತವದಲ್ಲಿ ಸುಂದರಿ ಇದ್ದಳೆ? ಎಂಬುದನ್ನು ಯೋಚಿಸಿದಾಗ – ಇದಕ್ಕೆ ವಾಲ್ಮೀಕಿಯೇ – "ಕೆಟ್ಟಕುರೂಪಿ ಮುಸುಡಿಯವಳು;

ದೊಡ್ಡಸೊಂಟದವಳು; ಭಯಂಕರ ಕಂಗಳುಳ್ಳವಳು ಕೆಂಜೆಡೆಯವಳು; ಒರಟು ಧ್ವನಿಯವಳು; ಕ್ರೂರೀ; ವೃದ್ಧೆ; ದುರಾಚಾರಿ, ಸುಳ್ಳು ಹೇಳುವವಳು ಇತ್ಯಾದಿ ರಾಮ ಮಾತ್ರ ತ್ರಿಭುವನ ಸುಂದರ ಸುಂದರ ಸಕಲ ಲಾವಣ್ಯಗಳ ನಿಧಿ. ಗುಣಸಾಗರ, ಇಂಥವನನ್ನು ಕಾಮಿಸುವವಳಾದ ಶೂರ್ಪನಖಿಗೆ ತನ್ನನ್ನು 'ಪ್ರೀತಿಸು' ಎನ್ನಲು ಬಾಯಿ ಹೇಗೆ ಬಂತು? ಎಂದು ತೊಂದರೆಪಡುವಂತೆ ಈ ಅಸಹ್ಯತೆಯನ್ನು, ವೈರಶ್ಯವನ್ನು ಮಹರ್ಷಿ ಒಂದೊಂದು ಶ್ಲೋಕದಲ್ಲಿ ಹೇಳುತ್ತ ಇಬ್ಬರ ವಿಸದೃಶ್ಯತೆಯನ್ನು ಎತ್ತಿತೋರಿಸುವ ಶ್ಲೋಕಗಳನ್ನು ಹೆಣೆದಿದ್ದಾನೆ”[೧೧].

ರಾಮನ ಬಳಿ ಬಂದ ಶೂರ್ಪನಖಿ ತನ್ನನ್ನು ರಾವಣ ಸೋದರಿಯೆಂದು ಪರಿಚಯಿಸಿಕೊಳ್ಳುತ್ತಾಳೆ. ಜೊತೆಗೆ ನೀವಾರೆಂದು ಕೇಳುತ್ತಾಳೆ. ಅದಕ್ಕೆ ರಾಮ ತಾನು ದಶರಥ ಪುತ್ರ ತನ್ನ ಬಳಿಯಿರುವವಳು ತನ್ನ ಪತ್ನಿ ಸೀತೆ ಮತ್ತು ತಮ್ಮ ಲಕ್ಷ್ಮಣ ಪರಿಚಯಿಸಿಕೊಳ್ಳುವಾಗ ಯಾವ ಸುಳ್ಳನ್ನು ಆಡಲಿಲ್ಲ. ರಾಮ ಆಶ್ರಮವಾಸಿಗಳ ಬಳಿ ಮತ್ತು ಸ್ತ್ರೀಯರ ಬಳಿ ಆಪತ್ಕಾಲದಲ್ಲಿಯೂ ಸುಳ್ಳನ್ನಾಡಲಾರ. ಆದರೆ ಮುಂದೊದಗಲಿರುವ ಅನಾಹುತವನ್ನು ತಪ್ಪಿಸಲು ಏನಾದರೊಂದು ಸುಳ್ಳನಾಡಲೇಬೇಕಾದ ಅನಿವಾರ್ಯತೆ ಬರುತ್ತದೆ. ಅದಕ್ಕೆ ಮಹರ್ಷಿಗಳು ಹೀಗೆ ಹೇಳುತ್ತಾರೆ.

“ಶೂರ್ಪನಖಿ ರಾಮನನ್ನು ಕೇವಲ ಪುರುಷೋತ್ತಮನೆಂದು ಬಣ್ಣಿಸಿ ಕಾಮಯಾಚನೆ ಮಾಡಿ ನಿಲ್ಲಲಿಲ್ಲ. ಅಧಿಕ ಪ್ರಸಂಗಿಯಾಗಿ ಏನೇನೋ ಹೇಳಿದಳು. ಸೀತೆ ಕುರೂಪಿ, ವಿಕಾರ ರೂಪದವಳು ರಾಮನಿಗೆ ಸರಿಯಾದ ಪತ್ನಿಯಲ್ಲದವಳು, ತಾನೇ ಸರಿಯಾದ ಪತ್ನಿ ಎಂದು ಆಕೆಯಲ್ಲಿಯ ಜಾಗೃತ ಕಾಮ ಇಷ್ಟೆಲ್ಲವನ್ನು ಹೇಳಿಸಿತು. ಸೀತೆಯನ್ನೂ, ಲಕ್ಷ್ಮಣನನ್ನೂ ತಾನು ತಿಂದು ಮುಗಿಸುವುದಾಗಿ ಹೇಳುತ್ತಾಳೆ. ನಂತರ ರಾಮ ಅವಳೊಡನೆ ಬೇಕೆಂದರಲ್ಲಿ ವಿಹರಿಸುತ್ತ ಅರಣ್ಯ ಗಿರಿಧಾಮಗಳನ್ನೆಲ್ಲ ವಿಹರಿಸುತ್ತ ಸುಖದಿಂದಿರಬಹುದೆಂದು, ತಾನು ಪ್ರಭಾವ ಸಂಪನ್ನೆಯೆಂದೂ, ಬಲಿಷ್ಟೆಯೆಂದೂ, ಬೇಕಾದಲ್ಲಿ ಸಂಚರಿಸುವ ಶಕ್ತಿಯುಳ್ಳವಳೆಂದು ಹೇಳಿದಳು”[೧೨] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈಕೆಯ ಬುದ್ಧಿ ಕೆಟ್ಟರಬಹುದೆಂದು ರಾಮ ಕೊಂಚ ವಿನೋದ ಮಾಡಿ ಉಪಾಯದಿಂದ ಹೊರಗಟ್ಟಲು ಯತ್ನಿಸುತ್ತಾನೆ. ಆಶ್ರಮದ ತೋಟದ ಬಾಗಿಲ ಬಳಿ ಕೆಲಸ ಮಾಡುತ್ತಿದ್ದ ಲಕ್ಷ್ಮಣನನ್ನು ತೋರಿಸಿ, ನಿನಗೆ ಬೇಕಾದ ನನ್ನ ರೂಪ ಅದು ನನ್ನ ತಮ್ಮನಲ್ಲಿದೆ. ನಾನು ಕೃತದಾರ ಮದುವೆಯಾಗಿ ಹೆಂಡತಿ ಹತ್ತಿರದಲ್ಲಿರುವವನು. ಆದ್ದರಿಂದ ಅವನ ಹತ್ತಿರ ಹೋಗು ನಿನ್ನಿಷ್ಟ ಈಡೇರುತ್ತದೆ ಎನ್ನುತ್ತಾನೆ.

ರಾಮನ ಆಜ್ಞೆಯಂತೆ ಲಕ್ಷ್ಮಣ ಅವಳನ್ನು ವಿರೂಪಗೊಳಿಸುತ್ತಾನೆ. ಅವಳ ಮೂಗು ಮತ್ತು ಕಿವಿಗಳನ್ನು ಕತ್ತರಿಸುತ್ತಾನೆ. ಕಾಮಾತುರರಾದವರಿಗೆ ಅಂದು ಇದೇ ಶಿಕ್ಷೆ ವಿಧಿಸಲ್ಪಡುತ್ತಿತ್ತು. ರಾಮ ಈ ಮೊದಲು ತಾಟಕಿಗೂ ಕೊಡಲಿಚ್ಛಿಸಿದ ಶಿಕ್ಷೆ ಇದೇ ಆಗಿತ್ತು. ವಿರೂಪವಾದ ಮೇಲಾದರೂ ಅಧಿಕ ಪ್ರಸಂಗಿಗಳು ದಾರಿಗೆ ಬರಬಹುದೆಂದು ಅಂದಿನ ಸ್ತ್ರೀಯರಿಗೆ ಮರಣದಂಡನೆಯ ಬದಲು ಇಂಥ ಶಿಕ್ಷೆ ಇತ್ತು. ಇದು ಕ್ರೌರ್ಯವೆನಿಸಿದರೂ ಅಪರಾಧಿಯ ತಪ್ಪಿಗೆ ಶಿಕ್ಷೆ ಇದೇ ಆಗಿತ್ತು.

ರಾವಣನ ಮುಂದೆ ಶೂರ್ಪನಖಿ ನಡೆದುದೆಲ್ಲವನ್ನು ಹೇಳುವಾಗ – ನಿಜವಾಗಿ ಶಿಕ್ಷೆಕೊಟ್ಟು ಮೂಗು–ಕಿವಿಗಳನ್ನು ಕತ್ತರಿಸಿದವರು. ಲಕ್ಷ್ಮಣನಾದರೂ ಅವಳು ರಾಮನೇ ಹಾಗೆ ಮಾಡಿದ ಎನ್ನುತ್ತಾಳೆ. ರಾಮನ ಬಲಗೈ ಲಕ್ಷ್ಮಣ ಎಂಬುದನ್ನು ಮಹರ್ಷಿ ವರ್ಣಿಸುತ್ತಾನೆ.

ಶೂರ್ಪನಖಿಗೆ ರಾಮರೂಪವನ್ನು ಮರೆಯಲಾಗಲಿಲ್ಲ. ಖರನ ಹದಿನಾಲ್ಕು ಸಾವಿರ ಸೈನ್ಯವನ್ನು ರಾಮನಿಂದ ಕೊಲ್ಲಿಸುತ್ತಾಳೆ! ರಾವಣನನ್ನು ಎತ್ತಿಕಟ್ಟಿ ಅವನ ವಂಶವನ್ನು ನಿರ್ನಾಮ ಮಾಡುತ್ತಾಳೆ. ಆಕೆಯ ಸೈನಿಕರೂ ಸಮರ್ಥ ವಯಸ್ಸಿನ ಪುರುಷರೂ ಇವಳಿಂದಾಗಿಯೋ ಸಾಯುತ್ತಾರೆ. ಚಟ್ನಿ ರುಬ್ಬುವಾಗ ಬಲಗೈ ಹೊರಗೆ ಸಿಡಿದ ಕಾಳುದಡ್ಡಿಯನ್ನು ಒರಳಿಗೆ ಮತ್ತೆ ಮತ್ತೆ ನೂಕುವಂತೆ ಶೂರ್ಪನಖಿ ಲಂಕೆಯ ಎಲ್ಲರನ್ನು ರಾಮನ ಬಿಲ್ಲಿಗೆ ಬಲಿ ಕೊಡುತ್ತಾಳೆ.

ವಿಭೀಷಣನ ರಾಜ್ಯದಲ್ಲಿ ಶೂರ್ಪನಖಿ ಎಲ್ಲಿ ಬದುಕಿದ್ದಳೋ ತಿಳಿಯದು. ಅವಳು ಸತ್ತದ್ದನ್ನೂ, ಹೇಗೆ ಸತ್ತಳೆಂಬುದನ್ನೂ ವಾಲ್ಮೀಕಿ ಎಲ್ಲಿಯೂ ಬರೆಯಲಿಲ್ಲ. ರಾವಣನಿಗೆ ಚಾಡಿ ಹೇಳಿದ ಮೇಲೆ ಅವಳು ರಾಮಾಯಣದಲ್ಲೆಲ್ಲೂ ಮತ್ತೆ ಕಾಣಿಸಿಕೊಳ್ಳಲಿಲ್ಲ. ಊರಿನಲ್ಲಿರುವವರೆಲ್ಲರೂ ಶಾಪ ಹಾಕುವಾಗ ಪ್ರಸ್ತಾಪದಲ್ಲಿ ಮಾತ್ರ ಬರುತ್ತಾಳೆ. ಹೀಗೆ ಅವಳು ಯಾವ ಪುರುಷಾರ್ಥವನ್ನೂ ಅನುಭವಿಸದ ನಿರ್ಭಾಗ್ಯೆ.

೬. **ಸೀತಾದೇವಿ :**

ಸೀತೆ ತಾನು ಸೀರಧ್ವಜನೆಂಬ ಜನಕರಾಜನಿಗೆ ಯಾವಭೂಮಿಯಲ್ಲಿ ಅಯೋನಿಜೆಯಾಗಿ ದೊರೆತವಳೆಂದು ರಾಮಾಯಣದಲ್ಲಿ ತಾನೇ ಹೇಳಿಕೊಳ್ಳುತ್ತಾಳೆ.

(ಜನಕ ಎಂಬುದೊಂದು ರಾಜವಂಶದ ಹೆಸರು. ಮೂಲದಲ್ಲಿ ಸೂರ್ಯವಂಶದ ಅರಸರು. ಶ್ರೀ ರಾಮಚಂದ್ರನ ಪೂರ್ವಜನಾದ ಇಕ್ಷ್ವಾಕುವಿನ ಎರಡನೆಯ ಮಗ ನಿಮಿಚಕ್ರವರ್ತಿ ಒಂದು ಯಾಗ ಮಾಡಲು ಉದ್ದೇಶಿಸಿ ಕುಲಗುರು ವಶಿಷ್ಠರನ್ನು ಪ್ರಾರ್ಥಿಸಿದ).

ಸೀರಧ್ವಜನಿಗೆ ಊರ್ಮಿಳೆಯೆಂಬುವಳು ಔರಸ (ಸ್ವಂತ) ಪುತ್ರಿ. ಭಾನುಮಾನ್ ಎಂಬ ಮಗನೂ ಇದ್ದ. ಅಹಂಕಾರ ಮಮಕಾರಗಳನ್ನು ಪೂರ್ಣವಾಗಿ ಗೆದ್ದಿದ್ದ ಈ ರಾಜರ್ಷಿಯನ್ನು ಶ್ರೀ ರಾಮಚಂದ್ರ ತನ್ನ ಮಾವನನ್ನಾಗಿ ಪಡೆದಿದ್ದ. ಇಂಥ ಕರ್ಮಯೋಗಿಯ ಸಾಕುಮಗಳಾಗಿ ಬೆಳೆದ ಸೀತೆ ಗುರುಗಳಿಂದ ಸಕಲಧರ್ಮ ನೀತಿ ನಿಯಮಾಚರಣೆಗಳನ್ನು ತಂದೆಯ ಮನೆಯಲ್ಲಿಯೇ ಕಲಿತಿದ್ದಳೆಂಬುದನ್ನು ತಾನೇ ಅನುಸೂಯಾದೇವಿಯೊಡನೆ ಹಾಗೆ ಹೇಳುತ್ತಾಳೆ.

ಸೀತೆ ತಂದೆಯ ಮನೆಯಲ್ಲಿ ತಾನು ಕಲಿತಿದ್ದ ಸ್ತ್ರೀ ಧರ್ಮವನ್ನು ತನ್ನ ಅತ್ತೆ ಕೌಸಲ್ಯೆಗೆ ಒಪ್ಪಿಸಿ ತೋರಿಸುವ ಭಾಗ ಹೃದಯ ಸ್ಪರ್ಶಿಯಾಗಿದೆ. ಮಗನೊಡನೆ ಕಾಡಿಗೆ ಹೊರಟು ನಿಂತ ಸೊಸೆಯನ್ನು ಕಂಡ ಕೌಸಲ್ಯೆ ಅಳುತ್ತ ಲೋಕದ ಸಾಮಾನ್ಯ ರೀತಿಯನ್ನು ಟೀಕಿಸಿ, ಅವಳಿಗೆ ಹಿತೋಪದೇಶ ಮಾಡುತ್ತಾಳೆ. ಮಗಳೇ ಈ ಲೋಕದ ನಡತೆ ಅಸಹ್ಯವಾಗಿದೆ. ಐಶ್ವರ್ಯದಲ್ಲಿದ್ದಾಗ ತನ್ನ ಪತ್ನಿಯನ್ನು ಸತ್ಕರಿಸಿ, ಒಡವೆ ವಸ್ತ್ರ ಭೋಗಗಳಿಂದ ತೃಪ್ತಿಪಡಿಸಿದ್ದರೂ ಗಂಡನಿಗೆ ಐಶ್ವರ್ಯ ಹೋದರೆ ಅವನನ್ನು ಕೈಬಿಡುತ್ತಾಳೆ. ಇದು ಸ್ತ್ರೀಯರ ಸಾಮಾನ್ಯ ನಡತೆ.... ಇತ್ಯಾದಿ. ಇದನ್ನೆಲ್ಲ ಆಡುತ್ತಿರುವವಳೂ ಒಬ್ಬ ಸ್ತ್ರೀಯಳೇ ಎಂಬುದನ್ನು ನೆನೆದರೆ ಇದು ಪುರುಷ ಪ್ರಧಾನ ಸಮಾಜ ಆಕ್ರೋಶವೆಂಬ ಭ್ರಮೆ ನೀಗುತ್ತದೆ. ಸ್ತ್ರೀಯರಿಗೆ ಎಲ್ಲಕ್ಕಿಂತ ಗಂಡನೇ ಮುಖ್ಯ ಅವನೇ ಗತಿ ಎಂದು ಹೇಳಿ ಈಗ ವನವಾಸಕ್ಕೆ ಹೊರಟು ನಿಂತ ಈ ದುರ್ಗತಿಯ ನಿನ್ನ ಗಂಡನನ್ನು ಯಾವ ಕಾರಣದಿಂದಲೂ ಅವಮಾನಿಸಬೇಡ ಎಂದು ಉಪದೇಶಿಸುತ್ತಾಳೆ.

ತನ್ನ ಮಗ 'ದೇವಸಮ'ನೆಂದೂ, ಈಗ ಅವನು ನಿರ್ಧನ ಹಾಗೂ ಪ್ರವ್ರಾಜಿತನೂ ಆದವನೆಂದು ಸಂಕಟದಿಂದ ಕೌಸಲ್ಯೆ ವರ್ಣಿಸುತ್ತಾಳೆ. ಸೀತೆಗೆ ಎಂಥ ಆಪತ್ಕಾಲದಲ್ಲಿಯೂ 'ನೀನು ನನ್ನ ಮಗನ ಕೈಬಿಡಬೇಡ' ಎನ್ನುವಲ್ಲಿ ಓದುಗರ ಹೃದಯ ಕಂಬನಿ ಮಿಡಿಯುತ್ತದೆ.

ಇದಕ್ಕೆ ಸೀತೆ ಕೊಡುವ ಉತ್ತರ ಭಾರತೀಯ ಸ್ತ್ರೀತ್ವದ ಕಲ್ಪನೆಯ ಒಂದು ಅತ್ಯುನ್ನತ ಮಾದರಿಯೇ ಇದೆ. ತಾಯಿ । ಗಂಡನೊಡನೆ ಹೇಗೆ ಬಾಳಬೇಕೆಂಬುದನ್ನು ನಾನು ಚೆನ್ನಾಗಿ ಅರಿತಿದ್ದೇನೆ. ಈ ಕುರಿತು ಗುರುಹಿರಿಯರಿಂದ ಕೇಳಿದ್ದೇನೆ. ಅಸಜ್ಜನರೊಡನೆ ನನ್ನನ್ನು ಸೇರಿಸಬೇಡ. ಧರ್ಮಬಿಟ್ಟು ಚಲಿಸುವವಳೂ ನಾನಲ್ಲ. ಚಂದ್ರನನ್ನು ಬಿಟ್ಟ ಅದರ ಪ್ರಭೇ ಬೇರೆಯಾಗಿರಬಲ್ಲದೇ? ತಂತಿಯೇ ಇಲ್ಲದ ವೀಣೆ ನುಡಿಯುವುದೇ? ಚಕ್ರವೇ ಇಲ್ಲದ ರಥ ಉರುಳುವುದೇ? ಸ್ತ್ರೀಯರಿಗೆ ನೂರು ಗಂಡು ಮಕ್ಕಳಿದ್ದರೂ ಅವಳು ಗಂಡನ ಅಧೀನದಲ್ಲೇ ಅವನ ಮರ್ಯಾದೆಯೊಳಗೆ, ಅವನ ಸುಖದೊಡನೆಯೇ ಬಾಳಬೇಕಾದುದು ನ್ಯಾಯ. ತಂದೆ-ತಾಯಿ ಮಕ್ಕಳು ಎಷ್ಟು ಸುಖ, ಹಣ, ಭೋಗ ಕೊಡಬಲ್ಲರು? ಅಮಿತ ಸುಖ-ಭೋಗಾದಿಗಳನ್ನು ಕೊಡುವ ಗಂಡನನ್ನು ಯಾವ ಉತ್ತಮ ಸ್ತ್ರೀ ತಾನೇ ಪೂಜಿಸಲಾರಳು? ತಾಯಿ ನಾನು ಜನಿಸಿದ ಮನೆಯಲ್ಲೂ ಜೇಷ್ಠಪುತ್ರಿ, ಹೊಕ್ಕ ಮನೆಯಲ್ಲೂ ಹಿರಿಯ ಸೊಸೆ, ಧರ್ಮಗಳಲ್ಲಿ ಮೇಲಿನವು. ಕೆಳಗಿನವುಗಳನ್ನು ಚೆನ್ನಾಗಿ ಕೇಳಿ ತಿಳಿದಿದ್ದೇನೆ. ಸ್ತ್ರೀಯರಿಗೆ ಗಂಡನೇ ದೈವವೆಂಬುದನ್ನು ಅರಿತ ನಾನು ಪತಿಯನ್ನು ಅವಮಾನ ಮಾಡುವಳೇ?

ಸ್ತ್ರೀ-ಪುರುಷರು ಒಬ್ಬರಿಗೊಬ್ಬರು ಸಮರ ಅಲ್ಲ. ವಿಷಮರೂ ಅಲ್ಲ. ಇಬ್ಬರೂ ಕೂಡಿಯೇ ಒಂದು ವ್ಯಕಿತ್ವ. ಈ ಸಮಾಸಮ ಪ್ರಶ್ನೆಗಳನ್ನು ಮರೆತೇ ಇಬ್ಬರೂ ತ್ಯಾಗದಿಂದ ಅರ್ಪಣಾಭಾವದಿಂದ ನಿರ್ಮಿಸಿ ಪೋಷಿಸಬೇಕಾದದ್ದು ಕುಟುಂಬ ಎಂಬುದೇ ಭಾರತೀಯ ಸನಾತನ ಮೌಲ್ಯ.

ತನ್ನೊಡನೆ ಸೀತೆ ಕಾಡಿಗೆ ಬರುವುದು ಧರ್ಮವಲ್ಲ ಎಂದ ರಾಮನಿಗೇ ಸೀತೆ ಹೇಳುವ ಮಾತು –

> **"ಕಿಮಿದಂ ಭಾಷಸೇ ರಾಮ । ವಾಕ್ಯಂ ಲಘುತಯಾ ಧ್ರುವಂ ।**
> **ತ್ವಯಾ ಯದಪಹಾಸ್ಯಂ ಮೇ ಶ್ರುತ್ವಾ ನರವರಾತ್ಮಜ ॥**
> **ಆರ್ಯಪುತ್ರ ! ಪಿತಾ ಮಾತಾ ಭ್ರಾತಾ ಪುತ್ರಸ್ತಥಾ ಸ್ನುಷಾ ।**
> **ಸ್ವಾನಿ ಪುಣ್ಯಾನಿ ಭುಂಜನಾ ; ಸ್ವಂಸ್ವಂ ಭಾಗ್ಯ ಮುಕ್ತಾಸತೇ ॥**
> **ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ।"**[೦೩]

ಆರ್ಯಪುತ್ರ ! ಶ್ರೀರಾಮ ಪ್ರಭು ! ಇವೇನು ಇದು ಲಘುವಾಗಿ ನೀವಾಡುವ ಈ ಹುಡುಗಾಟಿಕೆಯ ಮಾತುಗಳು ತಂದೆ, ತಾಯಿ, ಸೋದರ, ಮಗ, ಸೊಸೆ ಇವರೆಲ್ಲ ಅವರವರ ಪುಣ್ಯ ಸಂಪಾದಿತ ಫಲಗಳನ್ನು, ದೇವರು ಅವರವರಿಗೆ ಸಲ್ಲಬೇಕಾಗಿ ಕೊಟ್ಟ ಭಾಗ್ಯಫಲವನ್ನು ಉಣ್ಣುವರಷ್ಟೇ! ಆದರೆ ಹೆಂಡತಿಯೊಬ್ಬಳಿಗೆ ಮಾತ್ರ ಗಂಡನ ಭಾಗ್ಯದಲ್ಲೂ ಭಾಗವುಂಟಲ್ಲವೇ?

ಅನಸುಯಾ ದೇವಿಯೊಡನೆ ಸೀತೆ ಮಾತನಾಡುವಾಗನೆ ಅವಳ ನಡತೆಯನ್ನು ಕೊಂಡಾಡುತ್ತಾಳೆ ಅಮ್ಮಾ ಸೀತೆ! ನೀನು ಗಂಡನೊಡನೆ ಕಾಡಿಗೆ, ಹೀಗೆ ಬಂಧು ಜನರನ್ನು ತೊರೆದು ಅರಮನೆಯ ಸುಖ, ಅಂತಸ್ತು, ಸಮೃದ್ಧಿಗಳನ್ನು ವಿಸರ್ಜಿಸಿ, ರಾಮಾನುವರ್ತಿಯಾಗಿ ಬಂದುದು ಭಾಗ್ಯ. ನಗರದಲ್ಲಿರಲಿ, ಹಳ್ಳಿಯಲ್ಲಿರಲಿ, ಕಾಡಲ್ಲಿರಲಿ, ಅವನು ಶುಭಾಚಾರಿಯೋ, ಅಶುಭಾಚಾರಿಯೋ, ಯಾವ ಸ್ತ್ರೀಗೆ ಗಂಡನು ಪ್ರೀಯನಾಗಿರುವನೋ ಅವಳಿಗೆ ಉತ್ತಮ ಲೋಕಪ್ರಾಪ್ತಿಯುಂಟು. ಗಂಡನಿಗಿಂತ ಹೆಂಡತಿಗೆ ವಿಶಿಷ್ಟನಾದ ಬೇರೆ ಬಂಧುವೇ ಇಲ್ಲವೆನ್ನುತ್ತಾಳೆ.

ಸೀತೆಯನ್ನು ಆ ವರೆಗೆ ಕಣ್ಣಿಂದ ಕಾಣದ ಆಗ ತಾನೇ ಕಂಡ ಹನುಮಂತನಿಗೂ ಇವರಿಬ್ಬರ ಪ್ರೀತಿಯ ಆಳದ ಅರಿವಾಯಿತೆಂದು ರಾಮಾಯಣ ಹೇಳುತ್ತದೆ. ಆ ವರೆಗೆ ಕೇವಲ ರಾಮಚಂದ್ರನೋಬ್ಬನೇ ಪಡುತ್ತಿದ್ದ ವಿರಹ ಯಾತನೆಯನ್ನು ಕಣ್ಣಿಂದ ಕಂಡ ಈ ಬ್ರಹ್ಮಚಾರಿಗೆ ಈ ವಿವಾಹಿತರ ಪಾಡೇ ಇಷ್ಟು ಎಂಬ ತಿರಸ್ಕಾರ ಮೂಡಿರಬಹುದು.[೩]

ಸೀತೆಯ ಉಜ್ವಲ ಪಾತಿವೃತಕ್ಕೆ ಹನುಮಂತ ಬೆರಗಾಗುತ್ತಾನೆ.

ಸ್ತ್ರೀಯರಿಗೆ ಗಂಡನೊಬ್ಬನೇ ಮಿಕ್ಕೆಲ್ಲ ಒಡವೆಗಳಿಗಿಂತ ಉತ್ತಮಭೂಷಣ. ಅಂಥ ಗಂಡ ಸಮೀಪವಿಲ್ಲದೆ ಇವಳು ಈಗ ತನ್ನ ಶೋಭೆಯನ್ನು ಕಳೆದುಕೊಂಡಂತಾಯಿತು ಎಂದು ಉದ್ಗರಿಸುತ್ತಾನೆ. ಹಿಂದೆ ಶ್ರೀರಾಮನ ಸ್ಥಿತಿಯನ್ನು ಕಂಡು ಗೃಹಸ್ಥರ ವಿರಹಾವಸ್ಥೆಯ ಬಗ್ಗೆ ತಿರಸ್ಕಾರ ಮೂಡಿದ್ದು ತನಗೆ ಈಗ ತುಂಬ ಅನುಕಂಪ ಉಂಟಾಗುತ್ತದೆ. ರಾಮನೂ ಸೀತೆಯನ್ನು ಅಗಲಿ ಪಡಲಾರದಷ್ಟು ಕಷ್ಟಪಟ್ಟಿದ್ದಾನೆ. ಮತ್ತೊಬ್ಬನಾಗಿದ್ದರೂ ಈ ವೇಳೆಗೆ ಸತ್ತೇ ಹೋಗಿರಬೇಕಾದ ಪರಿಸ್ಥಿತಿಯಲ್ಲಿ ಇತ್ತ ಸೀತೆಯೂ ಬದುಕಿದ್ದಾಳೆ, ಅತ್ತ ರಾಮನೂ ಬದುಕಿದ್ದಾನೆ!! ಇದರ ಮರ್ಮ ಏನೆಂದು ಮಾರುತಿ

[illegible]

[illegible]

[illegible]

[illegible]

[illegible]

[illegible]

[illegible]

ಚಿಂತಿಸಿ ಉತ್ತರ ಕಂಡುಕೊಂಡು ಹಿಗ್ಗುತ್ತಾನೆ! ಸ್ವೇಚ್ಚೆಯಿಂದ ಯೋಗ ಕ್ರಮದಲ್ಲಿ ಪ್ರಾಣ ತ್ಯಾಗ ಮಾಡುವವರು ಅನುಸರಿಸಬೇಕಾದ ಕ್ರಮವೊಂದಿದೆ.

"ವಾಲ್ಮೀಕಿ ಮುನಿ ಹೇಳುವಂತೆ ಸೀತಾಸ್ವಯಂವರದ ಕಾಲಕ್ಕೆ ಶ್ರೀರಾಮನಿಗೆ ೧೨ ವರ್ಷ ವಯಸ್ಸಾಗಿತ್ತು. ವನವಾಸಕ್ಕೆ ಹೊರಟಾಗ ೨೫ ವರ್ಷ. ಸೀತೆಗೆ ೧೮ ವರ್ಷವಾಗಿತ್ತೆಂದು ಅವಳೇ ರಾವಣ ಸನ್ಯಾಸಿಯೊಡನೆ ಹೇಳುತ್ತಾಳೆ."[೧೪]

ಸೀತಾ ಸ್ವಯಂವರ ವಾಲ್ಮೀಕಿ ರಾಮಾಯಣದಲ್ಲಿ ಒಂದೇ ಒಂದು ದಿನ ಲೋಕದ ಎಲ್ಲ ಅರಸರ ಎದುರಿಗೆ ನಡೆದು ಮುಗಿಯಲಿಲ್ಲ! ರಾವಣ ಬಾಣಾಸುರ ಕಾರ್ತವೀರ್ಯ ಋಷಿಗಳು, ಇತ್ತ ರಾಮಲಕ್ಷ್ಮಣರು, ಎಲ್ಲ ಒತ್ತಟ್ಟಿಗೆ, ಒಂದೇ ದಿನ, ಒಂದೇ ಸಭೆಯಲ್ಲಿ ಸೇರಿ ಅದನ್ನು ನಡೆಸಿದವರಲ್ಲ! ಶ್ರೀರಾಮ ಮಿಥಿಲೆಗೆ ಬರುವ ಎಷ್ಟೋ ಮೊದಲು ಅಂಥದೊಂದು ಧರ್ಮಯಜ್ಞ ಸ್ವಯಂವರ ನಡೆದಾಗಿತ್ತು. ಬೆಳೆಯುತ್ತಿದ್ದ ಸೀತೆಗೆ ಅನೇಕ ರಾಜರು ಕೈಚಾಚಿ ಆಸೆಪಟ್ಟು, ಜನಕ ಶಿವಧನುಸ್ಸನ್ನು ಪಣವಾಗಿಟ್ಟು. ಅದು ಅವರಾರಿಗೂ ಬಗ್ಗದೇ, ತಮ್ಮನ್ನು ಅಪಮಾನಿಸಲೆಂದೇ ಜನಕ ಈ ತಂತ್ರ ಹೂಡಿದ್ದಾಗಿ ಅವರು ಭಾವಿಸಿ ಒಟ್ಟಿಗೆ ಮಿಥಿಲೆಯನ್ನು ಮುತ್ತಿ ಒಂದು ವರ್ಷವಾದರೂ ಜನಕ ಬಗ್ಗದೇ ಅವರೆಲ್ಲ ಹತಾಶರಾಗಿ ತಮ್ಮ ತಮ್ಮ ಊರುಗಳಿಗೆ ಮರಳಿದ್ದರು! ದೇವತೆಗಳೂ ಜನಕನ ದಾರ್ಢ್ಯಕ್ಕೆ ಮೆಚ್ಚಿ ಚತುರಂಗಬಲವನ್ನು ಅನುಗ್ರಹಿಸಿದರು. ಆ ದೊರೆಗಳು ಯಾರುಯಾರೆಂದು ವಾಲ್ಮೀಕಿ ಬರೆಯಲಿಲ್ಲ. ಅದರಲ್ಲಿ ರಾವಣನೂ ಸೇರಿದ್ದನೋ ಗೊತ್ತಿಲ್ಲ. ಒಟ್ಟಿನಲ್ಲಿ ಆ ಸ್ವಯಂವರ ಮುಗಿದಿತ್ತು.

ದಶರಥನ ಕುಮಾರ ಶಿವಧನುಸ್ಸನ್ನು ಎತ್ತಿದಾಗ ಅವನ ವೀರ್ಯವೆಂಥದ್ದೆಂದು ಜಗತ್ತಿಗೆ ತಿಳಿಯಿತು. ಇದೊಂದು ಅದ್ಭುತ! ನಾನು ಹೀಗೆ ಅದನ್ನು ನಿರೀಕ್ಷಿಸಿರಲಿಲ್ಲ. ನನ್ನ ತರ್ಕಕ್ಕೆ ಮೀರಿದ ವೃತ್ತಾಂತ ಇದಾಗಿದೆ. ನನ್ನ ಮಗಳು ನನ್ನ ಜನಕ ಕುಲಕ್ಕೆ ಹೊಸ ಕೀರ್ತಿ ತರುವವಳಾದಳು. ರಾಮನ ಕೈಹಿಡಿದು ಇದು ಸಿದ್ಧಿಸಿತು ಎನ್ನುತ್ತಾಳೆ. ಮುಂದೆ ವಿವಾಹ ವೈಭವ ಪ್ರಸಿದ್ಧವಾಗಿದೆ. ಹೀಗೆ ವಾಲ್ಮೀಕಿ ರಾಮಾಯಣದ ಈ ಪ್ರಸಂಗ ಬಹುಗಂಭಿರವೂ, ಅರ್ಥಗರ್ಭಿತವೂ, ನೈಜವೂ ಆಗಿ ಮೂಡಿಬಂದಿದೆ.

ವಾಲ್ಮೀಕಿಯಲ್ಲಿ ಶ್ರೀರಾಮ ಧನುಸ್ಸನ್ನು ಮುರಿದರೂ ತಕ್ಷಣ ಸೀತಾವಿವಾಹಕ್ಕೆ ಒಪ್ಪುವುದಿಲ್ಲ! ತಂದೆಯನ್ನು ಕೇಳಬೇಕನ್ನುತ್ತಾಳೆ. ಇದು ಭಾರತೀಯ ಶ್ರೇಷ್ಠ ಸಂಸ್ಕೃತಿಯ ಮೌಲ್ಯ.

ಸೀತೆ ರೂಪವತಿ, ಧರ್ಮಜ್ಞೆ, ಶ್ರೀರಾಮನಿಗೆ ಅನುರೂಪಳಾದ ಸತಿ. ಇದಕ್ಕೊಂದು ಉದಾ: ರಾಕ್ಷಸರನ್ನು ಸಂಹರಿ ಋಷಿಗಳಿಗೆ ರಕ್ಷಣೆ ಒದಗಿಸುವುದಾಗಿ ರಾಮ ಪ್ರತಿಜ್ಞೆ ಮಾಡಿದಾಗ. ಸೀತೆ ಅವನನ್ನು ನಯದಿಂದ. ಭಯಭಕ್ತಿಯಿಂದ ಎಚ್ಚರಿಸುತ್ತಾಳೆ. ಸೀತೆಯ ಮಾತುಗಳು ಗಾಂಭಿರ್ಯವನ್ನು ಉದಾರ ದಿಟ್ಟಶೈಲಿಯನ್ನು ಧರ್ಮ ಪ್ರತಿಪಾದನೆಯ ನಿಪುಣತೆಯನ್ನು ಗಂಡನೊಡನೆ ಮಾತನಾಡಬೇಕಾದ ನಯನಾಜೂಕನ್ನು, ವಿನಯವನ್ನು ಕರ್ತವ್ಯ ಪ್ರಜ್ಞೆಯ ಹೊಣೆಗಾರಿಕೆಯ ಭಾವವನ್ನು ಪತಿಗೆ ಪತ್ನಿಯ

[illegible]

[illegible]

[illegible]

[illegible]

[illegible]

[illegible]

ಸಕಾಲದಲ್ಲಿ ಎಚ್ಚರಿಸಬೇಕೆಂಬ ನೀತಿಯು ಇದರಲ್ಲಿ ಅಡಗಿದೆ. ಹೆಂಡತಿಯಾದವಳು ಗಂಡನೆಂಬ ಗಾಡಿಗೆ ಕಟ್ಟಿದ ಮೂಲಕ ಕುದುರೆಯಲ್ಲ. ಇದನ್ನು ಸೀತೆಯ ರೀತಿ ಸ್ಪಷ್ಟವಾಗಿ ತೋರಿಸುತ್ತದೆ. ವಿದ್ಯಾವಂತಳಲ್ಲದವಳು, ಧರ್ಮವಿಚಕ್ಷಣತೆ ಇಲ್ಲದವಳು, ಗಂಡನಿಗೆ ಗುಲಾಮಳಾದವಳು ಹೀಗೆ ಮಾತಾಡಿಯಾಳೇ? ಶ್ರೀರಾಮನಿಗೆ ನಯದಿಂದ ಉಪದೇಶ ಮಾಡಿದವರಾರೂ ರಾಮಾಯಣದಲ್ಲಿಲ್ಲ.

ರಾಮ ಸೀತೆಯರು ಪರಸ್ಪರ ಸಲುಗೆಯಿಂದ ಎಷ್ಟು ಸಲುಗೆಯಿಂದ ನಡೆದುಕೊಳ್ಳತ್ತಿದ್ದರೆಂಬುದಕ್ಕೆ ಒಂದು ಸಾಕ್ಷಿ. ಪ್ರಭುವಾದ ಶ್ರೀರಾಮ ಮುಚ್ಚುಬಾಯಿ ನಿನ್ನ ಕೆಲಸ ನೀನು ನೋಡಿಕೋ! ನಿನಗೆಲ್ಲ ಇದೇಕೆ! ಎಂಬ ರೀತಿಯ ಉದ್ದಂಡ ಗಂಡನಾಗದೆ ನಯದಿಂದಲೇ ವಿಚಾರಿಸಿ ಇದಕ್ಕುತ್ತರಿಸುವುದನ್ನು ನೋಡಿದಾಗ ಈ ಜೋಡಿಯ ದಿವ್ಯಾದರ್ಶ ಎಂಥ ಮೊಂಡ. ಭಂಡ ಕ್ರಾಂತಿ ಪಿತ್ಥನಿಗೂ ಪಿತ್ಥ ಇಳಿಸುತ್ತದೆ. ಸೀತೆ ವೀರಮಹಿಳೆ ಸುಸಂಸ್ಕೃತಿ ಮಾತನಾಡಬೇಕಾದ ಕಾಲದಲ್ಲಿ ದಾಕ್ಷಿಣ್ಯಪರಳಲ್ಲದೆ ಹೇಳಬೇಕಾದುದನ್ನು ದಿಟ್ಟ ಸ್ಪಷ್ಟ ಮಾತುಗಳಲ್ಲಿ ಹೇಳುವ ಸ್ವಭಾವದವಳೆಂಬುದನ್ನು ಈ ಪ್ರಕರಣ ಸ್ಪಷ್ಟಪಡಿಸುತ್ತದೆ.

ಮಾನವೀಯ ದೌರ್ಬಲ್ಯ ದೃಷ್ಟಿಯಲ್ಲಿ ನೋಡಿದಾಗ ಸೀತೆಯಲ್ಲಿ ದುಡುಕು ಸ್ವಭಾವವೂ, ಇತ್ತೆಂಬುದಕ್ಕೆ ಒಂದು ಉದಾಹರಣೆ, ಮಾಯಾಮೃಗ[ಮಾರೀಚ] ಚರ್ಮಕ್ಕೆ ಆಸಿಸಿ ಅದನ್ನು ತಂದುಕೊಡುವಂತೆ ಗಂಡನನ್ನು ಕಾಡಿಸುತ್ತಾಳೆ. ಲಕ್ಷ್ಮಣ ಮೃಗದ ರೂಪದಲ್ಲಿರುವವನು ಮಾರೀಚ ಎಂದು ಎಚ್ಚರಿಸಿದರೂ ಕೇಳದೇ ಹಠವಾದಿಯಂತೆ ಪಟ್ಟುಹಿಡಿಯುತ್ತಾಳೆ. ಅತ್ತ ಕಡೆಗೆ ರಾಮ ಹೋದ ಮೇಲೆ ಕಪಟ ಮಾರೀಚನ ಆರ್ತಧ್ವನಿಯನ್ನು ರಾಮನದೆಂದೇ ಭ್ರಮಿಸಿ, ಲಕ್ಷ್ಮಣನನ್ನು ರಾಮನ ರಕ್ಷಣೆಗೆ ಹೋಗುವಂತೆ ದೂಡುತ್ತಾಳೆ. ಕರ್ತವ್ಯನಿಷ್ಠನಾದ ಆತ ಅಲ್ಲಿಂದ ಕದಲದಾದಾಗ ಅವನನ್ನು ಕಠೋರ ಆಪಾದನೆಗಳಿಂದ ಛೇಡಿಸಿ ಓಡಿಸುತ್ತಾಳೆ. ಅನಾರ್ಯಕರುಣಾರಂಭ ನೃಶಂಸ ಕುಲಪಾಂಸನ ಎಂದೆಲ್ಲ ಹೀಯಾಳಿಸುತ್ತಾಳೆ. ನೀನು ರಾಮನ ಹಿಂದೆ ಬಂದದ್ದು ನನಗಾಗಿಯೇ ಎಂದು ಆರೋಪಿಸುತ್ತಾಳೆ. ರಾಮನನ್ನು ಮುಗಿಸಲು ಭರತನೇ ನಿನ್ನನ್ನು ಗೂಢವಾಗಿ ಪ್ರೇರಿಸಿ ಕಳುಹಿಸರಬೇಕು ಎಂದು ಸೇರಿಸಿದಾಗ ಲಕ್ಷ್ಮಣನ ನಿಷ್ಕಪಟ ಸ್ವಭಾವ, ಉಗ್ರವಾದ ಬ್ರಹ್ಮಚರ್ಯ ನಿಷ್ಠೆ, ಸಹಜ ಕೈಂಕರ್ಯಭಾವ ಎಲ್ಲ ಆ ವರೆಗೂ ತಿಳಿದ ಆಕೆ ಹಾಗೆನ್ನುತ್ತಾಳೆಂದರೆ ನಂಬುವುದೂ ಕಷ್ಟವೆನಿಸುತ್ತದೆ. ಮಾನವ ಕುಲಕ್ಕೆ ಆದರ್ಶಪ್ರಾಯಳಾದವಳ ಮಾತು ಹೀಗೆಯೇ! ಎಂದು ಅಚ್ಚರಿಪಡುವವರಿಗೆ ಲಕ್ಷ್ಮಣ ಮಾನವೀಯ ನೆಲೆಯಲ್ಲಿ ಉತ್ತರಿಸುತ್ತಾನೆ. ಇದು ಸ್ತ್ರೀಯರ ಸ್ವಭಾವ, ತಮ್ಮ ಕೆಲಸ ಆಗಲು ಏನು ಹಠವಾದರೂ ಸಾಧಿಸುತ್ತಾರೆ. ಅವರಿಗೆ ಧರ್ಮ, ನಿಯಮ, ಎಂಬುದಿಲ್ಲ. ಚಪಲತೆಯೊ ಅವರ ಸ್ವಭಾವ, ತೀಕ್ಷ್ಣ ಮಾತು ಅವರಿಗೆ ಸಹಜ. ಮನೆಮುರುಕರು ಈ ಸ್ತ್ರೀಯರೆಂದು ಟೀಕಿಸುತ್ತಾನೆ.

ಸನ್ಯಾಸಿ ವೇಷದಲ್ಲಿ ಬಂದವನು ರಾವಣನೇ ಎಂದು ತಿಳಿದ ಮೇಲೆ ಸೀತೆ ನಡುಗಿ ಮೊದಲು ನೆನೆಸಿಕೊಳ್ಳುವುದು ಲಕ್ಷ್ಮಣನನ್ನು! ಅವನ ಮಾತು ಕೇಳದೇ ಎಂಥೆಂಥ ಮಾತುಗಳಿಂದ ಅವನ ಮನ ನೋಯಿಸಿದೆನಲ್ಲ! ಎಂಬ ಪರಿತಾಪಕ್ಕೆ ಅವಳು ಮಾತುಗಳೇ ಸಾಕ್ಷಿ. ಇದು ಅಪರೂಪ ಮಾನವ ಸ್ವಭಾವ.

ಇವಳನ್ನು ರಾವಣ ಅಂತರಿಕ್ಷದಲ್ಲಿ ಹೊತ್ತೊಯ್ದಾಗ ಮೊದಲು "ರಾಮ" ಎಂದವಳೇ ಎರಡನೆ ಮಾತಿನಲ್ಲೇ ಲಕ್ಷ್ಮಣನನ್ನು ಸಹಾಯಕ್ಕೆ ಕರೆಯುತ್ತಾಳೆ. ಅವನ ಗುಣವರ್ಣನೆ ಮಾಡುವಲ್ಲಿ ಪಶ್ಚಾತ್ತಾಪದ ಧ್ವನಿ ಇದೆ. ಇಲ್ಲಿಂದ ಮರಳಿ ರಾಮನನ್ನು ಕೂಡುವ ವರೆಗೆ ಪಾಶ್ಚಾತ್ತಾಪ ಇವಳನ್ನು ಬೆನ್ನಟ್ಟಿ ಸುಡುತ್ತದೆ. ಹನಮಂತನನ್ನು ಕಂಡ ಮೇಲೆ ಬಹು ಅರ್ಥಗರ್ಭಿತ ಮಾತೊಂದನ್ನು ಆಡುತ್ತಾಳೆ. ಹಿಂದೆ ನನ್ನ ಸಲುವಾಗಿ ಕಾಗೆಯ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಭು ಶ್ರೀರಾಮಚಂದ್ರ ಬಿಟ್ಟಿದ್ದುಂಟು. ಈಗ ಇಷ್ಟು ದಿನ ಒಬ್ಬ ರಾಕ್ಷಸ ತನ್ನನ್ನು ಆ ರಾಮನಿಂದ ಅಗಲಿಸಿದ್ದರೂ ಸಹಿಸಿರುವುದೇಕೆ?

ತನ್ನ ತಮ್ಮನ ಮನ ನೋಯಿಸಿದವಳು ಎಲ್ಲಾದರೂ ಹಾಳಾಗಿ ಹೋಗಲಿ ಎಂಬ ಉಪೇಕ್ಷೆಯೇ? ಎಂಬುದು ಧ್ವನಿ! ಅಥವಾ ರಾಮ ಉಪೇಕ್ಷಿಸಿದರೂ ಧರ್ಮವನ್ನು ತಿಳಿದವನಾದ ಲಕ್ಷ್ಮಣನಾದರೂ ತನ್ನ ರಕ್ಷಣೆಗೆ ಇತ್ತ ಬರಬಾರದೇ ? ಈಗವನು ಇವಳನ್ನು ಕಾಡಲು ಬಾರದಿರುವ ಅರ್ಥವೇನು ? ತನ್ನನ್ನು ಬೈಯ್ದವಳು ಎಲ್ಲಾದರೂ ಹಾಯಲಿ ಎಂಬ ಕೋಪವೇ ? ಅಸಾಮಾನ್ಯ ಪೌರುಷವಂತರಾದ ಅಣ್ಣತಮ್ಮಂದಿಬ್ಬರೂ ಬೇಕೆಂದೇ ಕಣ್ಣೆತ್ತಿ ನೋಡದೇ ತನ್ನನ್ನು ಕೈಬಿಟ್ಟರು ಎಂದು ಸೀತಾದೇವಿ ತುಂಬಾ ನೊಂದು ನುಡಿಯುತ್ತಾಳೆ.

ತನ್ನನ್ನು ಕಾಣಲು ಬಂದ ಆಂಜನೇಯನನ್ನು ಅಶೋಕ ವನದಲ್ಲಿ ಅವನಾರೆಂಬುದು ದೃಢಪಟ್ಟ ಮೇಲೆ ಅವನನ್ನು ಮುಕ್ತ ಕಂಠವಾಗಿ ಕೋಂಡಾಡುತ್ತಾಳೆ.

"ವಿಕ್ರಾಂತಸ್ತ್ವಂ! ಸಮರ್ಥಸ್ತ್ವಂ॥ ಪ್ರಜ್ಞಸ್ತ್ವಂ॥ ನಾನ ರೋತ್ತಮ॥"[೧೫] ಎಂದು ಶ್ಲಾಘಿಸುವಲ್ಲಿ ಅವಳ ಭಾವ ಪರವಶತೆಯ ಅರಿವು ನಮಗಾಗುತ್ತದೆ. ಹಿಗ್ಗುವಾಗ ಹಿಗ್ಗಿ, ಕುಗ್ಗುವಾಗ ಆತ್ಮಹತ್ಯಗೆ ಪ್ರಯತ್ನಿಸುವುದು ಇದು ಅವಳ ಭಾವ ಪರವಶತಾ ಸ್ವಭಾವಕ್ಕೆ ಕನ್ನಡಿ ಹಿಡಿಯುತ್ತದೆ. ಆ ಭೇಟಿಯಲ್ಲಿ ರಾಮ ಯೋಗಕ್ಷೇಮುವನ್ನು ಒಂದೇ ಉಸಿರಿಗೆ ಅನೇಕ ಮಾತುಗಳಲ್ಲಿ ಕೇಳುವ ಇವಳ ರೀತಿಯೇ ಇದಕ್ಕೆ ಸಾಕ್ಷಿ.

ಅಶೋಕ ವನದಲ್ಲಿರುವ ಹತ್ತೂ ತಿಂಗಳು ಸೀತೆ ಒಂದು ದಿನವೂ ಸಂಧ್ಯಾವಂದನೆಯನ್ನು ಬಿಡಲಿಲ್ಲ. ಅದು ತ್ರೇತಾಯುಗ. ಆಗ ಸ್ತ್ರೀಯರಿಗೆ ವೇದಾಧಿಕಾರವಿತ್ತು ಎಂದು ಒಂದು ವಿವರಣೆ. ಸೀತೆ ಸಂಧ್ಯಾವಂದನೆ ಮಾಡಿದ ರೀತಿ ಹಾಗೂ ಮಂತ್ರೋಚ್ಚಾರಣೆ ಮಾಡಿದಳೆಂಬುದನ್ನು ರಾಮಾಯಣ ಹೇಳಿಲ್ಲವಾದ್ದರಿಂದ ಇದು ಕೇವಲ ಮಾನಸಿಕ ಅನುಷ್ಠಾನದ ರೀತಿ.

ಸೀತೆಯಷ್ಟು ಮಾನಸಿಕ ಮತ್ತು ಕಾಮುಕ ಯಾತನೆಯನ್ನು ಅನುಭವಿಸಿದವರು ದ್ರೌಪದಿಯನ್ನು ಬಿಟ್ಟರೆ, ತುಂಬಾ ವಿರಳ. ರಾವಣನನ್ನು ದುರ್ಯೋಧನನನ್ನು ನಿಂದಿಸದೇ ಈ ಎರಡೂ ಅನರ್ಥದ ಕಥೆಗಳಿಗೆ ಈ ಸ್ತ್ರೀಯರೇ ಮೂಲವೆಂದು ನಿಂದಿಸುವವರಾಗಿದ್ದಾರೆ.

೭. ಮಂಡೋದರಿ :

ಮಂದವಾದ (ತೆಳುವಾದ) ಉದರ (ಹೊಟ್ಟೆ) ಯನ್ನುಳ್ಳವಳು ಎಂಬುದೇ ಈ ಮಂಡೋದರಿ ಶಬ್ಧದ ಅರ್ಥ. ಇದು ಸೌಂದರ್ಯವಾಚಕ ಪದ ಈ ಹೆಸರಿನ ರಾಮಾಯಣದ ಪ್ರಸಿದ್ಧ ವ್ಯಕ್ತಿಯೋ ರಾವಣನ ಹೆಂಡತಿಯಾದವಳು ಇವಳು ಮಯನೆಂಬ ದಾನವ ಮತ್ತು ಹೇಮಾ ಎಂಬ ಅಪ್ಸರೆಯ ಮಗಳು.

ಒಂದು ಭೇಟಿಯ ಕಾಲದಲ್ಲಿ ರಾವಣ ದಾನವ ವಂಶದ ಮಯನನ್ನು ರಾವಣ ಸಂಧಿಸಿದ್ದು ಎಲ್ಲಿ ಎಂಬುದನ್ನು ರಾಮಾಯಣ ಹೇಳುವುದಿಲ್ಲ. ಮಯನೊಡನಿದ್ದ ಈ ಕನ್ಯಾಮಣಿಯನ್ನು ಕಂಡು ಚಪಲದಿಂದ ರಾವಣ ಅವನ ಪರಿಚಯ ತಿಳಿಯಲು ಬಯಸುತ್ತಾನೆ. ಮಯ ತನ್ನ ಕಥೆಯನ್ನೆಲ್ಲ ಹೇಳುತ್ತಾನೆ, ಮಗಳಿಗೊಬ್ಬ ಅಳಿಯನನ್ನು ಹುಡುಕುತ್ತಿರುವುದಾಗಿಯೂ ತಂದೆಯು ಹೆಣ್ಣುಮಕ್ಕಳನ್ನು ಪಡೆಯುವದೇ ದುಃಖಪಟ್ಟತೆಂದೂ, ಹುಟ್ಟಿದ ವಂಶ ಸೇರುವ ವಂಶ ಈ ಎರಡನ್ನೂ, ಅವುಗಳ ಮಾನಮರ್ಯಾದೆಯನ್ನು ಸಂಶಯದಲ್ಲಿ ಅವಳಿಡುವಳೆಂದೂ, ಸರಿಯಾಗಿ ಪಡೆದುಕೊಂಡರೆ ಮಾತ್ರ ಉಭಯಕುಲಕ್ಕೂ ಕೀರ್ತಿತರುವಳೆಂದೂ 'ಮಯ' ಹೇಳುತ್ತಾನೆ. ಈ ಮಾತುಗಳನ್ನು ನೋಡಿದರೆ ಮಯ ಮರ್ಯಾದಸ್ಥನೂ ಸುಂಸಂಸ್ಕೃತನೂ ಆಗಿದ್ದನೆನ್ನುವುದು ತಿಳಿಯುತ್ತದೆ.

ಇದನ್ನೆಲ್ಲ ಕೇಳಿ ರಾವಣ ತನ್ನ ಪರಿಚಯ ಮಾಡಿಕೋಳ್ಳುತ್ತಾನೆ. ತನ್ನ ಹೆಸರೇ ದಶಗ್ರೀವ ಎನ್ನುತ್ತಾನೆ. ಚತುರ್ಮುಖ ಬ್ರಹ್ಮನ ಮೂರನೆಯ ಮಗನಾದ ವಿಶ್ರವಸನ ಮಗನಾದ ತಾನು ಪಾಲಸ್ತ್ಯ ಗೋತ್ರದವನೆಂದೂ ಸಹ. ಇವನು ಮಹರ್ಷಿಯ ಸಂತಾನವೆಂದರಿತ ಮಯ ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡಲು ಆಶಿಸುತ್ತಾನೆ. ತಂದೆ ಬಯಸುವುದು ಸತ್ಕುಲವನ್ನಲ್ಲವೆ ? ರಾವಣ ಒಪ್ಪಿ ಮಂಡೋದರಿಯ ಕೈ ಹಿಡಿಯುತ್ತಾನೆ. ಈ ವಿವಾಹ ಅಗ್ನಿಸಾಕ್ಷಿಯಾಗಿ ನಡೆಯತ್ತದೆ. ರಾವಣನನ್ನು ಮದುವೆಯಾದ ಮಂಡೋದರಿ' ಇಂದ್ರಜಿತನೆಂದು ಮುಂದೆ ಖ್ಯಾತನಾಗುವ ಮೇಘನಾದನೆಂಬ ಹೆಸರಿನ ಮಗನನ್ನು ಹಡೆಯುತ್ತಾಳೆ.

'ಮಂಡೋದರಿ' ತುಂಬಾ ಚಲುವೆಯಾಗಿದ್ದಳೆಂದು ತೋರುತ್ತದೆ'. ಕೈಕಾಲ ಮೈ ತುಂಬಿಕೊಂಡು, ರೂಪಿಣಿಯಾಗಿ ಮೈಬಣ್ಣ ಚಿನ್ನದಂತೆ ಕೆಂಪಾಗಿರುತ್ತದೆ. ಅನೇಕ ವಿಭೂಷಣಗಳನ್ನು ಧರಿಸಿದ್ದ ಇವಳು ತಾನು ಮಲಗಿದ್ದ ಆ ಅಂತಃಪುರಕ್ಕೆ ಅಲಂಕಾರಪ್ರಾಯಳಾಗಿದ್ದಳೆಂದು ಹನುಮಂತ ಹೇಳುತ್ತಾನೆ.

ಅವಳನ್ನು ಕಂಡು ಇವಳೇ ಸೀತೆ ಎಂಬ ಭ್ರಮೆಯೂ ಆಂಜನೇಯನಿಗುಂಟಾಗುತ್ತದೆ! ಅವನು ಸೀತೆಯನ್ನು ಕಣ್ಣಿಂದ ಕಂಡಿರಲಿಲ್ಲ; ರಾಮ ಹೇಳಿದ್ದ ರೂಪಲಕ್ಷಣಗಳನ್ನೆಲ್ಲ ನೆನೆದು ರಾವಣ ದುಷ್ಟಗಂಡನೆಂಬುದನ್ನು ಮಂಡೋದರಿ ಚೆನ್ನಾಗಿ ಬಲ್ಲವಳೆಂದು ರಾಮಾಯಣ ನಿರೂಪಿಸುತ್ತದೆ. ಸೀತಾದೇವಿಯನ್ನು ಕದ್ದು ತಂದದ್ದು, ಸರಿಯಲ್ಲವೆಂದೂ ಅವಳನ್ನು ಮತ್ತೆ ರಾಮನಿಗೇ ಒಪ್ಪಿಸತಕ್ಕದ್ದೆಂದೂ ಅವಳು ಪದೇಪದೇ ಬುದ್ಧಿ ಹೇಳಿದ್ದಳು ! ಅಂಥದ್ದೊಂದು ನೇರ ಪ್ರಸಂಗವನ್ನು ರಾಮಾಯಣದ ಕವಿ

[illegible]

[illegible]

[illegible]

[illegible]

[illegible]

ಚಿತ್ರಿಸಲಿಲ್ಲವಾದರೂ ಅವಳು ಸಾಕಷ್ಟು ಬುದ್ಧಿ ಹೇಳಿಯಾಗಿತ್ತೆಂಬ ಸೂಚನೆಗಳು ಇವೆ. ಉದಾಹರಣೆಗೆ ಆಂಜನೆಯನೊಡನೆ ಲಂಕೆಯಲ್ಲಿ ನಡೆಯುತ್ತಿರುವ ಸಮಾಚಾರಗಳನ್ನು ಸೀತಾದೇವಿಯು ಅಲ್ಲಿ ವಿವೇಕಿಗಳು ಉಂಟೆಂದೂ ಅವರು ತನ್ನನ್ನು ರಾಮನಿಗೊಪ್ಪಿಸಿ ಸುಖಿಯಾಗಿರುವಂತೆ ಬೋಧಿಸುತ್ತಿರುವರೆಂದೂ ಹೇಳಿ. ಅವರಾರೆಂದರೆ ವಿಭೀಷಣನೊಬ್ಬನ ಹೆಸರು ಹೇಳಿ ಚಕಾರ ಹಾಕಿರುವಲ್ಲಿ ಈ ಮಂಡೋದರಿಯನ್ನು ಉದ್ದೇಶಿಸಿರಬಹುದು.

ಸೀತೆಯನ್ನು ಅಪಹರಿಸಿ ತಂದ ರಾವಣನಿಗೆ ಮಂಡೋದರಿ ಎಷ್ಟು ಬುದ್ಧಿ ಹೇಳಿದರೂ ಆತ ಕೇಳಲಿಲ್ಲವೆಂದೂ ಹಲುಬುತ್ತಾಳೆ.

ವಾಲ್ಮೀಕಿ ಮುನಿಯು ಇವಳನ್ನು ದಿವ್ಯಜ್ಞಾನ ಸಂಪನ್ನೆಯೆಂದೂ ಲೋಕನೀತಿ ಮರ್ಯಾದೆಗಳಿಗೆ ಬದ್ಧಳಾದವಳೆಂದೂ ಶ್ರೀರಾಮ ಸೀತೆಯರು ಯಾರೆಂಬುದನ್ನರಿತವಳೆಂದೂ ಚೆನ್ನಾಗಿ ಚಿತ್ರಿಸಿರುವನು. ತನ್ನ ಪತಿಯಾದ ರಾವಣ ಸತ್ತಾಗ ಸಾಮಾನ್ಯ ಸ್ತ್ರೀಯಂತೆ ಅಳಲಾರದ ಇವಳು ಗಂಡನ ಗುಣದೋಷಗಳನ್ನು ವಿಮರ್ಶಿಸುತ್ತ ದೋಷಗಳ ನಿಂದಾಪೂರ್ವಕವಾಗಿ, ತರ್ಕಯುಕ್ತವಾಗಿ ಶಾಸ್ತ್ರೀಯವಾಗಿ ಅಳುವ ಅತಿಮಾನುಷ ಸ್ತ್ರೀಯಾಗಿ ಚಿತ್ರಿತಳಾಗಿದ್ದಾಳೆ.

ಶ್ರೀರಾಮ ುಯಾರೆಂಬುದಕ್ಕೆ ಅವಳು ಹೀಗೆ ಹೇಳುತ್ತಾಳೆ. ಜನಸ್ಥಾನದಲ್ಲಿ ಬಹುರಾಕ್ಷಸರಿಂದೊಡಗೂಡಿದ ಖರನು ಎಂದಿಗೆ ರಾಮನೊಬ್ಬನಿಂದಲೇ ಕೊಲ್ಲಲ್ಪಟ್ಟನೋ, ಅಂದೇ ಇವನು ಮನುಷ್ಯನಲ್ಲ ಎಂದು ನನಗೆ ತಿಳಿಯಿತು. ದೇವತೆಗಳೂ ಪ್ರವೇಶಿಸಲಾಗದ ಲಂಕಾನಗರಿಯನ್ನು ಹನುಮಂತ ಎಂದು ಪ್ರವೇಶಿಸಿದನೊ, ಅಂದೆ ನನಗೆ ದುಃಖವಾಗಿತ್ತು. ಘೋರವಾದ ಕಪಿಗಳಿಂದ ಯಾವಾಗ ಮಹಾಸಮುದ್ರದಲ್ಲಿ ಸೇತುವೆ ಕಟ್ಟಲ್ಪಟ್ಟಿತೊ ಆಗಲೇ ನಾನು ಹೃದಯದಲ್ಲಿ ರಾಮನನ್ನು ಮನುಷ್ಯಾತೀತನಿರಬಹುದೇ? ಎಂದು ಸಂದೇಹಿಸಿದೆನೆನ್ನುತ್ತಾಳೆ.

ರಾವಣನ ಹೆಣದೆದುರು ಹೀಗೆ ನುಡಿಯುತ್ತಾಳೆ.

"ಪತಿವೃತಾನಾಂ ನಾಕಸ್ಮಾತ್ ಪತನ್ತ್ಯಶ್ರೂಣಿಭೂತಲೇ"[೧]

ಪತಿವ್ರತೆಯರ ಕಣ್ಣೀರು ಎಂದಿಗೂ ವ್ಯರ್ಥವಾಗಿ ಸುರಿಯಲಾರದು. ಪತಿವ್ರತೆಯಾದ ಸೀತೆಯ ತಪಸ್ಸಿನ ಬಲದಿಂದಲೇ ನೀನು ಈಗ ಸುಡಲ್ಪಟ್ಟು ಬೂದಿಯಾದೆ ಎನ್ನುತ್ತಾಳೆ. ಇವಳು ಧರ್ಮ, ಸತ್ಯ ಸ್ತ್ರೀಧರ್ಮ, ಪಾತಿವ್ರತ್ಯಾದಿ ಮೌಲ್ಯಗಳನ್ನು ನಂಬಿ ಬಾಳಿದ ಮಹಾ ಮಹಿಳೆ ಅಲ್ಲವೆ? ಲಂಕೆಯಲ್ಲಿ ಇಂಥವರಿದ್ದರೆಂಬುದೇ ಅಂದಿನ ಆಶ್ಚರ್ಯ.

ತನ್ನ ಗಂಡನನ್ನು ಅನೇಕ ಯಜ್ಞಗಳನ್ನು ಕೆಡಿಸಿದವನು. ಧರ್ಮದ ವ್ಯವಸ್ಥೆಯನ್ನೇ ಕಿತ್ತೊಗೆದವನೆಂದೂ, ಯುದ್ಧದಲ್ಲೂ ಮಾಯಾ ಸೃಷ್ಟಿಯ ಹಾದಿ ಹಿಡಿದವನೆಂದೂ, ಅನೇಕ ದೇವ, ಅಸೂರ, ಮಾನುಷ್ಯ, ಕನ್ಯಾಪಹಾರ ಮಾಡಿದವನೆಂದೂ ನಿಂದಿಸುವ ಇವಳು ಅವನನ್ನು ಲಂಕೆಯ ರಕ್ಷಕನೆಂದೂ, ನನಗೆ ನಾನು ಭೋಗಕೊಟ್ಟವನೆಂದೂ, ಕೊಂಡಾಡುತ್ತಾಳೆ. ಒಂದೇ ಉಸಿರಿನಲ್ಲಿ

ದುಃಖ ಇವಳ ಮನಸ್ಸಿನ ಸಮತೋಲನವನ್ನು ಕೆಡಿಸಲಿಲ್ಲವೆಂಬುದು ಇಲ್ಲಿ ಸ್ಪಷ್ಟ. ಎಷ್ಟೊಂದು ಪತಿವ್ರತೆಯರ ಮಾನಗೆಡಿಸಿ, ಅವರನ್ನು ವಿಧವೆಯರನ್ನಾಗಿಸಿ, ಸಂಕಟಪಡಿಸಿದ್ದನೋ, ಅವರೆಲ್ಲರ ಶೋಕ ರಾವಣನಿಗೆ ತಟ್ಟಿಯೋ ಈಗ ಅವನಿಗೆ ಈ ದು:ಸ್ಥಿತಿ ಬಂದಿದೆಯೆಂದು ಮಂಡೋದರಿ ಹೇಳುವಲ್ಲಿ ಇತರ ದು:ಖಿತ ಸಂಕಟಸ್ಥಿತಿಯ ಸ್ತ್ರೀಯರ ಬಗ್ಗೆ ಅವಳ ಸಹಾನುಭೂತಿ ವ್ಯಕ್ತವಾಗುತ್ತದೆ.

ಇಂದಿನ ಪ್ರತಿಯೊಬ್ಬರ ಮನೆಮನೆಯಲ್ಲೂ ಇನ್ನೂ ಹೆಂಡತಿಯರಲ್ಲಿ ಅತೃಪ್ತರಾದ ರಾವಣರಿರುವುದು ಈ ಲೋಕದ ರೂಢಿ! ಅಲ್ಲಲ್ಲಿ ಮಂಡೋದರಿಯರಿರುತ್ತಾರೆ! ಬುದ್ಧಿ ಹೇಳಿಯೂ ಆ ಗಂಡಂದಿರು ಕಷ್ಟಕ್ಕೊಳಗಾಗಿ ಸಾಯುತ್ತಾಳೆ! ರಾಮಾಯಣ ಎಂದೂ ಮುಗಿಯದ ಸಾರ್ವತ್ರಿಕ ಕಥಾ ಚಕ್ರ!

೮. ಶಬರಿ :

ಶ್ರೀರಾಮಾಯಣದಲ್ಲಿ ಬರುವ ಶಬರಿಯ ಪಾತ್ರ ತುಂಬಾ ಚಿಕ್ಕದು !

ವಾಲ್ಮೀಕಿ ಈಕೆಯನ್ನು 'ಸಿದ್ಧಾ' ಪರಿಚಿತ ವ್ರತಾ 'ಚಾರುಭಾಷಿಣಿ' ತಾಪಸೀ, ವೃದ್ಧಾ, ಪರಿಚಾರಿಣೀ, ಜಟಿಲಾ, ಚೀರಕೃಷ್ಣಾಜಿನಾಂಬರಾ ಎಂಬ ವಿಶೇಷಣಗಳಲ್ಲಿ ವರ್ಣಿಸಿದ್ದಾರೆ.

ಶಬರಿ ಹಣ್ಣು ಹಣ್ಣು ಮುದುಕಿಯಾಗಿದ್ದಳು. ಗುರು ಶುಶ್ರೂಷೆ ಎಂಬ ವ್ರತವನ್ನು ಅನೇಕ ವರ್ಷಗಳಿಂದ ಮಾಡಿ ಅದರಲ್ಲೇ ಸಿದ್ಧಿ ಹೊಂದಿ, ಇಂದ್ರಿಯನಿಗ್ರಹ ಪಡೆದು ಜೀವನ ಸಿದ್ಧಿಯನ್ನು ಹೊಂದಿದ್ದವಳು. ಅವಳ ಶರೀರವೇ ಅವಳು ಮಾಡಿದ್ದ ತಪಸ್ಸನ್ನು ಹೇಳುತ್ತಿತ್ತು. ತಾನು ಬೇಸರ ಪಡದೇ 'ಮತಂಗ' ರೆಂಬ ಗುರುವಿಗೆ ಹಗಲಿರುಳೂ ಪರಿಪರಿಯಲ್ಲಿ ಸೇವೆ ಮಾಡಿದ್ದು, ಅವರ ಸಂಚಾರಿಣೀ ಆಗಿದ್ದವಳು. ಇವಳ ಉಡುಗೆ ಬರೀ ನಾರು ಮಡಿ, ಹೊದಿಕೆ ಒಂದು ಕೃಷ್ಣಾಜಿನವಾಗಿತ್ತು. ಚಳಿ, ಮಳೆ, ಬಿಸಿಲುಗಳಲ್ಲೇ ಆ ಶರೀರ ಜೀರ್ಣವಾಗಿ ಹೋಗಿತ್ತು. ತಲೆಯೆಲ್ಲ ಜಟೆಯಾಗಿತ್ತು. ಅವಳಿಗೆ ಜೀವನದಲ್ಲಿ ಶ್ರೀರಾಮ ಲಕ್ಷ್ಮಣರನ್ನು ಸಂದರ್ಶಿಸಿ ಆತಿಥ್ಯ ಮಾಡುವುದರ ಹೊರತು ಬೇರಾವ ಕರ್ತವ್ಯವೂ ಗುರಿಯೂ ಇರಲಿಲ್ಲ. ಆ ಗುರಿಯೂ ಗುರೂಪದೇಶದಿಂದ ಬಂದದ್ದು.

ಶಬರಿಗೆ ಮತಂಗರ ಸೇವಾವಕಾಶ ಸ್ವರ್ಗದ್ವಾರವಾಯಿತು. ರಾಮನಿಗಾಗಿ ಅವಳು ಏನು ಅರ್ಪಿಸಿದಳು ? ಅವನೊಡನೆ ಹೇಗೆ ನಡೆದುಕೊಂಡಳು? ಇವಳನ್ನು ನೋಡುತ್ತಲೇ ಶ್ರೀರಾಮಚಂದ್ರನಿಗೆ ಅವಳ ಯೋಗ್ಯತೆಯ ಅರಿವಾಗಿರಬೇಕು ! ಆ ಆಶ್ರಮದ ರಮ್ಯತೆ, ಸ್ವಚ್ಛತೆ, ಅಚ್ಚುಕಟ್ಟು ದಿವ್ಯತೆ, ಶಾಂತತೆಗಳು ಶ್ರೀರಾಮನ ಮನಸೆಳೆದವು ! 'ಶಬರ್ಯಾ ರಮ್ಯಂ ಆಶ್ರಮಂ' ಎನ್ನುತ್ತಾನೆ ಮಹರ್ಷಿ.

ಶಬರೀ ರಾಮಲಕ್ಷ್ಮಣರನ್ನು ಕಂಡೊಡನೆಯೇ ಪ್ರತ್ಯುತ್ಥಾನ ಮಾಡಿ ಕೈಮುಗಿದು, ಪಾದಗಳಿಗೆ

ವಂದಿಸಿ, ಅರ್ಘ್ಯಪಾದ್ಯ ಆಚಮುನೀಯಗಳಿಂದ ಅರ್ಚಿಸಿ, "ಯಥಾವಿಧಿ" ಸ್ವಾಗತಿಸಿದಳು ಎನ್ನುತ್ತಾನೆ ಮಹರ್ಷಿ ವಾಲ್ಮೀಕಿ. ಅಂದರೆ ಹಣ್ಣು ಮುದುಕಿಯಾದರೂ ಶರೀರದಲ್ಲಿ ಅವಳಿಗೆ ಇಂದ್ರಿಯ ಪಟುತ್ವವಿದ್ದಿತು! ಸೋಮಾರಿತನವಾಗಲಿ, ಶಾಸ್ತ್ರಕ್ರಮದ ಅಜ್ಞತೆ, ಅವಜ್ಞೆತೆಗಳಾಗಲಿ ಅಲ್ಲಿ ಸುಳಿಯುವಂತಿರಲಿಲ್ಲ. ಹಿರಿಯಳಾದ ಮುದುಕಿ ರಾಮಲಕ್ಷ್ಮಣರ ಕಾಲುಗಳಿಗೆ ನಮಸ್ಕರಿಸುತ್ತಾಳೆ.

ಶ್ರೀರಾಮನಿಗಾಗಿ ಕಾಡಿನಲ್ಲಿ ಬೆಳೆದಿದ್ದನ್ನೇ ಶಬರಿ ಕೊಟ್ಟಳು ಅದನ್ನು ರಾಮ ಅಂಜದೇ ಸ್ವೀಕರಿಸಿದ.

ಶಬರಿಯ ಮೋಕ್ಷ ಪ್ರಸಂಗ :

ರಾಮನಿಗೆ ಶಬರಿ ಆಡುವ ಮಾತು–ರಾಮ ಪ್ರಭು ನೀನು ನನ್ನಿಂದ ಕೇಳಬೇಕಾದುದೆಲ್ಲವನ್ನೂ ಕೇಳಿಯಾಗಿದೆ. ಈ ವನದಲ್ಲಿ ನಾನು ತೋರಿಸಬೇಕಾದುದನ್ನೆಲ್ಲ ನೀನು ನೋಡಿ ಆಗಿದೆ. ನನ್ನ ಗುರುಗಳು ನನಗೆ ವಹಿಸಿದ ಕರ್ತವ್ಯ ಮುಗಿಯಿತು. ಇನ್ನು ಈ ಜೀರ್ಣವಾದ ಶರೀರವನ್ನು ತ್ಯಜಿಸಲು ಇಚ್ಛಿಸುತ್ತೇನೆ. ಭಾವಿತಾತ್ಮರಾದ ನನ್ನ ಗುರುಗಳ ಸಾಯುಜ್ಯವನ್ನು ಹೋಗಿ ಸೇರಿಕೊಳ್ಳಲು ಇಚ್ಛಿಸುತ್ತೇನೆಂದು ರಾಮನಿಗೆ ಭಿನ್ನವಿಸುತ್ತಾಳೆ.

ಅದಕ್ಕೆ ಶ್ರೀರಾಮ ಹೀಗೆ ಹೇಳುತ್ತಾನೆ.

"ಅರ್ಚಿತೋ ಹಂ ತ್ವಯಾ ಭಕ್ತ್ಯಾಗಚ್ಛ ಕಾಮಂ ಯಥಾಸುಖಂ"[೧೬]

ನೀನು ನನ್ನನ್ನು ಭಕ್ತಿಯಿಂದ ಪೂಜಿಸಿರುವಿ. ನಿನ್ನಿಷ್ಟದಂತೆ ನಿನ್ನ ಗುರುಗಳು ಸೇರಿದ ಸ್ಥಾನಕ್ಕೆ ಹೋಗು ಎನ್ನುತ್ತಾನೆ. ಈ ಅಪ್ಪಣೆಗಾಗಿಯೇ ಎದುರು ನೋಡುತ್ತಿದ್ದ ಶಬರಿ ಒಣಗಿದ ಕಟ್ಟಿಗೆಗಳಿಂದ ತನ್ನ ಚಿತೆ ನಿರ್ಮಿಸಿ, ಅದರ ಮೇಲೆ ಹತ್ತಿ, ತಾನೇ ಅಗ್ನಿ ಪ್ರವೇಶ ಮಾಡಿಕೊಂಡಳು. ಆಕೆಯ ಬಡಕಲು ಶರೀರ ಕ್ಷಣಮಾತ್ರದಲ್ಲಿ ಸುಟ್ಟುಬೂದಿಯಾಯಿತು. ಹೀಗೆ ಶಬರಿ ಶ್ರೀರಾಮನೆದುರು ತನ್ನ ಆತ್ಮ ಸಮರ್ಪಣೆ ಮಾಡಿಕೊಂಡಳು.

ಟಿಪ್ಪಣಿಗಳು

೧) ಪ್ರೊ. ಕೆ. ಎಸ್. ನಾರಾಯಣಚಾರ್ಯ : ಶ್ರೀ ರಾ. ಪಾತ್ರಪ್ರಪಂಚ ಪುಟ–೧೦೯

೨) ಅದೇ. ಪುಟ–೧೧೨–೧೧೩

೩) ವಾಲ್ಮೀಕಿ ರಾಮಾಯಣ ಅಯೋಧ್ಯಾ : ಸಂಪುಟ. ಶ್ಲೋ. ೨೦

೪) ಅದೇ. ಪುಟ : ೭ – ೩೨

೫) ವಾಲ್ಮೀಕಿ ರಾಮಾಯಣ : ಅಯೋಧ್ಯಾಕಾಂಡ : ಪುಟ–೦೦೦೦

೬) ಪ್ರೊ. ಕೆ. ಎಸ್. ನಾರಾಯನಚಾರ್ಯ : ಶ್ರೀ ರಾ. ಪಾತ್ರಪ್ರಪಂಚ : ಪುಟ–೧೩೦

೭) ವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡ : ಪುಟ–೭೧

೮) ಪ್ರೊ. ಕೆ. ಎಸ್. ನಾರಾಯಣಚಾರ್ಯ : ಶ್ರೀ ರಾ. ಪಾತ್ರಪ್ರಪಂಚ : ಪುಟ–೧೪೨

೯) ಅದೇ. ಪುಟ : ೧೪೫

೧೦) ಅದೇ. ಪುಟ : ೨೧೮

೧೧) ಅದೇ. ಪುಟ : ೪೩೧ ಮತ್ತು ೪೩೨

೧೨) ಅದೇ. ಪುಟ : ೪೩೩

೧೩) ವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡ : ಪುಟ–೨೭, ೨ ರಿಂದ ೪

೧೪) ಪ್ರೊ. ಕೆ. ಎಸ್. ನಾರಾಯಣಚಾರ್ಯ : ರಾ. ಪಾತ್ರಪ್ರಪಂಚ : ಪುಟ–೪೮೪

೧೫) ವಾಲ್ಮೀಕಿ ರಾಮಾಯಣ ಸುಂದರಕಾಂಡ : ಶ್ಲೋ. ೩೬

೧೬) ವಾಲ್ಮೀಕಿ ರಾಮಾಯಣ ಯುದ್ಧಕಾಂಡ : ಶ್ಲೋ. ೬೭

೧೭) ಪ್ರೊ. ಕೆ. ಎಸ್. ನಾರಾಯಣಚಾರ್ಯ : ಶ್ರೀ ರಾ. ಪಾತ್ರಪ್ರಪಂಚ : ಪುಟ–೬೪೩

ಅಧ್ಯಾಯ – ೩

ಕುವೆಂಪು ರಾಮಾಯಣದ ಪ್ರಮುಖ ಸ್ತ್ರೀ ಪಾತ್ರಗಳು

ಅಧ್ಯಾಯ – ೩
ಕುವೆಂಪು ರಾಮಾಯಣದ ಪ್ರಮುಖ ಸ್ತ್ರೀ ಪಾತ್ರಗಳು

ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದಲ್ಲಿಯ ದರ್ಶನಾ ಸ್ತ್ರೀಯರು.

೨.೧ ಸೀತಾದೇವಿ
೨.೨ ಕೈಕೇಯಿ
೨.೩ ಮಂಥರಾದೇವಿ
೨.೪ ಊರ್ಮಿಳೆ
೨.೫ ಮಂಡೋದರಿ
೨.೬ ಶೂರ್ಪನಖಿ
೨.೭ ಶಬರಿ
೨.೮ ಅನಲಾ
೨.೯ ತ್ರಿಜಟಾ

೨.೧ ಸೀತಾದೇವಿ :

ಬಹುಪಾಲು ರಾಮಾಯಣಗಳ ಅಧಿನಾಯಕಿ ಸೀತೆ. ಇವಳ ಹೆಸರನ್ನು ಕೇಳಿದ ಕ್ಷಣಮಾತ್ರದಲ್ಲಿ ಒಂದು ಸುಪರಿಚಿತ, ಮಹಾಸಾಧ್ವಿಯ ಚಿತ್ರ ಕಣ್ಣೆದುರು ನಿಲ್ಲುತ್ತದೆ. ಜನಕರಾಜನಿಗೆ ಅವಳು ಎಂದು ನೇಗಿಲನೆಲದಲ್ಲಿ ಕಂಡಳೋ ಅಂದಿನಿಂದ ಮತ್ತೇ ಅವಳು ಪಂಚಭೂತಗಳಲ್ಲಿ ಮರೆಯಾಗುವವರೆಗೆ ಬರೀ ಗೋಳನ್ನೇ ಉಂಡು ಬೆಳೆದಳು. ಇಂಥ ಹತಭಾಗಿನಿಯ ಜೀವಂತ ಚಿತ್ರ ಸಹೃದಯರ ಮನ: ತಟ್ಟುತ್ತದೆ. ಸೀತೆಯ ಇಡೀ ಬದುಕಿನ ಸುತ್ತ ಶೋಕದ ಕಾರ್ಮೋಡವೆ ಆವರಿಸಿದೆ. ಕುವೆಂಪು ತಮ್ಮ 'ಶ್ರೀ ರಾಮಾಯಣ ದರ್ಶನಂ'ದಲ್ಲಿ ಸೀತಾದೇವಿಯನ್ನು ಭಾರತೀಯ ಸಂಸ್ಕೃತಿಗೆ ಒಪ್ಪವಿಟ್ಟ ಮುತ್ತಳಿಯಂತೆ ವರ್ಣಿಸುತ್ತಾರೆ.

ಜನಕರಾಜ ಏರ್ಪಡಿಸುವ ಶಿವಧನುರ್ಭಂಗಕ್ಕೆ ಮೊದಲು ಸೀತೆಯು ಅನಿರೀಕ್ಷಿತವಾಗಿ ಹೂದೋಟದಲ್ಲಿ ವಿಹರಿಸುತ್ತಿದ್ದಳು. ಆ ಕ್ಷಣದಲ್ಲಿ ಹೂದೋಟದ ಸರೋವರದಲ್ಲಿ ನೀರಾಟವಾಡುತ್ತ ಸೌಮಿತ್ರಿಯೊಂದಿಗೆ ಕುಳಿತಿದ್ದ ಶ್ರೀರಾಮನನ್ನು ಕಂಡು, ಮೋಹಗೊಂಡು ನಿಡುಸುಯ್ಯುತ್ತಾಳೆ. ಇದಕ್ಕೆ ತಂಗಿ ಊರ್ಮಿಳೆ ಕಾರಣ ಕೇಳಿದಾಗ –

"ಬಾಲ್ಯದಿಂ ಕೇಳ್,
ನನಗರ್ಥವಾಗದೊಂದನುಭವಂ ತಾಂ ನಿಚ್ಚಮುಂ
ಬಂದೆನ್ನನೊಳ ಕೊಳ್ವುದವ್; ಗಗನ ಮಂಡಲಮೆ,
ಬಂದೆನ್ನ ಮೆಯ್ಯುಪ್ಪುತೆರ್ದೆಯೊಳಗೆ ಸೇರ್ವಂತೆ;
ಕಡುಲುಕ್ಕಿ ಮೇರೆ ಮೀರುತೆ ಪಾಯ್ದುಮುಳುಗಿಸಲ್
ನಾನೆ ಕಡಲೊಡತಿಯಪ್ಪಂತೆ; ಪೃಥವಿಯೆ ಕರಗಿ,
ಪೆಣ್ಬಸುಳೆಯಾಗುತೆನ್ನಯ ತೊಡೆಯ ತೊಟ್ಟಿಲೊಳ್
ನಲಿವಂತೆ; ತೊರೆ ಬನಂ ಭೂಮಿ ಬಾನ್ ಗಿರಿಪಂಕ್ತಿ
ಪಗಲಿರುಳ್ ಚುಕ್ಕಿ ನೇಸರೆಲ್ಲಮುಂ,
ಮೆಯ್ಯಾಗುತಾಂ ತ್ರೈಭುವನ ಲಕ್ಷ್ಮೀಯಪ್ಪಂತೆ"[೧]

–ಎಂದು ಉತ್ತರಿಸುತ್ತಾಳೆ. ಇದನ್ನು ಗಮನಿಸಿದಾಗ ಸೀತೆಯು ಸಾಮಾನ್ಯ ಸ್ತ್ರೀಯಲ್ಲ. ಸಾಕ್ಷಾತ್ ಪ್ರಕೃತಿ ಸ್ವರೂಪಿಣಿ ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತದೆ.

ದಶರಥನ ಮಗ ಶ್ರೀರಾಮ ಮತ್ತು ಸೊಸೆ ಸೀತಾ ಇವರಿಬ್ಬರು ಸುಖಿಗಳಾಗಿ ಬಾಳಿದ್ದು ಕೇವಲ ಅರಮನೆಯಲ್ಲಿರುವಷ್ಟು ದಿನ ಮಾತ್ರ. ಅಲ್ಲಿಂದ ಮುಂದೆ ಅವರಿಬ್ಬರು ಲೌಕಿಕ ಸುಖವನ್ನೇ ಕಾಣಲಿಲ್ಲ. ಅವರ ದಾಂಪತ್ಯದ ಬಗೆಗೆ ವಾಲ್ಮೀಕಿ ಮೌನವಾಗಿದ್ದರೆ, ಮಹಾಕವಿ ಕುವೆಂಪು ಸೀತಾ–ರಾಮರ ನವದಾಂಪತ್ಯದ ಚಿತ್ರಣವನ್ನು ಸುಂದರವಾಗಿ ಚಿತ್ರಿಸುತ್ತಾರೆ. ಅವರ ಪ್ರಥಮ ಮಿಲನದ ದಿನಗಳಲ್ಲಿ ಪ್ರಣಯಕಾತರತೆಯ ಆವೇಶ ಆವೇಗಗಳಷ್ಟೇ ಕೆಲಸಮಾಡದೆ, ಅಲ್ಲಿ ಪರಿಶುದ್ಧ ಪ್ರೇಮ, ತ್ಯಾಗ, ಸಮರ್ಪಣ ಭಾವಗಳು ಕಂಡುಬರುತ್ತವೆ. ಅದಕ್ಕೆ ಕವಿ –

"ಶ್ರೀ ರಾಮ ಪ್ರೇಮದೊಳೆ ಕಂಡಳ್ ಜನಕಜಾತೆ
ಜೀವನದ ಪರಮಪುರುಷಾರ್ಥಮಂ. ಮೇಣಖಿಳ
ಸೃಷ್ಟಿಲೀಲಾ ಮಹೋದ್ದೇಶಮಂ"[೨]

ಸೀತೆಯು ಶ್ರೀರಾಮನ ಪ್ರೇಮ ಅವಳ ಇಡೀ ಬದುಕಿನ ಪರಮಸಂತೃಪ್ತಿಯ ಸಿದ್ಧಿ ಎಂದು ತಿಳಿಯಲಿಲ್ಲ, ಇಡೀ ವಿಶ್ವದ ಸದ್ಗುಣಗಳನ್ನು ಬೆಳೆಸುವ, ಅವುಗಳನ್ನು ಬೋಧಿಸುವ, ಸಂಕೇತ ಎನ್ನುವುದನ್ನು ಕವಿ ಕಟ್ಟಿಕೊಡುತ್ತಾನೆ.

ಮಂಥರೆ ಮತ್ತು ಕೈಕೇಯಿಯ ಕಾರಣವಾಗಿ ತನಗೆ ವನವಾಸ ಪ್ರಾಪ್ತವಾದಾಗ ತಾನು ಅರಣ್ಯಯಾತ್ರೆಗೆ ಹೋಗಲು ಅನುಮತಿ ಕೊಡಬೇಕೆಂದು ಕೇಳುತ್ತಾನೆ. ಅವಳಿಗೆ ಅತ್ತೆ–ಮಾವರ ಸೇವೆ ಮಾಡುತ್ತ ಅರಮನೆಯಲ್ಲಿಯೇ ಉಳಿದುಕೊಳ್ಳಲು ಹೇಳುತ್ತಾನೆ. ಅದಕ್ಕೆ ಅವಳಾಡುವ ಮಾತು ಆಕೆಯಲ್ಲಿದ್ದ ಗಂಭೀರತೆಯನ್ನು ಸ್ಪಷ್ಟಪಡಿಸುತ್ತದೆ.

“ನಿನ್ನನ್ನಲ್ಲದೆ ನಲ್ಲ, ಕೋಸಲ ನೆಲವನ್ನಲ್ಲ
ನಾನೊಲ್ದುದಂದು, ಮೇಣಿಂದಿಗೂ ಮನೆಯೆನಗೆ
ರಮಣನೆರ್ದೆಯಲ್ಲದೆಯೆ ಮಾವನರಮನೆಯಲ್ತು,
ನೀನಿರಲ್ಕೆನ್ನೊಡನೆ ನಾಡಾದರೆಂತಂತೆ
ಕಾಡಾದೊಡಂ ಸುಖಿಯೆನಾಂ ದುಃಖಿನಿನಗಾಗಿ
ನಿನ್ನ ನೋಮಿಂಗಳಲ್ಕೆಯೆ ಹೊರತೆನಗೆ ಬೇರೆ
ಸಂಕಟದೆ ಸೋಂಕೆಲ್ಲಿ”[೩]

ಇಲ್ಲಿ ಸೀತೆ ತೋರುವ ಔನತ್ಯ ಭಾರತೀಯ ಸ್ತ್ರೀಯರ ಸತ್ಪರಂಪರೆಗೆ ಸಾಕ್ಷಿಯಾಗಿದೆ. ಇಂಥ ಸ್ತ್ರೀಯರಿಂದಲೇ ಭಾರತೀಯ ಸಂಸ್ಕೃತಿಯನ್ನು ಲೋಕ ಇಂದಿಗೂ ಕೊಂಡಾಡುತ್ತದೆ.

ಮಹಾಕವಿ ಕುವೆಂಪು ತೋರುವ ಮಾತಿನ ಚಮತ್ಕಾರ ಎಂಥವರನ್ನೂ ಮರಳು ಮಾಡುವಂತಿದೆ.

ಶ್ರೀರಾಮನು ಸೀತೆಯ ಈ ಮಾತುಗಳನ್ನು ಕೇಳಿ ಕ್ಷಮೆಯಾಚಿಸುವವನಂತೆ, ಸಿಟ್ಟಾಗಬೇಡ, ಧೈರ್ಯವಾಗಿರು. ನಾನು ಬೇಗನೆ ವನವಾಸವನ್ನು ಮುಗಿಸಿಕೊಂಡು ಬಂದುಬಿಡುತ್ತೇನೆ ಎನ್ನುತ್ತಾನೆ. ಅದಕ್ಕೆ ಅವಳು ತಾನೂ ವನವಾಸಕ್ಕೆ ಬರುತ್ತೇನೆಂದು ಹೇಳುವ ರೀತಿ ಮನೋಹರವಾಗಿದೆ. ರಮಣನೆದೆಯೇ ತನ್ನ ಅರಮನೆ. ಮಾವನ ಅರಮನೆಗೂ ತನಗೂ ಯಾವ ಸಂಬಂಧವೂ ಇಲ್ಲ ಎನ್ನುತ್ತಾಳೆ. ತನ್ನ ಗಂಡನಿಂದ ಸಂಬಂಧವಿಲ್ಲದ್ದರಲ್ಲಿ ತನಗೂ ಸಂಬಂಧವಿಲ್ಲವೆನ್ನುತ್ತಾಳೆ.

ವನವಾಸದ ಅವಧಿಯಲ್ಲಿ ಶ್ರೀರಾಮನಿಗೆ ಯಾವ ತೊಂದರೆಯನ್ನೂ ಕೊಡದೇ ಅವನ ನೆರಳಂತೆ ತೊಡಕಾಗದೇ, ಅವನನ್ನೇ ಅನುಸರಿಸಿ, ಸೇವಿಸಿ, ವನವಾಸದ ಬಹುಪಾಲನ್ನು ಕಳೆದಳು. ಅವಧಿ ಮುಗಿಯುತ್ತ ಬಂದದ್ದರಿಂದ ರಾಮ–ಲಕ್ಷ್ಮಣ–ಸೀತೆಯರು ಅಯೋಧ್ಯೆಗೆ ಹಿಂದಿರುಗಲು ನಿಶ್ಚಯಿಸಿದಾಗ ಸೀತೆ –

“ಕಟ್ಟಿದಳ್ ಬುತ್ತಿಯಂ ಸೀತೆ ತದನಂತರಂ
ಮುಡಿಗಟ್ಟಿದಳ್ ಮಂಡೆಯಂ ಬಾಚಿ ಹೆರಳಿಕ್ಕೆ
ಮುಡಿವಾಸೆಯಿಂದ ಪೂದಿರಲೆಂದೆಲೆವನೆಯ
ಮುಳ್ಳನೊಡ್ಡಂ ದಾಂಟುತಲ್ಲಿ......
ತಿರುಗ ತೊಡಗಿದಳಲರನರಸುತ್ತಾ”[೪]

ಹೀಗೆ ಹೊರಡುವ ಸಿದ್ಧತೆ ಮಾಡಿಕೊಂಡು, ಸುಸಂಸ್ಕೃತ ಸ್ತ್ರೀಯರಿಗೆ ಹೂ ಮುಡಿವ ಆಸೆ ಸಹಜವಾಗಿರುವಂತೆ ಇವಳಿಗೂ ಹೂ ಮುಡಿವ ಆಸೆ. ಹೂ ತರಲು ಬಂದಾಗ ಬಂಗಾರದ ಜಿಂಕೆಯೊಂದು ಅವಳ ಕಣ್ಣಿಗೆ ಬೀಳುತ್ತದೆ. ಅದನ್ನು ಹಿಡಿಯಲು ಹಂಬಲಿಸಿದಾಗ ಅದು ಈಕೆಯನ್ನು ವಂಚಿಸಿ ಮುಂದೆ ಮುಂದೆ ಹೋಗುತ್ತದೆ. ಅದು ತಪ್ಪಿಸಿಕೊಂಡು ಹೋದೀತೆಂದು ಹೆದರಿ ಕಾನನವೇ ಕಂಪಿಸುವಂತೆ ಸೀತೆ –

"ಓ ಲಕ್ಷ್ಮಣಾ
ಓ ಬಾರ! ತಾರ ಬಿಲ್ ಬಾಣಮಂ ನೋಡ ಆ
ವನಮಂ! ಹಿಡಯ ಬಾ ಬಾ; ಬೇಗ ಓ ಲಕ್ಷ್ಮಣಾ"[8]

ಎಂದು ಕೂಗಿದಾಗ ಅವಳ ಆರ್ತಧ್ವನಿಗೆ ರಾಮ–ಲಕ್ಷ್ಮಣರಿಬ್ಬರೂ ಬಿಲ್ಲುಬಾಣಗಳನ್ನು ಹಿಡಿದು ಓಡೋಡಿ ಬರುತ್ತಾರೆ.

ವಾಲ್ಮೀಕಿ ರಾಮಾಯಣದಲ್ಲಿ ಜಿಂಕೆಯನ್ನು ಹಿಡಿದು ತಾ ಎಂದು ಸೀತೆ ರಾಮನನ್ನು ಕರೆಯುತ್ತಾಳೆ. ಕುವೆಂಪು ರಾಮಾಯಣದಲ್ಲಿ ಆಕೆ ಲಕ್ಷ್ಮಣನನ್ನೇ ಬೇಡಿಕೊಳ್ಳುತ್ತಾಳೆ. ಈ ವ್ಯತ್ಯಾಸ ಸಾಮಾನ್ಯವೆನಿಸಿದರೂ ಹೆಚ್ಚು ಸಮರ್ಪಕವಾಗಿದೆ.

ಸೀತೆಯ ಈ ಮಾತುಗಳನ್ನು ಕೇಳಿದ ಲಕ್ಷ್ಮಣ ನಕ್ಕು ಬಂಗಾರದ ಜಿಂಕೆ ಎಲ್ಲಿಯಾದರೂ ಇರುವುದುಂಟೆ? ಇದು ಮಾರೀಚನ ಮಾಯೆ. ಇದರಿಂದ ಎಷ್ಟೋ ಜನ ಮೋಸ ಹೋಗಿದ್ದಾರೆ. ಇದರ ಬಯಕೆ ಬೇಡ ಎಂದನು. ಆಕೆ ಗಂಡನ ಕಡೆಗೆ ತಿರುಗಿ ಮರುಗಿದಳು, ಕಾಡಿ ಬೇಡಿದಳು. ಆಗ ರಾಮಚಂದ್ರ ಅದರ ಬೆನ್ನಟ್ಟಿ ಅದನ್ನು ಜೀವಸಹಿತ ಹಿಡಿಯಲು ಸಾಧ್ಯವಾಗದೇ ಅದನ್ನು ಕೊಂದೇ ಬಿಡುತ್ತಾನೆ. ಆ ಮೃಗ ಸಾಯುವಾಗ ಓ ಲಕ್ಷ್ಮಣ! ಓ ಲಕ್ಷ್ಮಣಾ! ಓ! ಎಂದು ಲೋಕ ಶೋಕವನ್ನೆಲ್ಲ ಕರೆದಂತೆ ಕೂಗಿ ಬಿದ್ದು ಸತ್ತಿತ್ತು. ಈ ಕೂಗನ್ನು ಸೀತೆ ಮತ್ತು ಲಕ್ಷ್ಮಣ ಇಬ್ಬರೂ ಕೇಳುತ್ತಾರೆ. ಲಕ್ಷ್ಮಣನಿಗೆ ಸತ್ಯಗೊತ್ತಾಗಿ ಅದು ಅಣ್ಣನ ಧ್ವನಿ ಅಲ್ಲವೆಂದು ಹೇಳಿದರೂ ಅವಳು ನಂಬದಾದಳು. ಆ ಹೊತ್ತಿಗೆ ಮತ್ತೆ ಮಾರೀಚನ ಧ್ವನಿ ಕೇಳಿಸುತ್ತದೆ. ಅದಕ್ಕೆ ಸೀತೆ ಕಣ್ಣನ್ನು ಕೆರಳಿಸಿ ಕೋಪಾವಿಷ್ಟೆಯಾಗಿ – ಭ್ರಾತೃಘಾತಕ ಪಾಪಿ, ಇಲ್ಲಿಂದ ತೊಲಗು, ಸಾಯಿ, ಸುಮಿತ್ರೆಯ ಆತ್ಮದಲ್ಲಿ ಹುಟ್ಟಿದ ಪಾತಕಿ ನೀನು, ಗೋಮುಖ ವ್ಯಾಘ್ರನಂತೆ, ಪೂರ್ವಜನ್ಮದ ಪಾಪದಂತೆ ನಮ್ಮೊಡನೆ ಬಂದಿದ್ದಿ ಎನ್ನುತ್ತಾಳೆ.

ಅದಕ್ಕೆ ಪ್ರತಿಯಾಗಿ ಲಕ್ಷ್ಮಣ ಜನಕಸುತೆ ಇಂಥ ನುಡಿಸಲ್ಲದು. ನೀನು ಅಣ್ಣನನ್ನು ಪ್ರೀತಿಸುವ ಮೊದಲೆ, ನಾನು ಪ್ರೀತಿಸಿದ್ದೆ. ಇಂಥ ಹೀನ ನುಡಿಗಳನ್ನಾಡಿದರೆ ಮುಂದೆ ನೀವೆ ನೋವುಣ್ಣ ಬೇಕಾಗುತ್ತದೆ. ಅದಕ್ಕೆ ಸೀತೆ –

[illegible]

[illegible]

[illegible]

[illegible]

[illegible]

[illegible]

“ಎಲವೋ ಲಕ್ಷ್ಮಣಾ
ಎಳೆಯ ಮುಳ್ ಚುಚ್ಚಲ್ಕೆ ನೋವಲ್ತುದುವೆ ಮೆಚ್ಚು
ಬೆಳೆದರಾ ಮೂಳ್, ಅದರ ಕಚ್ಚು ಮುತ್ತಹುದೆ ಪೇಳ್?
ಎಳೆಯ ಕರು ಬೆಳೆದ ಮೇಲದರ ತಾಯನೆ ಬೆದೆಗೆ ಬಯಸಿದಪುದಯ್ಯೋ”[೬]

ಎಂದು ಹೀನುನುಡಿಯುತ್ತಾಳೆ. ಇದಕ್ಕೆ ಅನಿವಾರ್ಯವಾಗಿ ಲಕ್ಷ್ಮಣ ಕಲ್ತನಕ್ಕೆಲ್ಲೆ ಮೇಣೆಣೆಯುಂಟೆ? ಎಂದು ದೇವಿ, ತಾಯಿ ನನ್ನನ್ನು ಮನ್ನಿಸೆನ್ನುತ್ತಾನೆ. ಇಷ್ಟು ಹೇಳಿ ಆತ ಧ್ವನಿ ಬಂದ ಕಡೆಗೆ ಅಣ್ಣನನ್ನು ಹುಡುಕಿಕೊಂಡು ಓಡುತ್ತಾನೆ. ಇತ್ತಕಡೆಗೆ ಸನ್ಯಾಸಿವೇಷದ ರಾವಣ ಬಂದಿಳಿಯುತ್ತಾನೆ. ಲಕ್ಷ್ಮಣನ ಬಾಹುರಕ್ಷೆಯನ್ನು ನೂಕಿದ ಸೀತೆ ಈಗ ಪರ್ಣಕುಟಿಯ ಮೇಲೆ ಹಬ್ಬಿದ ಬಳ್ಳಿಯನ್ನು ಬಿಗಿದಪ್ಪುತ್ತಾಳೆ. ಭಯದಿಂದ ಮೂರ್ಛೆಹೋದ ಸೀತೆಯನ್ನು ಹೊತ್ತುತಂದ ರಾವಣ ಲಂಕಾವನದ ತನ್ನ ಅರಮನೆಯಲ್ಲಿ ಇಳಿಸುತ್ತಾನೆ. ಕದ್ದುತಂದ ನಿಧಿಯನ್ನು ಬಚ್ಚಿಡುವಂತೆ ಆಕೆಯನ್ನು ಗುಪ್ತಗೃಹ ಮಧ್ಯದಲ್ಲಿ ಬಚ್ಚಿಡುತ್ತಾನೆ. ಚಂದ್ರನಖಿಯನ್ನು ಕರೆಸಿ ಅವಳಿಗೆ –

“ಕದ್ದುತಂದಾಯ್ತಿನ್ನದಂ ಗೆದ್ದು ನಿನಗೀವ
ಜಾಣ್ಮೆ ಎಂದಾಗ ಹೇ ದೈತೇಂದ್ರ ನನಗಿರಲಿ ಪೆಣ್ಣಬಗೆ
ಪೆಣ್ಣಲ್ಲದರಿವಹುದೇ?”[೭]

–ಎಂದು ತಾನು ಸೀತೆಯ ಮನಸ್ಸನನ್ನು ತಿದ್ದಿ ರಾವಣನಿಗೆ ಒಲಿಸುವ ಹೊಣೆ ಹೊತ್ತುಕೊಳ್ಳುತ್ತಾಳೆ. ಸೀತೆಯ ಸುತ್ತೆಲ್ಲ ಇಂದ್ರ ವೈಭವವನ್ನು ಸೃಷ್ಟಿಸುತ್ತಾಳೆ. ಮೂರ್ಛೆಹೋದ ಅವಳಿಗೆ ಇನ್ನುಳಿದ ರಾಕ್ಷಸಿಯರ ಜೊತೆಗೆ ಗಾಳಿ ಬೀಸಿ ತಂಪು ನೀರು ಎರಚುತ್ತಾಳೆ. ಮೂರ್ಛೆಯಿಂದ ಎಚ್ಚೆತ್ತ ಸೀತೆ ಕಣ್ತೆರೆದು ನೋಡಿದಾಗ ಸುತ್ತೆಲ್ಲ ಇರುವ ಇಂದ್ರವೈಭವ, ವಿಲಾಸವನ್ನು ನೋಡಿ, ನನ್ನ ಆಸೆಯನ್ನು ಈಡೇರಿಸುವೆಯಾದರೆ ನನ್ನ ಸುತ್ತೆಲ್ಲ ಇರುವ ಈ ಇಂದ್ರವೈಭವವನ್ನು ತೊಲಗಿಸು, ಪತಿಯಿಂದ ದೂರಾದ ನನ್ನಂಥ ಆರ್ಯಸ್ತ್ರೀಗೆ ಇಂಥ ಸುಖಭೋಗ ಬೇಡ, ನನ್ನ ಪತಿಯೊಡನೆ ನಾನೂ ಕಾಡಿನ ವ್ರತವನ್ನು ಕೈಗೊಂಡಿದ್ದೇನೆ. ಆ ವ್ರತ ಮುಗಿಯುವವರೆಗೆ ಕಾಡೆ ಮನೆ. ವಲ್ಕಮುಡೆ ಮತ್ತು ಕಂದಮೂಲಗಳೇ ಆಹಾರವೆನ್ನುತ್ತಾಳೆ.

ಸೀತೆ ಅಶೋಕವನದಲ್ಲಿ ಪತಿಯ ಪುನರಾಗಮನದ ನಿರೀಕ್ಷೆಯಲ್ಲಿ ಹತ್ತುತಿಂಗಳನ್ನು ಕಳೆಯುತ್ತಾಳೆ. ಅಲ್ಲಿರುವ ವಿಲಾಸಭೋಗಗಳನ್ನು ನೋಡಿ ಎಂಥ ಗಟ್ಟಿಹೃದಯದವರೇ ಆಗಿದ್ದರೂ ಮನಸೋಲುವಂತಿತ್ತು. ಆದರೆ ಎಂಥ ಪರಸ್ಥಿತಿಯಲ್ಲೂ ಕಠೋರ ವ್ರತವನ್ನಾಚರಿಸಿದ ಮಹಾಸಂಯಮ ಸೀತೆಯದು.

[illegible]

[illegible]

[illegible]

[illegible]

[illegible]

ಅವಳು ನಿರಶನ ವ್ರತದಿಂದ ಶಕ್ತಿಗುಂದಿ ಕೇವಲ ಜೀವಂತ ಅಸ್ತಿಪಂಜರವಾಗಿದ್ದಳು. ಅವಳು ಅತ್ಯಂತ ದುಃಸ್ಥಿತಿಯಲ್ಲಿದ್ದಾಗ ಅಲ್ಲಿಗೆ ರಾವಣ ಆಗಮಿಸುತ್ತಾನೆ. ಅವಳ ಅವಸ್ಥೆಯನ್ನು ಕಂಡು ಮರಗುತ್ತಾನೆ. ತನ್ನ ದುರ್ನೀತಿಯನ್ನು ಕ್ಷಮಿಸೆನ್ನುತ್ತಾನೆ. ಅದಕ್ಕೆ ಸೀತೆ ನಾನು ಈ ಜೀವನದಲ್ಲಿ ನಿನ್ನವಳಾಗಲಾರೆ ಎಂದು ತ್ರಿಜಟೆಗೆ –

"ಈತಂಗೆ ಪೇಸಿ ಆ ದಿಕ್ಕಿಗೆಂಜಲನೆಸೆಯೆ
ನಾಂ! ರಾಮಚಂದ್ರನೆಲ್ಲಿರ್ದೊಡಂ ನನಗೆ ಪತಿ!
ಶ್ರೀರಾಮನೆಂತಿರ್ದೊಡಂ ನನಗೆ ಪತಿ! ಸತ್ತೆ
ಸೇರ್ದಪೆನಾತನೊಡನೆ ಬದುಕಮೇಧ್ಯಮೆ ದಿಟಂ
ಇನ್ನರಿರ್ಪೀ ಜಗದಿ.....
ಪಾಪಿಗೆ ಮೋಕ್ಷಮೆಂತಂತೆ
ದುರ್ಲಭಳ್ ನಾನೀ ನಿಶಾಚರಿಗೆ"[೮]

– ಎಂದಾಗ ಇನ್ನೆರಡು ದಿನಗಳಲ್ಲಿ ನೀನು ನನಗೆ ಒಲಿಯದಿದ್ದರೆ ಬಲತ್ಕಾರದಿಂದಲೇ ನಿನ್ನನ್ನು ಸೇರುತ್ತೇನೆ ಎನ್ನುತ್ತಾನೆ. ಒಂದು ವೇಳೆ ನಿರಸನವ್ರತ ಕೈಕೊಂಡು ಆತ್ಮಹತ್ಯೆಯಿಂದ ಮಡಿದರೆ ಅದೇ ಚಿತೆಯೇರಿ ನಿನ್ನನ್ನು ಸೇರಿ ಸಾಯುಜ್ಯ ಪದವಿ ಪಡೆಯುತ್ತೇನೆ ಎನ್ನುತ್ತಾನೆ. ಈ ಮೇಲಿನ ನುಡಿ ಕಾಮವಶನಾದ ಗಂಡಸೊಬ್ಬನ ಅತಿರೇಕತೆಯನ್ನು ಸೂಚಿಸುತ್ತದೆ.

ಸೀತೆಯ ಸ್ಥಾನದಲ್ಲಿ ಬೇರಾವ ಸ್ತ್ರೀಯೇ ಆಗಿದ್ದರೆ ತತ್ತರಿಸಿ ಹೋಗುತ್ತಿದ್ದಳು, ಇಲ್ಲದಿದ್ದರೆ ರಾವಣನ ಪಾಶವಿ ಪ್ರವೃತ್ತಿಗೆ ಹೆದರಿ ಶರಣಾಗುತ್ತಿದ್ದಳು. ಆದರೆ ಇಲ್ಲಿರುವ ಸೀತಾದೇವಿ ಪಾತಿವ್ರತ್ಯದಲ್ಲಿ ರಾವಣನನ್ನೇ ತತ್ತರಿಸುವಂತೆ ಮಾಡಿದ್ದಾಳೆ.

ಸೀತೆಯ ಪಾತಿವೃತ್ಯವನ್ನು ಕುರಿತು ರಾವಣನೇ

"ಮಾವನಾಡಿದನಂದು ಹದಿಬದೆಯ
ಮಹಿಮೆಯಂ ಕುರಿತು ರಾವಣಶಯ್ಯೆಗೊಲಿಯದಿಹ
ನಾರಿಯಿಲ್ಲೆಂದಾಡಿದೆನ್, ಮುಲೋಕದೊಳ್! ಮತ್ತೆ
ಪೂಣ್ದನವನಿಗೆ ಇಲ್ಲ ಮಾರೀಚ ಎಲ್ಲಿಯೂ
ಇಲ್ಲ ಆ ನನ್ನ ತಾಯ್!...............
.... ಪಾವನೆಯೆನಗೆ ತೋರ್ದಂದು ಧನ್ಯನಾಂ ಧನ್ಯ ತಾಂ!"[೯]

ಇದೂವರೆಗೆ ರಾವಣ ಈ ಲೋಕದಲ್ಲಿ ಪತಿವ್ರತೆಯರೇ ಇಲ್ಲವೆಂದು ತಿಳಿದಿದ್ದ. ಆದರೆ ಸೀತೆಯಂಥ ಮಹಾಸತಿ ಕಂಡದ್ದು ತನ್ನ ಪುಣ್ಯವೆಂದೇ ಭಾವಿಸುತ್ತಾನೆ. ಆತ ಮಂಡೋದರಿಗೆ ಆಡುವ ಮಾತು –

> **"ನಿನಗಿಂ ಮಿಗಿಲ್ ಸೀತೆ**
> **ನನಗೆ ದೇವತೆ ಮಾತೆ! ಶ್ರದ್ಧೆಗೆಟ್ಟಿರ್ದೆನಗೆ**
> **ಶ್ರದ್ಧೆಯಂ ಮರುಕೊಳಿಸುತಾತ್ಮದುದ್ಧಾರಮಂ**
> **ತಂದ ದೇವತೆ, ಪುಣ್ಯ ಮಾತೆ!"**[೧೦]

– ಎಂದು ಹೇಳಿ ಸೀತೆಯನ್ನು ಹದಿಬದೆಯರಧಿದೇವಿ ಎಂದು ಹೃದಯಪೀಠದಲ್ಲಿಟ್ಟು ಪೂಜಿಸುತ್ತಾನೆ. ಸೀತೆಯ ಪತಿವ್ರತಾ ತಪಸ್ಸು ರಾವಣನಲ್ಲಿ ಹೀಗೆ ಅಗಾಧವಾದ ಪರಿಣಾಮವನ್ನುಂಟು ಮಾಡಿತ್ತೊ ಹಾಗೆ ಅವಳೂ ಪರಿವರ್ತನೆಗೊಂಡಳು. ಅಂತಿಮವಾಗಿ ಕವಿ ರಾಮ–ಸೀತೆಯರನ್ನು ಅಗ್ನಿ ಪ್ರವೇಶಮಾಡಿಸಿ ಒಂದುಗೂಡಿಸುತ್ತಾನೆ.

ವನವಾಸದ ಅವಧಿಯಲ್ಲಿ ರಾಮ ಅವಳಿಗೆ ರಾಮನೊಬ್ಬನಿಗೇ ವನವಾಸ ಇನ್ನುಳಿದವರಿಗಲ್ಲ ಎನ್ನುತ್ತಾನೆ. ಅದಕ್ಕೆ ಅವಳು ರಾಮನ ಅರ್ಧಾಂಗಿಯಾದ ಸೀತೆಗೆ ಬೇರೆತನವಿಲ್ಲ. ಪತಿಯ ಸುಖದುಃಖದಲ್ಲಿ ಅರ್ಧಪಾಲು ಸತಿಗೆ ಎನ್ನುತ್ತಾಳೆ. ಅದಕ್ಕೆ ರಾಮ ನೀನು ಅತ್ತೆ ಮಾವಂದಿರನ್ನು ಸೇವಿಸುತ್ತ ಧರ್ಮವನ್ನು ಆಚರಿಸುವುದು ಪರಮ ಕರ್ತವ್ಯ ಎಂದಾಗ ಅವಳು –

> **"ಪತಿಸೇವೆಗಿಂ ಮಿಗಿಲ್ ಸೇವೆಯಿಲ್ಲಂಗನಗೆ**
> **ರಾಜರ್ಷಿ ತಂದೆಯುಂ ಗುರುಗಳಂ ಧರ್ಮಮಂ**
> **ಬೋಧಿಸಿಹರೆನಗೆ"**[೧೧]

ಎಂದು ಜವಾಬು ನೀಡುತ್ತಾಳೆ. ರಾಮ ಅವಳನ್ನು ಅರಣ್ಯಕ್ಕೆ ಕರೆದೊಯ್ಯಲು ಒಪ್ಪುವುದಿಲ್ಲ. ಅವಳು ಜೊತೆಯಲ್ಲಿದ್ದರೆ ತನಗೆ ತೊಂದರೆಯಾಗುತ್ತದೆಂದು ಕಾಡಿನ ಕಷ್ಟಜೀವನವನ್ನು ವಿವರಿಸುತ್ತಾನೆ. ಅದಕ್ಕೂ ಸೀತೆ ಜಗ್ಗಲಿಲ್ಲ. ಕೊನೆಗೆ ಇವರಿಬ್ಬರ ಜೊತೆಗೆ ಲಕ್ಷ್ಮಣನೂ ಅರಣ್ಯದಲ್ಲಿ ನಡೆಯುತ್ತಾನೆ. ಹಾಗೆ ಕಾನನದಲ್ಲಿ ಅವರು ಮುಂದೆ ಮುಂದೆ ನಡೆಯುತ್ತಿದ್ದಾಗ – ಅರಮನೆಯ ಮೃದು ರತ್ನಗಂಬಳಿಯ ಮೇಲೆ ಚಿಗುರೆಲೆಯಂತ ಕುಸುಮಕೋಮಲ ಅಡಿಯಿಟ್ಟು ನಡೆಯುತ್ತಿದ್ದ ಬಾಲೆ ಸೀತೆ ಅಡವಿಯಲ್ಲಿ ಕಲ್ಲುಮುಳ್ಳು ತುಳಿದು, ಹಳ್ಳ–ತಗ್ಗುಗಳನ್ನು ಏರಿ ಇಳಿದು ಪತಿಯನ್ನು ಹಿಂಬಾಲಿಸಿ ನಡೆದಿದ್ದಳು. ನಡೆದು ನಡೆದು ಸಾಕಾಗಿ ಕಣ್ಣಿಗೆ ಬವಳಿಕೆ ಬಂದು ದೊಪ್ಪನೆ ನೆಲಕ್ಕೆ ಕುಳಿತು ಉಸ್ಸೆನ್ನುತ್ತ ಮರಕ್ಕೆ ಒರಗುತ್ತಾಳೆ. ಇದನ್ನು ಕಂಡ ವೀರರಿಬ್ಬರೂ ಎದೆಯೊಡೆದು ತಣ್ಣಗಾದರು. ಅವಳಿಗೆ ಚೈತ್ಯವನ್ನುಂಟು ಮಾಡಿ ಮತ್ತೆ ಭಾರದ್ವಾಜ ಋಷಿಯ ಆಶೀರ್ವಾದ ಪಡೆದು ಚಿತ್ರಕೂಟದಲ್ಲಿ ಪರ್ಣಶಾಲೆಯೊಂದನ್ನು

ನಿರ್ಮಿಸಿ ಸಂಸಾರ ಹೂಡುತ್ತಾರೆ. ಅಲ್ಲಿರುವ ಮೃಗ, ಪಕ್ಷಿ, ತರುಲತೆ, ಗಿರಿವನಗಳೆಲ್ಲ ಇವರ ಮೇಲೆ ಆತ್ಮೀಯ ಭಾವವನ್ನು ತಳೆದವು.

ಅವರು ಚಿತ್ರಕೂಟದಲ್ಲಿದ್ದ ಒಂದು ದಿನ ಸೀತೆ ಮಾಲ್ಯವತೀ ನದಿಯಲ್ಲಿ ಮಿಂದು ಅಡುಗೆ ಮಾಡತೊಡಗುತ್ತಾಳೆ. ಆದರೆ ಹಸಿಸೌದೆ ಎರಿಯುವುದಿಲ್ಲ. ಅವಳು ಎಷ್ಟೇ ಪ್ರಯತ್ನಿಸಿದರೂ ಒಲೆ ಉರಿಯುವುದಿಲ್ಲ. ಸೌದೆಯೊಂದಿಗೆ ಮುನಿಸಿಕೊಂಡು ಕೊಳ್ಳಿಗಳನ್ನು ತಿವಿದು, ಕಣ್ಣೊರೆಸಿ, ಮೂಗು ಮುಖವನ್ನು ಮಸಿಮಾಡಿಕೊಳ್ಳುತ್ತಾಳೆ. ರಾಮ ಆ ಹೊತ್ತಿಗೆ ಹಸಿದು ಬಂದು ಸೀತೆಯನ್ನು ಕೂಗುತ್ತಾನೆ. ಅವಳು ಹೊಗೆಯ ಹೊಟ್ಟೆಯೊಳಗಿನಿಂದೆಂಬಂತೆ ಉತ್ತರಿಸುತ್ತಾಳೆ.

ರಾಮ–ಪಸಿದೆನ್ ಆನುಣಲ್‌ವೇಳ್ಕುಂ

ಸೀತೆ–ಪಸಿಸೌದೆಯಿಂದಡುಗೆಯೆಂತಪ್ಪದಯ್ ಪೊಗೆಯನುಣಿ

ಎಂದಾಗ ಅವಳ ಮುಖವನ್ನು ನೋಡಿದ ರಾಮ ನಗೆತಾಳಲಾರದೇ ಹೊರಗೆ ಬಂದು ಲಕ್ಷ್ಮಣನಿಗೆ–

“ನೋಡು ನಡೆ ಒಳಗೆ ಅತ್ತಿಗೆಗೆ ಬದಲೋರ್ವ

..

ವಾನರಿಯ.................”೧೨

ಇದೊಂದು ಅತ್ಯಂತ ಸಾಮಾನ್ಯ ಚಿತ್ರ. ಇದನ್ನು ಗಮನಿಸಿದಾಗ ಸೀತೆಯ ಅವಸ್ಥೆ ಇಂದಿನ ಸಮಾಜದಲ್ಲಿ ಕೂಲಿ ಮಾಡಿ ಹೊಟ್ಟೆಹೊರೆದು ಕೊಳ್ಳುವ ಸ್ತ್ರೀಯ ಚಿತ್ರಣವನ್ನು ನೆನಪಿಸುತ್ತದೆ. ಹೀಗೆ ಕುವೆಂಪು ‘ಶ್ರೀ ರಾಮಾಯಣ ದರ್ಶನಂ’ ಮಹಾಕಾವ್ಯದಲ್ಲಿ ಸೀತೆಯನ್ನು ಅಪ್ಪಟ ಭಾರತೀಯ ನಾರಿಯ ಸಂಸ್ಕೃತಿಯ ಅರಗಿನಲ್ಲದ್ದಿ ಎರಕಹೊಯ್ದಿದ್ದಾರೆ.

೨) ಕೈಕೇಯಿ :

ವಾಲ್ಮೀಕಿ ಮಹರ್ಷಿಯ ಕಾವ್ಯದಲ್ಲಿ ಕಾವ್ಯದುದ್ದಕ್ಕೂ ವಾಚಕರ ಟೀಕೆ, ನಿಂದನೆಗಳಿಗೆ ಗುರಿಯಾದವಳು ಕೈಕೇಯಿ. ಇಡೀ ರಾಮಾಯಣದ ಕಥೆಗೆ ತಿರುವು ನೀಡಿದ ಪಾತ್ರ ಕೈಕೇಯಿಯದು. ಲೋಕದ ಜನನಿಯರು ತಮ್ಮ ಮಕ್ಕಳ ಶ್ರೇಯಸ್ಸಿಗಾಗಿ ಪ್ರಯತ್ನಿಸುವಂತೆ ಇವಳು ಪ್ರಯತ್ನಿಸಿದರೆ ಸಾಮಾನ್ಯ ಜನರಿಂದಲೂ ಬೈಸಿಕೊಂಡ ಹತಭಾಗಿನಿ ಇವಳು.

ಅರಮನೆಯಲ್ಲಿ ಅನೇಕ ರಾಣಿಯರಿದ್ದರೂ ಮುದಿದೊರೆ ಸಂತಾನಕ್ಕಾಗಿ ಈ ರೂಪಸಿಯನ್ನು ವಿವಾಹವಾಗಿ ಅವಳಿಗೆ ಜನಿಸುವ ಮಗನಿಗೇ ಪಟ್ಟಗಟ್ಟುತ್ತೇನೆಂದು ವಚನವಿತ್ತಿದ್ದ. ಸುಂದರಿಯಾದ ಈ ಕಿರಿಯ ರಾಣಿಯ ಮೇಲೆ ದಶರಥನಿಗೆ ಎಲ್ಲಿಲ್ಲದ ಒಲುಮೆ. ಹೀಗಾಗಿ ಹಿರಿಯ ರಾಣಿಯರನ್ನು ಸ್ವಲ್ಪ ಅಸಡ್ಡೆಯಿಂದ ನೋಡಿರಬಹುದು. ಅಲ್ಲದೇ ದೊರೆಯ ಕಿರಿಯ ರಾಣಿಯರೂ ಈಕೆಯನ್ನು ಸ್ವಲ್ಪ ಮಾತ್ಸರ್ಯದಿಂದ ನೋಡಿರಬಹುದು. ದೊರೆಯ ಕಿರಿಯ ರಾಣಿಯರ ಗುಂಪಿನ ನಾಯಕಿ ಕೌಸಲ್ಯೆ ಮತ್ತು ಕೈಕೇಯಿರ ನಡುವೆ ಒಂದು ರೀತಿಯ ಉದಾಸೀನತೆ ಹಾಗೂ ತಿರಸ್ಕಾರ ಇತ್ತೆಂದು ಸ್ಪಷ್ಟವಾಗುತ್ತದೆ.

ಶ್ರೀರಾಮನು ಅರಮನೆಯಲ್ಲಿ ಕೌಸಲ್ಯೆಗೆಷ್ಟು ಪ್ರಿಯನೋ ಕೈಕೇಯಿಗೂ ಅಷ್ಟೇ ಅಚ್ಚುಮೆಚ್ಚಿನವನಾಗಿದ್ದನು. ದೊರೆಯ ಮೂವರೂ ರಾಣಿಯರಿಗೆ ಮಕ್ಕಳಾದಾಗ ಅವರೆಲ್ಲ ತಮ್ಮ ಸವತಿ ಮಾತ್ಸರ್ಯಬಿಟ್ಟು ಪರಸ್ಪರ ಅನ್ಯೋನ್ಯವಾಗಿದ್ದರು. ಹೀಗಿದ್ದ ಕೈಕೇಯಿಯಲ್ಲಿ ಮಾತ್ಸರ್ಯದ ಕಿಡಿಯನ್ನು ಹೊತ್ತಿಸಿದವಳು ಮಂಥರೆ.

ಮಂಥರೆ ಶ್ರೀರಾಮಾಭಿಷೇಕದ ಸುವಾರ್ತೆಯನ್ನು ಕೈಕೇಯಿಗೆ ಹೇಳಿದಾಗ ಆಕೆ ಕಿಂಚಿತ್ ವಿಚಲಿತಳಾಗಲಿಲ್ಲ. ಆ ವಾರ್ತೆಯನ್ನು ಕೇಳಿ ದ್ವೇಷತಾಳಲಾರದೇ ಸಂತೋಷದಿಂದ ಮಂಥರೆಗೆ ಕೊರಳ ಮುತ್ತಿನಹಾರವನ್ನು ಬಹುಮಾನವಾಗಿ ಕೊಡಲು ಹೋಗುತ್ತಾಳೆ. ರಾಮ ಪಟ್ಟಾಭಿಷೇಕಕ್ಕಿಂತ ಪ್ರೀಯವಾದ ವಾರ್ತೆ ಬೇರಿಲ್ಲ. ಭರತನ ರಾಜ್ಯಕ್ಕಿಂತ ರಾಮನಾಳುವ ಈ ನೆಲ ಹೆಚ್ಚು ಕ್ಷೇಮವಾಗಿರುತ್ತದೆನ್ನುತ್ತಾಳೆ. ಒಂದೊಂದು ಸಂದರ್ಭದಲ್ಲಿ ರಾಮ-ದಶರಥರು ಅವಳನ್ನು ಮುಕ್ತಮನಸ್ಸಿನಿಂದ ಕೊಂಡಾಡುತ್ತಾರೆ.

ರಾಮಾಭಿಷೇಕದಿಂದಾಗುವ ಅನಾಹುತಗಳನ್ನೆಲ್ಲ ಮಂಥರೆ ಎಳೆಎಳೆಯಾಗಿ ಬಿಡಿಸಿಟ್ಟಾಗ ಆಕೆಯ ಕೋಮಲ ಹೃದಯ ಕಲ್ಲಾಗುತ್ತದೆ. ತನ್ನ ಮಗನಿಗೇ ಪಟ್ಟ, ಸವತಿ ಕೌಸಲ್ಯೆಯ ಮಗನಿಗೆ ವನವಾಸ ವಾಗಬೇಕೆಂದು ಪಟ್ಟುಹಿಡಿಯುತ್ತಾಳೆ.

ಕುವೆಂಪು ರಾಮಾಯಣದಲ್ಲಿ ಸವತಿಮಾತ್ಸರ್ಯ ಕಾಣುವುದಿಲ್ಲ ದಶರಥ ತನ್ನ ಮೂವರು ರಾಣಿಯರನ್ನೂ ಕಾಮಭೋಗ ಸುಖದಿಂದ ನೋಡಿಕೊಳ್ಳುತ್ತಿದ್ದ. ಸಂತಾನವಿಲ್ಲದ ಈ ದೊರೆ ಪುತ್ರ ಕಾಮೇಷ್ಠಿ ಯಾಗ ಮಾಡಿ ಅಗ್ನಿದೇವನಿಂದ ದೊರೆತ ಪಾಯಸವನ್ನು ತನ್ನ ಹಿರಿಯ ರಾಣಿಯ ಮೂಲಕ ಉಳಿದ ಮೂವರಿಗೂ ಸೇವಿಸಲು ಹೇಳುತ್ತಾನೆ. ಇದು ಮಡದಿಯರ ಬಗ್ಗೆ ಅವನಿಗಿದ್ದ ನಂಬಿಕೆ ಮತ್ತು ಅವರಲ್ಲಿದ್ದ ಸಾಮರಸ್ಯವನ್ನು ಸೂಚಿಸುತ್ತದೆ. ದರ್ಶನದ ಕವಿ ಗರ್ಭಿಣಿ ಕೈಕೇಯಿಯ ವರ್ಣನೆ ಮಾಡುವಾಗ 'ರಾಜ ಖಡ್ಗವನಾಂತು ಮುತ್ತು ಕೆತ್ತನೆಯಿಂದ ಮಿರುಪ ಚೆಂಬೊನ್ನಿನೊರೆಯಂತೆ' ಮಿಂಚುತ್ತಿದ್ದಳೆನ್ನುತ್ತಾನೆ. ಮಕ್ಕಳಾದ ಮೇಲೂ ಆ ಮೂವರು ತಾಯಂದಿರು ತಮ್ಮ ಸವತಿಯರ ಮಕ್ಕಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು.

ಹುಣ್ಣಿಮೆಯ ಒಂದು ದಿನ ಬಾಲ ರಾಮನು ಚಂದಿರನನ್ನು ನೋಡಿ ಅದನ್ನು ಪಡೆಯಲು ಬಯಸಿ ಕೌಸಲ್ಯೆಯನ್ನು ಪರಿಪರಿಯಾಗಿ ಕಾಡಿಸಿ ಅಳುತ್ತಾನೆ. ಅರಮನೆಯಲ್ಲಿರುವವರೆಲ್ಲರೂ ಏನೇನು ಕೊಟ್ಟರೂ ರಘುರಾಮ ಮಾತ್ರ ತನ್ನ ಅಳುವನ್ನು ನಿಲ್ಲಿಸಲಿಲ್ಲ. ತಾನು ಚಕ್ರವರ್ತಿಯಾದರೂ ತನ್ನ ಮಗನ ಬಯಕೆಯನ್ನು ಈಡೇರಿಸದ ಬಡತನಕ್ಕೆ ದೊರೆ ಮರುಗುತ್ತಾನೆ. ಆ ಹೊತ್ತಿಗೆ ಅಲ್ಲಿ ಭರತನನ್ನು ಕಂಕುಳಲ್ಲಿಟ್ಟುಕೊಂಡು ಮಂಥರೆ ಬರುತ್ತಾಳೆ. ಅವಳು ಕೈಕೇಯಿಗೆ ಏನೇನೋ ಕಿವಿಯಲ್ಲಿ ಹೇಳಿ ತನ್ನ ಮಡಿಲಿನಿಂದ ಕನ್ನಡಿ ತಗೆದುಕೊಡುತ್ತಾಳೆ. ಹರ್ಷಿತಳಾದ ಕೈಕೇಯಿ ಅದನ್ನು ಮಗುರಾಮನಿಗೆ ತೋರಿಸಿದಾಗ ಆ ಬಾನಚಂದಿರ ಕನ್ನಡಿಯಲ್ಲಿ ಪ್ರತಿ ಫಲಿಸಿ, ಬಾನೆಂದುವೆ ದೊರೆತನೆಂದು ರಾಮ ಹಿಗ್ಗಿ ಕುಣಿದಾಡುತ್ತಾನೆ. ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವ ಸ್ವಭಾವ ಮಂಥರೆ ಮತ್ತು ಕೈಕೇಯಿಯರಿಬ್ಬರಿಗೇ ಇದ್ದಿರಬಹುದು.

ವಾಲ್ಮೀಕಿ ರಾಮಾಯಣದಲ್ಲಿ ಕೈಕೇಯಿ ಒಡತಿಯಾದರೆ ಮಂಥರೆ ದಾಸಿ. ಆದರೆ ಈ ಕಾವ್ಯದಲ್ಲಿ ಅವರಿಬ್ಬರದು ತಾಯಿ–ಮಗಳ ಸಂಬಂಧಕ್ಕಿಂತ ಗಾಢವಾದುದು. ಕೆಕೇಯಿ ರಾಜನಿಗೆ ಅರಣ್ಯದಲ್ಲಿ ದೊರೆತ ಈ ಕುರೂಪ ಅನಾಥಶಿಶು ಜಿಗುಪ್ಸೆ ಹಾಗೂ ತಿರಸ್ಕಾರಗಳಿಂದ ಬೆಳೆದಳು. ಅನಂತರ ಕೆಕೇಯರಾಜ ತನ್ನ ಸೌಂದರ್ಯನಿಧಿ ಕೈಕೇಯಿಯ ಪಾಲನೆಗೆ ಅವಳನ್ನು ನೇಮಿಸುತ್ತಾನೆ. ಇದರಿಂದಾಗಿ ಬರಡಾಗಿದ್ದ ಅವಳ ಬದುಕಿನಲ್ಲೊಂದು ಪ್ರೀತಿಯ ಓಯಸಿಸ್ ಉದಯಿಸುತ್ತದೆ. ಅವಳು ಕೈಕೇಯಿಯ ವಿವಾಹದ ನಂತರ ಅವಳ ಜೊತೆಯಲ್ಲಿಯೇ ದಶರಥನ ಅರಮನೆಯನ್ನು ಪ್ರವೇಶಿಸುತ್ತಾಳೆ. ಕೈಕೇಯಿ ಭರತನಿಗೆ ಜನ್ಮ ನೀಡಿದಾಗಂತೂ ಆಕೆಯ ಸೇಡಿನ ಆಸೆ ಗರಿಬಿಚ್ಚುತ್ತಾ ಸಾಗುತ್ತದೆ.

ಮಂಥರೆ ಶ್ರೀರಾಮಾಭಿಷೇಕದ ಶುಭವಾರ್ತೆಯನ್ನು ಹೊತ್ತುತಂದಾಗ ಅದನ್ನು ಕೇಳಿದ ಕೈಕೇಯಿ – ಮಂಥರೆಗೆ ಆಡುವ ಮಾತು –

"ನಿನಗಿದೊ ಕೊಡುಗೆ ಶುಭದ ವಾರ್ತೆಯಂ ತಂದುದಕೆ
ರಾಮನೇಂ? ಭರತನೇಂ? ಮಕ್ಕಳಿರ್ವರುಮೆನ್ನವರ್"[೧೩]

ಇದು ಅವಳ ಹೃದಯದ ನಿರ್ಮಲ ಪ್ರೇಮವನ್ನು ತಿಳಿಸುತ್ತದೆ. ಆದರೆ ಆಕೆ ದಶರಥನನ್ನು ಮದುವೆಯಾಗಿ ಬಂದ ಹೊಸದರಲ್ಲಿ ಅರಮನೆಯಲ್ಲಿ ಅನುಭವಿಸಿದ ನೋವು, ತಿರಸ್ಕಾರ, ನಿಂದನೆಗಳನ್ನು ಮತ್ತು ಶ್ರೀರಾಮನಿಗೆ ಪಟ್ಟಕಟ್ಟಿದ ನಂತರ ಆಗುವ ಎಲ್ಲ ಅನಾಹುತಗಳನ್ನು ಮಂಥರೆ ಬಿಡಿಸಿ ಹೇಳಿ ಅವಳಿಗೆ ಭರತನಿಲ್ಲದ ಆ ವೇಳೆಯಲ್ಲಿ ಕೌಸಲ್ಯಯ ಮಗನಿಗೆ ಪಟ್ಟಕಟ್ಟುವುದು ಎಷ್ಟು ಉಚಿತ ಎನ್ನುತ್ತಾಳೆ. ಇದನ್ನು ಕೇಳಿದ ಕೈಕೇಯಿಯ ಸೇಡಿನ ಕಿಡಿ ಭುಗಿಲೆದ್ದಿತು. ತಾನು ಕಂಡ ಕನಸನ್ನು ಮಂಥರೆ ಹೇಳಿದಾಗಂತೂ ಕೈಕೇಯಿ ಭಯದಿಂದ ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡು –

"ಕಂಗೆಟ್ಟನಗೆ ದಾರಿ ತೋರ್ದಯೌ
ಓ ನನ್ನ ಭಾಗ್ಯದೇವತೆ. ಮರಳಿ ಹಡೆದೆಯೌ
ನೀನೆನ್ನ ತಾಯಿ! ನೀಂ ತೊರೆಯಲಿನ್ನಾರುಗತಿ
ಪರದೇಸಿಯೆನಗೆ ಕಣ್ಣಿರ್ದುಮಾನಿನ್ನೇಗಂ
ಕುರುಡಿಯಾಗಿರ್ದೆನೌ"[೧೪]

– ಎಂದು ಅವಳನ್ನು ಅನಾಥೆಯಂತೆ ಬೇಡಿಕೊಳ್ಳುತ್ತಾಳೆ.

ಇದಾದ ನಂತರ ದಶರಥ ಅವಳನ್ನು ಕಾಣಲು ಬಂದಾಗ ತಾನು ವಿವಾಹಕಾಲಕ್ಕೆ ಕೊಟ್ಟ ಮಾತುಗಳನ್ನೇ ನೆನಪಿಸುತ್ತ ಸ್ವಲ್ಪ ಅನುಮಾನದಿಂದಲೇ ಅಲ್ಲಿಗೆ ಬಂದಿರುತ್ತಾನೆ. ಅವಳ ಅವಸ್ಥೆಯನ್ನು ಕಂಡ ದೊರೆ ಆಕೆಯನ್ನು ಮಾತನಾಡಿಸುತ್ತಾನೆ. ಅವಳ ಈ ಅವಸ್ಥೆಯನ್ನು ಕಂಡು ರಘುರಾಮನ ಮೇಲೆ ಆಣೆಯಿಟ್ಟು, ಆಕೆಯ ಮಾತನ್ನು ಈಡೇರಿಸುತ್ತೇನೆನ್ನುತ್ತಾನೆ. ಬೇಟೆ ಬಲೆಗೆ ಬಿದ್ದುದನ್ನು ಕಂಡ ಕೈಕೇಯಿ ವಿವಾಹಕಾಲದಲ್ಲಿ ನೀಡಿದ ಎರಡು ವರಗಳನ್ನು ಕೇಳುತ್ತಾಳೆ. ಒಂದು ಭರತನ ಪಟ್ಟಾಭಿಷೇಕ, ಎರಡು ರಾಮನ ವನವಾಸ. ಈ ಮಾತುಗಳನ್ನು ಕೇಳುತ್ತಿದ್ದಂತೆ ದೊರೆಯ ದೃಷ್ಟಿ ಮಂದವಾಗಿ, ಮೈನಡುಗಿ ಮೂರ್ಛೆಗೊಳ್ಳುತ್ತಾನೆ. ಆ ಕ್ಷಣ ಕೈಕೇಯಿ ಅವನಿಗೆ ಶೈತ್ಯೋಪಚಾರ ಮಾಡಿ ಏಳಿಸುತ್ತಾಳೆ. ಕೈಕೇಯಿ ದಶರಥನ ಬಾಯಿಂದ ಕಟುನಿಂದನೆಯ ಮಾತುಗಳನ್ನು ಕೇಳುತ್ತಾಳೆ. ಅವಳನ್ನು ಮೂದಲಿಸುತ್ತ ದೊರೆ.

"ರಾಮನನ್ನಲ್ತು ಕೇಳ್ಕೈಕೆ
ನೀನಡವಿಗಟ್ಟುತಿಹೆ ನಿನ್ನ ಮಾಂಗಲ್ಯಮಂ" [೧೫] ಎನ್ನುತ್ತಾನೆ.

[illegible]

[illegible]

[illegible]

[illegible]

[illegible]

[illegible]

ದೊರೆಯ ಈ ದುರವಸ್ಥೆಯನ್ನು ಕಂಡ ಕೈಕೇಯಿಯ ಕಲ್ಲೆದೆ ಕರಗಿ ಬಾಯಿ ಬಿಡುತ್ತಾಳೆ. ತಾನು ಕೇಳಿದ ವರಗಳು ಅವಳಲ್ಲಿ ಭಯ ಹುಟ್ಟಿಸುತ್ತವೆ. ಅವಳು ಮೈನಡುಗಿ, ಕೊರಳಸೆರೆಬಿಗಿದು ಗದ್ಗದಿತಳಾಗಿ, ಪತಿಗೆ ರಾಜೇಂದ್ರ ನೀನು ಕೊಟ್ಟವರಗಳನ್ನು ಹಿಂದೆ ತಗೆದುಕೊಳ್ಳು. ನಿನಗೆ ಈ ರೀತಿ ನೋವೆಸಗಿ ನಾನು ಮತ್ತು ತವರಿನಲ್ಲಿರುವ ನನ್ನ ಮಗ ಕ್ಷೇಮದಿಂದರಬಲ್ಲುವೆ? ನೀನು ರಾಮನ ಮೇಲೆ ಆಣೆಯಿಟ್ಟದ್ದರಿಂದ ಹೀಗೆ ಹೇಳಿದೆನು? ಆದರೆ ನಿನಗೆ ಅಮಂಗಳವನ್ನುಂಟು ಮಾಡಲು ಅಲ್ಲ ಎನ್ನುವಲ್ಲಿ ಅವಳಲ್ಲಿದ್ದ ಸಹಜಪ್ರೇಮ ಗೊತ್ತಾಗುತ್ತದೆ.

ತನ್ನ ಬಗೆಗೆ ದೊರೆ ಕಠೋರವಾಗಿ ಮಾತನಾಡಿದಾಗ ಅವುಗಳನ್ನು ಸಹಿಸದ ಕೈಕೇಯಿ –

"ಲೇಸಾಯ್ತು, ಲೇಸಾಯ್ತು: ತಪ್ಪು
ನಿನ್ನದಾಗಿರಲೇತಕೆನ್ನನ್ನೀಪರಿ ಬಯ್ದು
ವರ್ತಿಸುತಿರ್ಪೆ ಸಾಮಾನ್ಯ ನೊಲ್
ಮಾವನ ಮನೆಗೆ ಕಳುಹುವ ನೆವದಿ ಕಂದನಂ
ನಾಡಿಂದೆ ಪೊರಗಟ್ಟಿ ಭರತನಿಲ್ಲದ ವೇಳೆ
ಕಿತವರುಪದೇಶದಿಂದ ಶ್ಲೀಲದಾತುರದಿಂದೆ
ಪಟ್ಟಮಹಿಷಿಯ ಮಗಗೆ ಗುಟ್ಟಾಗಿ ಪಟ್ಟಮಂ
ಕಟ್ಟುವೀ ಕುಹಕ ವಿದ್ಯಾಪ್ರವೀಣಂ ನೀನ್"[೧]

– ಎಂದು ಇದೊಂದೇ ಸಲ ದೊರೆಯ ಮೇಲೆ ಕಠೋರವಾಗಿ ನುಡಿಯುತ್ತಾಳೆ. ಇದಾದ ನಂತರ ಅವಳೆಂದೂ ಇಂಥ ಕಟುನುಡಿಗಳನ್ನು ಕಾವ್ಯದಲ್ಲಿ ಆಡುವುದಿಲ್ಲ. ಶ್ರೀರಾಮನು ಅಯೋಧ್ಯೆಯನ್ನು ಬಿಟ್ಟು ಕಾಡುಪಾಲಾದ ನಂತರ ಮುದಿದೊರೆ ಅವಳಿಗೆ ಬೈಯ್ದು, ಹಳಿದು, ನಿಂದಿಸಿ ತನ್ನೆರಡೂ ಕೈಗಳಿಂದ ಧೂಳನ್ನೆತ್ತಿ ಅವಳ ಮೈಮೇಲೆ ಒಗೆದು ಬಯಲನ್ನು ನೋಡಿ ಅವಳೇ ಬಂದಳೆಂದು ಥೂ ಎಂದು ಎಂಜಲು ಉಗುಳುತ್ತಾನೆ. ನಡುರಾತ್ರಿಯಲ್ಲಿ ಅವಳನ್ನು ಕರೆಸಿ ಅವಳ ಮುಖದ ಮೇಲೆ ಹರಿವಾಣವನ್ನು ಎಸೆಯುತ್ತಾನೆ. ತನ್ನೆರಡೂ ಕಣ್ಣುಗಳನ್ನು ಕಿತ್ತುಕೊಂಡು ಕೈಕೇಯಿಗೆ ತೋರಿಸುತ್ತಾನೆ.

ತನ್ನ ಕಣ್ಣೆದುರೇ ದೊರೆಯ ಇಂಥ ಅವಸ್ಥೆಯನ್ನು ಕಂಡ ಕೈಕೇಯಿ ಮಾನಸಿಕವಾಗಿ ಪೂರ್ಣಕುಗ್ಗಿ ಹೋದಳು. ಅದೆಲ್ಲವನ್ನು ಸಹಿಸಿ ಮೌನಶಿಲೆಯಾದಳು.

ಮುಂದೆ ವಾಲ್ಮೀಕಿ ಹೇಳದೇ ಬಿಟ್ಟದ್ದನ್ನು ದರ್ಶನದ ಕವಿ ಉಲ್ಲೇಖಿಸುತ್ತಾನೆ. ತನ್ನ ಮಗ ತವರಿನಿಂದ ಆಗಮಿಸಿದಾಗ ಆತ ಅರಮನೆಯ ಈ ದುರ್ಗತಿಯನ್ನು ಕಂಡು ತಾಯಿಯನ್ನು ಮಾತನಾಡಿಸಿದಾಗ, ಅವಳು ದಿಕ್ಕೆಟ್ಟು ಓಡಿಬಂದು ಮಗನಕಾಲು ಹಿಡಿದು, ಕಂಬನಿ ಸುರಿಸುತ್ತ –

[illegible]

[illegible]

[illegible]

[illegible]

[illegible]

[illegible]

"ಕೈಬಿಡದಿರೆನ್ನಂ ಮಗನೇ ಕೆಟ್ಟಳೆನ್!
ಜಗವೇ ಕೈಬಿಟ್ಟಳೆನ್! ನೂಂಕು ನರಕಕೆ; ಸಹಿಸಿ
ಬಹೆನೊ ಕೇಡಂ ತವಿಸಿ, ನೂಂಕದಿರು ಶೂನ್ಯತೆಗೆ"[೧೭]

– ಎಂದು ಜಗತ್ತೇ ನನ್ನನ್ನು ತೊರೆದಿದೆ ನೀನೂ ಕೈಬಿಡಬೇಡ ಎನ್ನುವಲ್ಲಿ ಅವಳಿಗಾದ ತೀವ್ರದುಃಖದ ಅರಿವು ಎಂಥವರಿಗಾದರೂ ಅರಿವಿಗೆ ಬರುತ್ತದೆ.

ಶ್ರೀರಾಮ ವನವಾಸ ಮುಗಿಸಿ ಅಯೋಧ್ಯೆಗೆ ಬರುವಾಗ ಅವನನ್ನು ಎದುರುಗೊಳ್ಳಲು ಇಡೀ ಅಯೋಧ್ಯೆಯೇ ಸಿದ್ಧವಾಗಿ ಹೋಗುತ್ತಿದೆ. ಆಗ ಕೈಕೇಯಿಯ ಅರಮನೆಗೆ ಸುಮಿತ್ರೆ, ಮಾಂಡವಿ, ಊರ್ಮಿಳೆಯರು ಬಂದಾಗ ಕೈಕೇಯಿಯನ್ನು ಕವಿ ಹೀಗೆ – "ಕೃಷ ಮಲೀನ ಮೂಕಶೋಕದ ಶಿಲಾ ಪ್ರತಿಮಳಾದ, ಪಾಳುಬಿದ್ದ ಪೂಜಾರಹಿತ, ದೇವಮಂದಿರದ ವಿಗ್ರಹದಂತೆ ಮ್ಲಾನಳಾದ, ಗುರುದುರಿತ ದುಃಖಭಾರದಲ್ಲಿ ಕುಸಿದು ಕಡುದೀನೆಯಾದ, ರಾಮಮಾತೆಯ ತೋಳು ತೆಕ್ಕೆಯಲ್ಲಿ ಅಳುತ್ತಿದ್ದ ಕೈಕೇಯಿಯನ್ನು ತನ್ನಡಿಗೆ ನಮಿಸಿದ ಊರ್ಮಿಳೆಯನ್ನೆತ್ತಿ ಕೈಕೆ ಮುತ್ತೊತ್ತುತ್ತಾಳೆ ಏನೆಂದೂ ಮಾತನಾಡದೇ ಶಿಲಾಮೌನದಿಂದ ಕಂಬನಿಗರೆಯುತ್ತಾಳೆ. ಎಲ್ಲರ ದುಃಖಕ್ಕೆ ಕೊನೆಯುಂಟು; ಆದರೆ ಕೈಕೇಯಿಯ ಅಂತರಂಗವೇ ಪೂರ್ವನೆನಪಿನ ಕಾಳ್ಗಿಚ್ಚಿನಲ್ಲಿ ದ್ರವಿಸಿ ಹರಿಯುತ್ತಿರುವ ದುಃಖಕ್ಕೆ ಕೊನೆಯಿಲ್ಲ"[೧೮]

ತನ್ನ ಹಾಗೆ ಹದಿನಾಲ್ಕು ವರ್ಷ ಏಕಾಂಗಿಯಾಗಿ ತಪಸ್ಸಿನಲ್ಲಿ ಕಳೆದ ಊರ್ಮಿಳೆಯ ಮುದ್ದುಮುಖವನ್ನೆತ್ತಿ ನಸುನಗುತ್ತಾಳೆ. ಹದಿನಾಲ್ಕು ವರ್ಷಗಳಿಂದ ನಗಲಾರದ ಕೈಕೇಯಿ ಅಂದು ಮಾತ್ರ ನಗುತ್ತಾಳೆ.

ಶ್ರೀರಾಮ ತನಗೆ ವಂದಿಸಲು ಬಂದಾಗ ಅವನನ್ನು ಮಾಹಾಮೌನದಿಂದಲೇ ಹರಸುತ್ತಾಳೆ. ರಾಮನಲ್ಲಿಯ ರಾಮತ್ವ ಪ್ರಕಾಶಕ್ಕೆ ಕೈಕೇಯಿಯೇ ಕಾರಣಳೆಂಬಂತೆ, ಕವಿ ಅವಳನ್ನು ಚಿತ್ರಿಸಿದ್ದಾರೆ. ಅರಮನೆಯನ್ನೇ ಆಶ್ರಮವನ್ನಾಗಿ ಮಾಡಿಕೊಂಡು ತಪಗೈದವಳು ಕೈಕೇಯಿ ಅಂತಿಮವಾಗಿ ಶ್ರೀರಾಮನ ದರ್ಶನಮಾಡಿ ಪುನೀತಳಾದಳು.

೩) ಮಂಥರಾದೇವಿ :

ವಾಲ್ಮೀಕಿ ರಾಮಾಯಣದಲ್ಲಿ ಕೇವಲ ಒಂದೆರಡು ಕಡೆಗೆ ಮಾತ್ರ ಕಾಣುವ ಈ ಪಾತ್ರವನ್ನು ದರ್ಶನದ ಕವಿ 'ಮಮತೆಯ ಸುಳಿ' ಎಂದು ಬಣ್ಣಿಸಿದ್ದಾರೆ. ಈಕೆ ಕೈಕೇಯಿಯ ಅನೇಕ ದಾಸಿಯರಲ್ಲಿ ಒಬ್ಬಳಾಗಿದ್ದಳು. ಮತ್ತು ಕೈಕೇಯಿಯ ವಿವಾಹವಾದ ನಂತರ ಕೈಕೇಯಿಯೊಂದಿಗೆ ಅಯೋಧ್ಯೆಗೆ ಆಗಮಿಸಿದ್ದಳು.

ಈಕೆಯ ಪ್ರವೇಶ ಕಾವ್ಯದಲ್ಲಾಗುವುದು ಬಾಲರಾಮ ಹೊಳೆವ ಚಂದಿರನನ್ನು ಬಯಸಿ ಕೌಸಲ್ಯಯನ್ನು ಕಾಡುವ ಸಂದರ್ಭದಲ್ಲಿ ಆಕಾಶದ ಆ ಚಂದ್ರ ಭೂಮಿಗೆ ಬರಲಾರನೆಂದು ಅವಳೆಷ್ಟೇ ಹೇಳಿದರೂ ಆತ ಕೇಳದೇ ಹಠಮಾಡುತ್ತಾನೆ. ಮಗುವಿನ ದುಃಖಕ್ಕೆ ಕಾರಣ ಕೇಳಿದ ದೊರೆ ದಶರಥ ಅರಮನೆಯಲ್ಲಿ ಏನೇನೋ ತೋರಿಸಿ ಮಗುವನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾನೆ. ಮಗುವು ಹಠನಿಲ್ಲಿಸದಾದಾಗ ದೊರೆ ತಾನು ಅರಸನಾದರೂ ತನ್ನ ಸ್ವಂತಮಗುವಿನ ಬಯಕೆಯನ್ನು ಈಡೇರಿಸಲಾಗಲಿಲ್ಲವಲ್ಲ ಎಂದು ಕೊರಗುತ್ತಾನೆ. ತಾನೇ ಆ ಮಗುವನ್ನು ಉದ್ಯಾನಕ್ಕೆ ಕರೆತಂದು ಜಿಂಕೆ, ನವಿಲು ಏನೇನನ್ನೋ ತೋರಿಸುತ್ತಾನೆ. ಆಗಲೂ ಮಗು ತನ್ನ ಅಳುವನ್ನು ನಿಲ್ಲಿಸಲಿಲ್ಲ. ದೊರೆಗೆ ದಿಗ್ಭ್ರಮೆ. ಮಂತ್ರಿಯನ್ನು ಕರೆಸಿ ಸಮಾಧಾನಪಡಿಸಲು ಪ್ರಯತ್ನಿಸಿದರೂ ಪ್ರಯೋಜನವಾಗದಿದ್ದಾಗ ಎಲ್ಲರಿಗೂ ದಿಕ್ಕೇ ತೋಚದಾಗುತ್ತದೆ.

ಆ ಸಂದರ್ಭದಲ್ಲಿ ಭರತನನ್ನು ಕಂಕುಳಲ್ಲಿಟ್ಟುಕೊಂಡು ಗೂನಿ ಮಂಥರೆ ಪ್ರವೇಶಿಸುತ್ತಾಳೆ. ಅಲ್ಲಿರುವ ಎಲ್ಲರೂ ಈಕೆಯನ್ನು ನೋಡಿ ಅಮಂಗಳವನ್ನು ಕಂಡಂತೆ ಮುಖದಿರುವಿ ದೂರಸರಿದು ನಿಲ್ಲುತ್ತಾರೆ. ಆದರೆ ಕೈಕೇಯಿ ಮಾತ್ರ ತನ್ನ ಹೆತ್ತ ತಾಯಿಯಂತೆ ಇವಳನ್ನು ಮಾತನಾಡಿಸುತ್ತಾನೆ. ಆಕೆಯ ವರ್ಣನೆಯನ್ನು ಕವಿ –

"ಕಡುಬಿಲ್ಲುಬಾಗಿದ ಮೈಯ್ಯ
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ
ಗೂಳಿ ಹಿಣಿಲಿನವೋಲು ಗೂನುವುಬ್ಬಿದ ಬೆನ್ನ,
ಪಲ್ಲುದುರಿ ಬೋಡಾದ ಬಚ್ಚುಬಾಯಿಯ, ಕುಳಿಯ
ಕೆನ್ನೆಗಳು, ದಿಟ್ಟಿಮಾಸಿದ ಕಣ್ಣ ಕೋಟರದ
ಕರ್ಬುನ ಮೊರಡು ಮೊಗದ
ಸ್ಥವಿರೆಯಂ
ಕಂಡೊಡನೆ ಕೈಕೆ ನಡೆದಳ್ ಬಳಿಗೆ, ನುಡಿಸಿದಳ್
ತಾಯಿವೊಲ್ ಸಾಕಿಸಲುಹಿದ ದಾಸಿ ಮಂಥರೆಯ"[೧೯]

ಇದನ್ನು ಗಮನಿಸಿದಾಗ ಮಂಥರೆ ಎಂಥ ಮಡಿವಂತಿಕೆಯ ಸಮಾಜದ ನಡುವೆ ಬದುಕಿದ್ದಳು. ಅವಳು ಎಂಥ ಪರಸ್ಥಿತಿಯಲ್ಲೂ ಕೈಕೇಯಿಯ ಮೇಲಿನ ಪ್ರೇಮವನ್ನು ಕಡಿದುಕೊಳ್ಳಲಲಿಲ್ಲ. ಇಡೀ ಅಯೋಧ್ಯೆಯೇ ಮಂಥರೆಯನ್ನು ತಿರಸ್ಕರಿಸಿದರೆ ಕೈಕೇಯಿ ಅವಳನ್ನು ಹೆತ್ತ ತಾಯಿಯಂತೆ ಎದೆಗಪ್ಪಿ ಪ್ರೀತಿಸುತ್ತಿದ್ದಳು. ಇದರರ್ಥ ಅವರಿಬ್ಬರಲ್ಲಿ ಅವಿನಾಭಾವ ಪ್ರೇಮವಿತ್ತು.

[illegible]

[illegible]

[illegible]

[illegible]

ಮಂಥರೆಯ ಹಿನ್ನೆಲೆಯನ್ನು ನಾವು ಗಮನಿಸಿದಾಗ ಕೇಕೆಯರಾಜನೊಂದು ದಿನ ಬೇಟೆಯಾಡಲು ಹೋಗಿದ್ದಾಗ ಆ ನಿರ್ಜನ ನಿಭಿಡಾರಣ್ಯದಲ್ಲಿ ಶಿಶುರೋದನವೊಂದು ಕೇಳಿಸುತ್ತದೆ. ಆ ಧ್ವನಿಯನ್ನು ಕೇಳಿದ ದೊರೆ ಅಲ್ಲಿಗೆ ಬರುವಷ್ಟರಲ್ಲಿ ಆ ಮಗುವಿಗೆ ಮುಳ್ಳು, ಮಣ್ಣು, ತರಗೆಲೆ ಮತ್ತು ಇರುವೆಗಳು ಮುತ್ತಿದ್ದವು. ಆ ಮಗುವನ್ನು ನೋಡಿದ ದೊರೆ ಕರುಣೆಗೊಂಡು ಅದನ್ನು ಎತ್ತಿಕೊಂಡು ಅರಮನೆಗೆ ತರುತ್ತಾನೆ. ಅರಮನೆಯಲ್ಲಿ ಅ ಮಗು ಕುಳ್ಳಾಗಿ, ಗೂನಾಗಿ, ತೊತ್ತಾಗಿ, ಕರ್ರಗೆ ಬೆಳೆಯಿತು. ಆಕೆಯನ್ನು ಕಂಡವರೆಲ್ಲ ಪರದೇಶಿ ಕಂದನೆಂದು, ಚಿ; ತೊಲಗೆಂದು, ಥೂ ಎಂದು ಸಾಯಿಯೆಂದು ನಾಯಿಮರಿಗಿಂತ ಕಡೆಯಾಗಿ ಕಂಡರು. ಜನರು ಈಕೆಯನ್ನು ಪಶುವಿಗಿಂತ ಕಡೆಯಾಗಿ ಕಂಡರು. ಕೊನೆಗೆ ಆಕೆಯನ್ನು ಮಂಥರೆ (ಕೆಸರು) ಎಂದು ಕರೆದರು.

ಜನರ ನಿಂದನೆಗಳಿಂದ ಮಂಥರೆಗೆ ಬಹುಶಃ ಬದುಕು ಬೇಸರವಾಗಿರಬಹುದು. ಆ ಸಂದರ್ಭದಲ್ಲಿ ಕೇಕೆಯ ರಾಜನಿಗೊಂದು ಹೆಣ್ಣು ಶಿಶು ಕೈಕೇಯಿ ಹುಟ್ಟಿದಳು. ರಾಜ ಇವಳಿಗೆ ಮಗುವನ್ನು ಆಡಿಸುವ ಕೆಲಸವನ್ನು ಒಪ್ಪಿಸುತ್ತಾನೆ. ಬರಡಾಗಿದ್ದ ಅವಳ ಬಾಳಿಗೊಂದು ಆಸೆಯ ಮೊಗ್ಗು ಮೂಡುತ್ತದೆ. ಇದರಿಂದಾಗಿ ಮಂಥರೆಗೆ ಇದೂವರೆಗೆ ಅರಮನೆಯಲ್ಲಿ ಅದ ಅಪಮಾನ, ಅನ್ಯಾಯ, ತಿರಸ್ಕಾರಗಳನ್ನೆಲ್ಲ ಸಹಿಸಿ ಕೈಕೇಯಿಯಲ್ಲಿ ತನ್ನನ್ನೇ ತಾನು ಮರೆತಳು.

ಹಡೆದವರೇ ತನ್ನನ್ನು ಬೀದಿಗೆ ಬೀಸಾಕಿ ಹೋಗಿರುವಾಗ ಕೇಕೆಯರಾಜ ತನ್ನನ್ನು ತಂದು ಸಾಕಿದ. ಎಲ್ಲರು ತೀರಸ್ಕರಿಸಿದರೂ ಈಗ ತನ್ನ ಔರಸಪುತ್ರಿಯನ್ನು ನೋಡಿಕೊಳ್ಳುವ ಕೆಲಸ ಒಪ್ಪಿಸಿದಾಗ ಬಹುಶ; ದೊರೆಯ ಬಗೆಗೆ ಆಕೆಯಲ್ಲಿ ಕನಿಕರ ಮೂಡಿರಬೇಕು.

ಕೈಕೇಯಿಯ ವಿವಾಹದ ನಂತರ ಅವಳು ಕೈಕೇಯಿಯೊಂದಿಗೆ ದಶರಥನ ಅರಮನೆಯನ್ನು ಸೇರಿ ಅಲ್ಲಿ ಎಲ್ಲರ ನಿಂದನೆ ಮತ್ತು ಉಪೇಕ್ಷೆಗಳಿಗೊಳಗಾದಳು. ಅಲ್ಲಿ ಪ್ರತಿಯೊಬ್ಬರೂ – ಈಕೆಯನ್ನು

"ಶನಿಯೆನುತೆ,
ಶಪಿಸುದುದು ಮಂದಿ, ಕಂಡರೆ ಹುಬ್ಬುಗಂಟಿಕ್ಕಿ
ದೂರಸರಿದುದು ಮೊಸಳೆಗಂಡಂತೆ, ಸನಿಹಕ್ಕೆ
ಬರಗೊಡರ್, ಗಾಳಿ ಸೋಂಕುವುದೆಂಬ ಮೈಲಿಗೆಗೆ
ಪೇಸಿ ಬಳಿಗೀಶ್ವರಾರಾಧನೆಗೆ ಸೇರಿಸರ್,
ಉಣಲಿಡುವ ಪೊಳ್ತು ಪೊರನೂಂಕುವರ್ ತೊಳ್ತುಗಳ್"[೫೦]

ಮಂಥರೆಯ ಸ್ಥಾನದಲ್ಲಿ ಬೇರೆ ಯಾರೇ ಆಗಿದ್ದರೆ ಒಂದು ಕ್ಷಣವೂ ಅಲ್ಲಿರುತ್ತಿರಲಿಲ್ಲ. ಇಷ್ಟೆಲ್ಲ ಕಷ್ಟಕೋಟಲೆಗಳನ್ನು ಮಂಥರೆ ಸಹಿಸಿಕೊಂಡದ್ದು ಕೈಕೇಯಿಯ ಮೇಲಿನ ಮಮತೆಯಿಂದ, ಈ

ಮಂಥರೆಯ ಹಿನ್ನೆಲೆಯನ್ನು ನಾವು ಗಮನಿಸಿದಾಗ ಕೇಕೆಯರಾಜನೊಂದು ದಿನ ಬೇಟೆಯಾಡಲು ಹೋಗಿದ್ದಾಗ ಆ ನಿರ್ಜನ ನಿಭಿಡಾರಣ್ಯದಲ್ಲಿ ಶಿಶುರೋದನವೊಂದು ಕೇಳಿಸುತ್ತದೆ. ಆ ಧ್ವನಿಯನ್ನು ಕೇಳಿದ ದೊರೆ ಅಲ್ಲಿಗೆ ಬರುವಷ್ಟರಲ್ಲಿ ಆ ಮಗುವಿಗೆ ಮುಳ್ಳು, ಮಣ್ಣು, ತರಗೆಲೆ ಮತ್ತು ಇರುವೆಗಳು ಮುತ್ತಿದ್ದವು. ಆ ಮಗುವನ್ನು ನೋಡಿದ ದೊರೆ ಕರುಣೆಗೊಂಡು ಅದನ್ನು ಎತ್ತಿಕೊಂಡು ಅರಮನೆಗೆ ತರುತ್ತಾನೆ. ಅರಮನೆಯಲ್ಲಿ ಅ ಮಗು ಕುಳ್ಳಾಗಿ, ಗೂನಾಗಿ, ತೊತ್ತಾಗಿ, ಕರ್‍ರಗೆ ಬೆಳೆಯಿತು. ಆಕೆಯನ್ನು ಕಂಡವರೆಲ್ಲ ಪರದೇಶಿ ಕಂದನೆಂದು, ಚಿ; ತೊಲಗೆಂದು, ಥೂ ಎಂದು ಸಾಯಿಯೆಂದು ನಾಯಿಮರಿಗಿಂತ ಕಡೆಯಾಗಿ ಕಂಡರು. ಜನರು ಈಕೆಯನ್ನು ಪಶುವಿಗಿಂತ ಕಡೆಯಾಗಿ ಕಂಡರು. ಕೊನೆಗೆ ಆಕೆಯನ್ನು ಮಂಥರೆ (ಕೆಸರು) ಎಂದು ಕರೆದರು.

ಜನರ ನಿಂದನೆಗಳಿಂದ ಮಂಥರೆಗೆ ಬಹುಶ: ಬದುಕು ಬೇಸರವಾಗಿರಬಹುದು. ಆ ಸಂದರ್ಭದಲ್ಲಿ ಕೇಕೆಯ ರಾಜನಿಗೊಂದು ಹೆಣ್ಣು ಶಿಶು ಕೈಕೇಯಿ ಹುಟ್ಟಿದಳು. ರಾಜ ಇವಳಿಗೆ ಮಗುವನ್ನು ಆಡಿಸುವ ಕೆಲಸವನ್ನು ಒಪ್ಪಿಸುತ್ತಾನೆ. ಬರಡಾಗಿದ್ದ ಅವಳ ಬಾಳಿಗೊಂದು ಆಸೆಯ ಮೊಗ್ಗು ಮೂಡುತ್ತದೆ. ಇದರಿಂದಾಗಿ ಮಂಥರೆಗೆ ಇದೂವರೆಗೆ ಅರಮನೆಯಲ್ಲಿ ಅದ ಅಪಮಾನ, ಅನ್ಯಾಯ, ತಿರಸ್ಕಾರಗಳನ್ನೆಲ್ಲ ಸಹಿಸಿ ಕೈಕೇಯಿಯಲ್ಲಿ ತನ್ನನ್ನೇ ತಾನು ಮರೆತಳು.

ಹಡೆದವರೇ ತನ್ನನ್ನು ಬೀದಿಗೆ ಬೀಸಾಕಿ ಹೋಗಿರುವಾಗ ಕೇಕೆಯರಾಜ ತನ್ನನ್ನು ತಂದು ಸಾಕಿದ. ಎಲ್ಲರು ತೀರಸ್ಕರಿಸಿದರೂ ಈಗ ತನ್ನ ಔರಸಪುತ್ರಿಯನ್ನು ನೋಡಿಕೊಳ್ಳುವ ಕೆಲಸ ಒಪ್ಪಿಸಿದಾಗ ಬಹುಶ; ದೊರೆಯ ಬಗೆಗೆ ಆಕೆಯಲ್ಲಿ ಕನಿಕರ ಮೂಡಿರಬೇಕು.

ಕೈಕೇಯಿಯ ವಿವಾಹದ ನಂತರ ಅವಳು ಕೈಕೇಯಿಯೊಂದಿಗೆ ದಶರಥನ ಅರಮನೆಯನ್ನು ಸೇರಿ ಅಲ್ಲಿ ಎಲ್ಲರ ನಿಂದನೆ ಮತ್ತು ಉಪೇಕ್ಷೆಗಳಿಗೊಳಗಾದಳು. ಅಲ್ಲಿ ಪ್ರತಿಯೊಬ್ಬರೂ – ಈಕೆಯನ್ನು

"ಶನಿಯೆನುತೆ,
ಶಪಿಸುದುದು ಮಂದಿ, ಕಂಡರೆ ಹುಬ್ಬುಗಂಟಿಕ್ಕಿ
ದೂರಸರಿದುದು ಮೊಸಳೆಗಂಡಂತೆ, ಸನಿಹಕ್ಕೆ
ಬರಗೊಡರ್, ಗಾಳಿ ಸೋಂಕುವುದೆಂಬ ಮೈಲಿಗೆಗೆ
ಪೇಸಿ ಬಳಿಗೀಶ್ವರಾರಾಧನೆಗೆ ಸೇರಿಸರ್,
ಉಣಲಿಡುವ ಪೊಳ್ತು ಪೊರನೂಂಕುವರ್ ತೊಳ್ತುಗಳ್"[೨೦]

ಮಂಥರೆಯ ಸ್ಥಾನದಲ್ಲಿ ಬೇರೆ ಯಾರೇ ಆಗಿದ್ದರೆ ಒಂದು ಕ್ಷಣವೂ ಅಲ್ಲಿರುತ್ತಿರಲಿಲ್ಲ. ಇಷ್ಟೆಲ್ಲ ಕಷ್ಟಕೋಟಲೆಗಳನ್ನು ಮಂಥರೆ ಸಹಿಸಿಕೊಂಡದ್ದು ಕೈಕೇಯಿಯ ಮೇಲಿನ ಮಮತೆಯಿಂದ, ಈ

ಕಾರಣಕ್ಕಾಗಿಯೇ ಕವಿ ಇವಳನ್ನು 'ಮಮತೆಯ ಸುಳಿ' ಎಂದಿದ್ದಾನೆ. ಕೈಕೇಯಿಗೆ ಗಂಡುಮಗು ಜನಿಸಿದಾಗ ಇವಳಿಗೆ ಮೂರನೇ ಕಣ್ಣುಮೂಡಿದಂತಾಯಿತು.

ಶ್ರೀರಾಮನ ಪಟ್ಟಾಭಿಷೇಕದ ಆ ದಿನ ಮಂಗಳವಾದ್ಯದ ಸದ್ದನ್ನು ಆಲಿಸಿದ ಆಕೆ ರಾಜಬೀದಿಗೆ ಬಂದು ಅಲ್ಲಿ ಕೌಸಲ್ಯಯದಾಸಿಯಿಂದ ಆತನ ಪಟ್ಟಾಭಿಷೇಕದ ಸುದ್ದಿ ಕೇಳುತ್ತಾಳೆ. ಆ ಸುದ್ದಿ ಕೇಳಿದೊಡನೆಯೇ ಹೃದಯವೊಡೆದಂತೆ ತತ್ತರಿಸುತ್ತಾಳೆ. ಅವಳ ಇಡೀ ಲೋಕದಲ್ಲೆಲ್ಲ ಆವರಿಸಿದ್ದವರು ಕೈಕೇಯಿ ಮತ್ತು ಆಕೆಯ ಸುಕುಮಾರ ಭರತ. ಇವರಿಬ್ಬರನ್ನುಳಿದು ಇನ್ನಾರಿಗೂ ಈ ಅಯೋಧ್ಯೆಯ ಆಧಿಕಾರದ ಗದ್ದುಗೆ ಸಿಗಬಾರದೆಂಬುದು ಇವಳ ಅಭಿಮತ.

ಅಂದು ರಾತ್ರಿ ತಾನು ಕಂಡ ಕನಸಿಗೂ ಮತ್ತು ಈಗ ನಡೆಯುತ್ತಿರುವ ಘಟನೆಗೂ ನೇರ ಸಂಬಂಧವನ್ನು ಕಲ್ಪಿಸಿ, ಅಳುತ್ತ ತನ್ನ ಒಡತಿ ಕೈಕೇಯಿಗೆ ನಡೆದುದೆಲ್ಲವನ್ನೂ ಹೇಳುತ್ತಾಳೆ. ತಾನು ಏನೇ ಹೇಳಿದರೂ ಅದನ್ನು ಕೇಳಿ ದ್ವೇಷತಾಳದ ಕೈಕೇಯಿಯನ್ನು ಕುರಿತು –

"ಭರತನಂ
ರಾಮಂಗೆ ತೊಳ್ತುಗೆಯ್ಯದೆ ಪಳುವಕಾದೊಡಂ
ಕಳುಹು, ದಯೆದೋರು, ನಾನವನೊಡನೆ ಪೋದಪೆನ್
ಶುಶ್ರೂಷೆಗೆಯ್ಯೆ, ಭಿಕ್ಷೆಯಿದೆನಗೆ ನಿನ್ನಿಂದ"[೩೧] ಎನ್ನುತ್ತಾಳೆ.

ತನ್ನ ಒಡತಿಯ ಮಗ ಭರತ ಕೈಕೇಯಿಯ ತವರು ಮನೆಯಿಂದ ಬಂದಾಗ ಅವಳು ಮುಂಗಾರಿನ ನವಿಲಿನಂತೆ ಕುಣಿಯುತ್ತಾಳೆ. ತನ್ನ ಯೋಜನೆಯಂತೆ ಭರತನಿಗೇ ಅಯೋಧ್ಯೆಯ ಅಧಿಕಾರ ದೊರೆತೀತೆಂದು ಸಂಭ್ರಮಿಸಿದಳು. ಆ ಸಂದರ್ಭದಲ್ಲಿ ಭರತನನ್ನು ಕಾಣಲು ಕೈಕೇಯಿಯ ಅರಮನೆಗೆ ಬರುತ್ತಾಳೆ. ಈಗಾಗಲೇ ಈಕೆಯ ಕುತಂತ್ರದಿಂದಾಗಿ ರಾಮನಿಗೆ ವನವಾಸ ಪ್ರಾಪ್ತವಾಗಿರುವುದನ್ನು ತಿಳಿದಿದ್ದ ಶತೃಘ್ನ ಅವಳನ್ನು ಹಿಡಿದೆತ್ತಿ ಕಲ್ನೆಲಕ್ಕೆ ಕುಕ್ಕಿ, ಅವಳ ಗೂನು ಬಿರಿಯುವಂತೆ ಬಾರಿಸುತ್ತಾನೆ. ಆ ನೋವನ್ನು ಸಹಿಸಲಾರದ ಆಕೆ ಭರತನನ್ನೇ ಕೂಗಿಕರೆದು ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಅವಳನ್ನು ಕಂಡಭರತ –

"ತೊಲಗೆಲೆ ಕುರೂಪಿ, ಓ ತೊಲಗು ಕಣ್ಬೊಲದಿಂದೆ
ತೊಲಗಾಚೆ ಪಾಪಿ! ಬಳಿಸಾರದಿರ್, ನಿಲ್ಲದಿರ್"[೩೨]

– ಎಂದಾಗ ಅವಳು ಇದೂವರೆಗೆ ಅವನಿಗಾಗೇ ಕಟ್ಟಿದ್ದ ಬಣ್ಣದ ಆಶಾಗೋಪುರ ಅವಳೆದುರೇ ಮಣ್ಣುಪಾಲಾದಾಗ ಮತ್ತೆ ಅನಾಥೆಯಾಗುತ್ತಾಳೆ.

ಅಯೋಧ್ಯೆಯಲ್ಲಿ ಮಂಥರೆ ಇದೂವರೆಗೆ ಬದುಕಿದ್ದು ಕೇವಲ ಭರತ ಮತ್ತು ಕೈಕೇಯಿಯರಿಗಾಗಿ. ಈಗ ಅವರಿಗೇ ಇವಳು ಬೇಡವಾದಾಗ ಇನ್ನವಳಿಗೆ ನೆಲೆಯಲ್ಲಿ. ಭರತ ತನ್ನನ್ನು ತಿರಸ್ಕರಿಸಿದರೂ ಅವನ ಮೇಲೆ ಅವಳಿಗೆ ಕೋಪವಿಲ್ಲ. ಬದಲಾಗಿ ಇನ್ನಷ್ಟು ಮಮತೆ ತಾಳುತ್ತಾಳೆ. ಭರತ ಈ ನೆಲವನ್ನು ಸುಖವಾಗಿ ಆಳಬೇಕಾದರೆ ಶ್ರೀರಾಮನನ್ನೇ ಕರೆತರಬೇಕೆಂದು ಬಯಸಿ ರಾಮಪಥವನ್ನು ಅನುಸರಿಸುತ್ತಾಳೆ.

ಈಗ ಮಂಥರೆಯ ಮನೋಲೋಕದಲ್ಲಿ ಕೈಕೆ ಭರತಾರಾರೂ ಇಲ್ಲ. ಬದಲಾಗಿ ಶ್ರೀರಾಮನ ದಿವ್ಯಮೂರ್ತಿಯೊಂದೇ ಎದುರಿಗೆ ಕಾಣುತ್ತಿದೆ. ಹಾಗೆ ನಡೆದು ಹೋಗುತ್ತಿರುವ ಅವಳ ಅವಸ್ಥೆಯನ್ನು ಕವಿ –

“ಬೆಳಗಿನಿಂದುಣಿಸಿಲ್ಲ;
ನೀರ್ಪನಿಯನೀಂಟಿಲ್ಲ. ಪೆಟ್ಟನ್ನಲ್ಲದೆ ಬೇರೆ
ತಿಂದಿಲ್ಲ – ಕಣ್ಣೀರನಲ್ಲದಿನ್ನೇನುಮಂ
ಕುಡಿದಿಲ್ಲ ಬೆನ್ನಿಗಂಟಿದ ಹೊಟ್ಟೆ ಹಸಿವಿಂದೆ
ಗಂಟಲೊಣಗಿದ ನೀರಡಿಕೆಯಿಂದ ರಕ್ತಮಂ
ಬಸಿವ ಗಾಯದ ಪಸಿಯ ನೋವಿ”[೨೩]

ಹೀಗೆ ಅಯೋಧ್ಯೆಯನ್ನು ದಾಟಿ ದಟ್ಟ ಅರಣ್ಯದಲ್ಲಿ ಮೈಮೇಲೆ ಪ್ರಜ್ಞೆಇಲ್ಲದೇ ರಾಮನನ್ನು ಕರೆಕರೆದು ನಡೆಯುತ್ತಾಳೆ. ತನ್ನಲ್ಲಿ ಪೂರ್ಣ ರಾಮಚಂದ್ರನನ್ನೇ ತುಂಬಿಕೊಂಡು ಆ ವೃದ್ಧೆ ಸ್ವಲ್ಪದೂರದಲ್ಲಿ ಜ್ಯೋತಿಯೊಂದನ್ನು ಕಾಣುತ್ತಾಳೆ. ಅದು ಜ್ಯೋತಿಯಾಗದೇ ದಾವಾಗ್ನಿಯಾಗಿತ್ತು. ಆ ಅಗ್ನಿಯಲ್ಲಿಯೇ ಶ್ರೀರಾಮನನ್ನು ಕಂಡ ಈಕೆ ವೇಗವಾಗಿ –

“ಓ ಭರತನಣ್ಣಯ್ಯ,
ಓ ನನ್ನ ರಾಮಯ್ಯ, ಬಾರಯ್ಯ, ದಮ್ಮಯ್ಯ!”[೨೪]

ಎನ್ನುತ್ತ ಆತುರಪಟ್ಟು ಮುಂದಕ್ಕೆ ನುಗ್ಗಿ–ಓಡುತ್ತಾಳೆ. ಆ ಜ್ಯೋತಿಯಲ್ಲಿ ಶ್ರೀರಾಮನೇ ಅವಳನ್ನು ತನ್ನ ಸಹಸ್ರಬಾಹುಗಳಿಂದ ಆವರಿಸಿಕೊಂಡಂತೆ ಭ್ರಮೆಪಟ್ಟು ಅಗ್ನಿಯನ್ನು ಅಪ್ಪಿಕೊಂಡಳು. ಆಕೆಯ ಪಾರ್ಥಿವ ಪಂಚಭೂತಗಳಲ್ಲಿ ಲೀನವಾಯಿತು. ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯೇ ಆಯಿತು.

ಇದಾದ ನಂತರ ಕುವೆಂಪು ಮತ್ತೆ ಆಕೆಯನ್ನು ದರ್ಶನ ಮಾಡಿಸುತ್ತಾರೆ. ರಾಮಾಗಮನದ ವಾರ್ತೆ ಬಾರದಾದಾಗ ಭರತ ಅಗ್ನಿಪ್ರವೇಶ ಮಾಡಲು ಸಿದ್ಧನಾಗಿರುತ್ತಾನೆ. ಆಕೆಯ ಅಶರೀರವಾಣಿ ರಾಮ ಬರುತ್ತಾನೆ ದುಡುಕಬೇಡ ಎಂದಾಗ ಭರತ ಯಾರೆಂದು ತಲೆಯೆತ್ತಿ ನೋಡುತ್ತಾನೆ. ಆಗ –

> “ಮತ್ತಾರ್
> ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪರಾ
> ಮಂಥರೆ ವಿನಾ?”[೨೫]

ಎನ್ನುತ್ತಾಳೆ. ಅದಕ್ಕೆ ಭರತ ಆ ಹೆಸರೆತ್ತಬೇಡ ಕೇಳಲು ಹೇಸಿಕೆಯಾಗುತ್ತದೆ ಎಂದಾಗ ಅವಳು ರಾಜನೇ–‘ಅವಳು ಇದಕ್ಕೆಲ್ಲ ಕಾರಣವಲ್ಲ, ಕರಣ’ ಎಂದು ಹೇಳುತ್ತಾಳೆ. ಮಹಾಕವಿ ಕುವೆಂಪು ಈಕೆಯನ್ನು ‘ಮಮತೆಯ ಸುಳಿ’ ಎಂದದ್ದು ಸಾರ್ಥಕವೆನಿಸಿದೆ.

೪) ಊರ್ಮಿಳೆ :

ಮಹಾಕಾವ್ಯ ಮಹಾಸಾಗರದಂತೆ ವಿಶಾಲವಾಗಿರುತ್ತದೆ. ಅದರ ದಂಡೆಯಲ್ಲಿ ನಿಂತು ನೋಡುವವನಿಗೆ ಕೇವಲ ದೊಡ್ಡದೊಡ್ಡ ಅಲೆಗಳು ಮಾತ್ರ ಕಾಣುತ್ತವೆ. ಆದರೆ ದೊಡ್ಡ ಅಲೆಗಳಿಗೆ ಸಹಾಯಕವಾಗಿ ಅವುಗಳಲ್ಲಿಯೇ ಹುದುಗಿ ಹೋಗಿ ಮರೆಯಾದ ಸಣ್ಣ ಅಲೆಗಳು ಕಾಣುವುದೇ ಇಲ್ಲ. ಅದರಂತೆ ಮಹಾಕಾವ್ಯದ ಪ್ರಧಾನ ಪಾತ್ರಗಳು ಇಡೀ ಕಾವ್ಯದ ವಿಸ್ತಾರವನ್ನು ಆವರಿಸುತ್ತವೆ. ಆಗ ಕವಿ ಹಾಗೂ ಸಹೃದಯ ಈ ಪಾತ್ರಗಳಲ್ಲಿಯೇ ಉಳಿದ ಪಾತ್ರಗಳನ್ನು ಮರೆಯುತ್ತಾರೆ. ಹೀಗಿ ಓದುಗರ ಗಮನದಿಂದ ಬಹುಬೇಗನೆ ಜಾರಿಕೊಳ್ಳುವ ಊರ್ಮಿಳೆಯನ್ನು ಕುವೆಂಪು ಒತ್ತಾಯವಾಗಿ ಹಿಡಿದು ತಂದು ಕಾವ್ಯ ವಾಚಕರಿಗೆ ದರ್ಶನಮಾಡಿಸುತ್ತಾರೆ. ಇದು ಮಹಾಕವಿಯಾದವನ ಜವಾಬ್ದಾರಿಯೂ ಆಗಿರುತ್ತದೆ.

ಕುವೆಂಪು ಅವರ ಕಾವ್ಯ ಮೂಲಕವಿ ವಾಲ್ಮೀಕಿಯಿಂದ ಪ್ರೇರಣೆ ಪಡೆದಿದ್ದರೂ ಕುವೆಂಪು ವಾಲ್ಮೀಕಿಯನ್ನು ಎಲ್ಲಿಯೂ ತೆಗಳದೇ, ಗೌರವಿಸಿ ಊರ್ಮಿಳಾ ಪಾತ್ರ ರಚನೆಯ ಮೂಲಕ ತಮ್ಮ ಕಾವ್ಯವನ್ನು ಮಹೋನ್ನತಿಗೇರಿಸಿದ್ದಾರೆ. ವಾಲ್ಮೀಕಿಯಲ್ಲಿ ಕೇವಲ ಇವಳ ಹೆಸರನ್ನಷ್ಟೇ ಕೇಳುತ್ತೇವೆ. ಆದರೆ ಇಲ್ಲಿ ಇವಳು ತ್ಯಾಗಶಕ್ತಿಯಾಗಿ, ಚಿತ್ತಪಸ್ ಶಕ್ತಿಯಾಗಿ ಚಿತ್ರಿತಳಾಗಿದ್ದಾಳೆ.

ಜನಕರಾಜನ ಸ್ವಂತ ಮಗಳಾದ ಊರ್ಮಿಳೆ ತನ್ನ ಗಂಡ ಶ್ರೀರಾಮನೊಡನೆ ವನವಾಸಕ್ಕೆ ಹೋಗಲು ಇವಳ ಅನುಮತಿಯನ್ನು ಕೇಳಿದಾಗ ಒಂದು ಚೂರೂ ಅದಕ್ಕೆ ವಿರೋಧವನ್ನು ತೋರಿಸದ ಅವಳು ಎಂಥ ತ್ಯಾಗಿಯಾಗಿದ್ದಳೆಂಬುದು ಗೊತ್ತಾಗುತ್ತದೆ. ಶ್ರೀರಾಮ ವನವಾಸಕ್ಕೆ ಹೊರಟಾಗ ತಾನು ಅದರಲ್ಲಿ ಸರಿ ಪಾಲುಗಾರಳು ಎಂದು ಸೀತೆಯಾಡಿದರೆ ತನ್ನ ಗಂಡ ಇನ್ನೊಬ್ಬರೊಡನೆ ಸ್ವಂತ

[illegible]

[illegible]

[illegible]

[illegible]

[illegible]

[illegible]

[illegible]

ಮಡದಿಯನ್ನೇ ತೊರೆದು ಹೋಗುತ್ತಾನೆಂದರೆ ಯಾವ ಸ್ತ್ರೀ ಇದಕ್ಕೆ ಸಮ್ಮತಿ ಸೂಚಿಸುತ್ತಾಳೆ? ಆದರೆ ಊರ್ಮಿಳೆ ಏನಾದರೂ ಹಾಗೆ ಲಕ್ಷ್ಮಣನನ್ನು ತಡೆದಿದ್ದರೆ ಅಥವಾ ಅವನನ್ನು ಬಳ್ಳಿಯಂತೆ ಬಳಸಿ ಬೆನ್ನುಹತ್ತಿದ್ದರೆ ಅವಳ ವ್ಯಕ್ತಿತ್ವಕ್ಕೆ ಮೆರಗು ಬರುತ್ತಿರಲಿಲ್ಲ. ಕುವೆಂಪು ಅವರ ಕಾವ್ಯ ಮಹೋನ್ನತವಾಗುತ್ತಿರಲಿಲ್ಲ. ಶ್ರೀರಾಮನೊಡನೆ ತನ್ನ ಗಂಡನನ್ನು ಅತ್ತ ಕಳುಹಿಸಿದ ಅವಳು ಇತ್ತ ಗಂಡನ ಇಚ್ಛೆಯಂತೆ ಹದಿನಾಲ್ಕು ವರ್ಷ ಕಠೋರ ತಪಸ್ಸಿನಲ್ಲಿ ತೊಡಗುತ್ತಾಳೆ.

ತನ್ನ ಗಂಡ ಲಕ್ಷ್ಮಣನನ್ನು ಅತ್ತ ವನವಾಸಕ್ಕೆ ಕಳುಹಿಸಿದ ಊರ್ಮಿಳೆ ತಾನು ಸರಯೂ ನದಿಯ ತೀರದಲ್ಲಿ ಒಂದು ಪರ್ಣಕುಟಿಯನ್ನು ಕಟ್ಟಿ ಚಿರತಪಸ್ವಿಯಾಗಿ ಪತಿಯಿಲ್ಲದ ಇಡೀ ಹದಿನಾಲ್ಕು ವರ್ಷಗಳನ್ನು ಕಳೆದಳು. ಆ ಹದಿನಾಲ್ಕು ವರ್ಷದವಧಿಯ ಮಧ್ಯದಲ್ಲಿ ಆಕೆ ಎಲ್ಲಿಯೂ ಕಾಣಿಸಲಿಲ್ಲ. ಅವಳ ತಪಸ್ಸಿನ ಸುದ್ದಿ ಆಗಾಗ ಬೇರೆಯವರ ಬಾಯಿಂದ ಕೇಳಿಬರುತ್ತಿರುತ್ತದೆ. ಆದರೆ ಆಕೆಯ ನೇರ ದರ್ಶನವಾಗುವುದು ಕಾವ್ಯದ ಕೊನೆಯಲ್ಲಿ.

ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರು ಚಿತ್ರಕೂಟದಲ್ಲಿದ್ದಾಗ ಒಂದು ದಿನ ಶ್ರೀರಾಮ ಲಕ್ಷ್ಮಣನನ್ನು ಕರೆದು, ತಮ್ಮ 'ನೀನು ಅಯೋಧ್ಯೆಗೆ ಹಿಂದಿರುಗಿ ಹೋಗು. ಏಕೆಂದರೆ ನಾನು ನಿನ್ನೆ ರಾತ್ರಿ ಊರ್ಮಿಳೆ ನಿನ್ನನ್ನೇ ಕರೆದು ಗೋಳಾಡುತಿರುವಂತೆ ಕನಸುಕಂಡೆ' ಎಂದಾಗ ಅದಕ್ಕೆ ಲಕ್ಷ್ಮಣ ಕೊಡುವ ಉತ್ತರ ಹೀಗದೆ.

"ಅಣ್ಣ ಕಾಂತೆ ಊರ್ಮಿಳೆ ತಪಸ್ವಿನಿ, ನಿನ್ನೊಡನೆ ಬರುವ
ಮುನ್ನಮಾಕೆಯ ಕೃಪೆಯನಾಂತೆ ಬಂದೆನ್, ನಿನಗೆ
ಚಿಂತೆಯಿನಿತಾ ದೆಸೆಗೆ ಬೇಡಯ್"[೨೬]

ಎಂದು ಉತ್ತರಿಸಿದಾಗ ಸತಿ-ಪತಿಯರಲ್ಲಿ ಎಂಥ ಸಾಮರಸ್ಯ ಇತ್ತೆಂಬುದು ಗೊತ್ತಾಗುತ್ತದೆ.

ಊರ್ಮಿಳೆಯನ್ನು ಕುರಿತು ಸೀತೆಯೂ ಒಮ್ಮೊಮ್ಮೆ ನೆನಪು ಮಾಡಿಕೊಳ್ಳುತ್ತಿದ್ದಳು. ಒಂದು ದಿನ ಇಳಿಹೊತ್ತಿನಲ್ಲಿ ಲಕ್ಷ್ಮಣ ಪಶ್ಚಿಮದಿಕ್ಕಿಗೆ ಮುಖಮಾಡಿ ಕುಳಿತಿದ್ದನ್ನು ಸೀತೆ ಗುಡಿಸಲಿನಲ್ಲಿ ದೀಪದ ಬೆಳಕಿನಲ್ಲಿ ಓದುತ್ತ ಕುಳಿತ ಪತಿಗೆ ತಿಳಿಸುತ್ತಾಳೆ. ಅಲ್ಲಿ ಕುಳಿತ ಲಕ್ಷ್ಮಣನನ್ನು ನೋಡಿದ ರಾಮನ ಕಣ್ಣು ತುಂಬಿಬಂದವು. ಸೌದೆಯನ್ನು ಹೊತ್ತು ತಂದು ಅಲ್ಲಿ ಹೊರೆಯನ್ನು ಇಳಿಸಿ ವಿಶ್ರಾಂತಿ ಪಡೆಯುತ್ತಿದ್ದ ಲಕ್ಷ್ಮಣನನ್ನು ಸೀತೆ ತನ್ನ ಮಡದಿ ಊರ್ಮಿಳೆಯನ್ನು ಕುರಿತು ಚಿಂತಿಸುತ್ತಿರಬಹುದನ್ನುತ್ತಾಳೆ. ಲಕ್ಷ್ಮಣನು ಒಂದು ದಿನ ಹಸಿಸೌದೆಯನ್ನು ಹೊತ್ತುತಂದು ಅದು ಹೊತ್ತದಾದಾಗ ತನ್ನ ಮಡದಿ ಊರ್ಮಿಳೆಯನ್ನು ನೆನೆದು ಒಲೆ ಊದುತ್ತಾನೆ. ಅದು ಧಗ್ಗನೆ ಹೊತ್ತಿಕೊಳ್ಳುತ್ತದೆ. ಇದು ಊರ್ಮಿಳೆಯ ತಪಶ್ಶಕ್ತಿಯುನ್ನು ಹಾಗೂ ಲಕ್ಷ್ಮಣ ತನ್ನಮಡದಿಯ ಮೇಲಿಟ್ಟಿದ್ದ ಪೂರ್ಣನಂಬಿಕೆಯನ್ನು ಸಮರ್ಥಿಸುತ್ತದೆ.

ಕಾವ್ಯದ ಮಧ್ಯದಲ್ಲಿ ಎಲ್ಲಿಯೂ ಪ್ರವೇಶಿಸದ ಊರ್ಮಿಳೆ ಕಾವ್ಯದ ಕೊನೆಗೆ ಆದರ್ಶದ ಮೇರುಗಿರಿ ಮುಟ್ಟುತ್ತಾಳೆ. ರಾವಣನನ್ನು ಸಂಹರಿಸಿದ ಶ್ರೀರಾಮ ಅಯೋಧ್ಯೆಗೆ ಮರಳುತ್ತಿರುವ ವಾರ್ತೆಯನ್ನು ಗೆಳತಿ ಮಾಂಡವಿ ಊರ್ಮಿಳೆಗೆ ಬೇಗ ಏಳೆಂದು ಆತುರಪಡಿಸಿದಾಗ, ಊರ್ಮಿಳೆಯ ಉತ್ತರ –

"ಮೀಯದುಡದೆಯೆ ತೊಡದೆ ಪೋಪುದೇನವರೆಡೆಗೆ
ತಂಗೆ, ಮಂಗಳಮಲ್ತು!"
ನೋಡಬಾರದೆ ಅವರ್
ನಿನ್ನನಿಡು ಕಡುನೋಂಪಿಯಂ?
"ಪನಿಗೇಂ ಪ್ರದರ್ಶನಂ? ತಪಕ್ಕಿದರ್
ನಮ್ಮದೊರ್ ತೃಣಮಲ್ತೆ! ಸಂತೋಷ ಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯಗುರಿ
ಮೇಣ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ!"[೨೬]

ಊರ್ಮಿಳಾ ಹೃದಯದಿಂದ ಹೊಮ್ಮಿದ ಒಂದೊಂದು ನುಡಿಗಳು ಆಧ್ಯಾತ್ಮದ ಕಿಡಿಗಳಾಗಿ ಅವಳು ತನ್ನ ತಪಸ್ಸಿನಿಂದ ಏರಿದ ಎತ್ತರಕ್ಕೆ ಸ್ಪಷ್ಟ ಸಾಕ್ಷಿಯಾಗಿವೆ. ರಾವಣನ ಸಂಹಾರವಾದಾಗ ಸೀತೆ ಅಶೋಕವನದಲ್ಲಿದ್ದಳು. ಆಕೆ ಇದ್ದ ಅವಸ್ಥೆಯಲ್ಲಿಯೇ ಶ್ರೀರಾಮನನ್ನು ನೋಡುತ್ತೇನೆ ಎನ್ನುತ್ತಾಳೆ. ಆದರೆ ಇಲ್ಲಿಯ ಊರ್ಮಿಳಾ ತಾನು ಇಷ್ಟೆಲ್ಲ ಉಗ್ರ ತಪಸ್ಸು ಮಾಡಿದರೂ ಲಕ್ಷ್ಮಣನ ತಪಸ್ಸಿನೆದುರು ತಾನೊಂದು ಹನಿ ಎನ್ನುವ ಅವಳು ಸೀತೆಗಿಂತ ಶ್ರೇಷ್ಠ ಎಂದು ಓದುಗನೇ ತೀರ್ಮಾಣಿಸುತ್ತಾನೆ.

ಇಷ್ಟು ಆಡಿದ ಅವಳು ಮಿಂದು ಮಡಿಯುಟ್ಟು ಪತಿಯನ್ನು ಸ್ಮರಿಸಿ ಸಿಂಗರಿಸಿಕೊಂಡು ಸತ್ತಣ ಪ್ರಕೃತಿ ಶಕ್ತಿಗಳಿಗೆ ವಂದಿಸುತ್ತಾಳೆ. ಪಶುಪಕ್ಷಿಗಳಿಗೆ ಅಕ್ಕಿ ಮತ್ತು ಎಳೆಯ ಕರಕಿಯನ್ನು ಕೊಟ್ಟು, ಸ್ಥಳದೇವತೆಗಳಿಗೆ ನಮಿಸಿ ತವರು ಮನೆಯಿಂದ ಅತ್ತೆಯ ಮನೆಗೆ ಹೋಗುವಂತೆ ಅರಮನೆಗೆ ನಡೆಯುತ್ತಾಳೆ.

ಊರ್ಮಿಳೆ ಹದಿನಾಲ್ಕು ವರ್ಷ ಸರಯೂ ತೀರದ ಪರ್ಣಕುಟಿಯಲ್ಲಿ ತಪಸ್ಸನ್ನಾಚರಿಸಿದರೆ ಕೈಕೇಯಿಯು ಅರಮನೆಯಲ್ಲಿಯೇ ಪಶ್ಚಾತ್ತಾಪದ ಪಂಚಾಗ್ನಿಯಲ್ಲಿ ದಹಿಸಿ ತಪಗೈದಳು, ಕೈಕೇಯಿಯ ಅನಂತ ದು:ಖವನ್ನು ಊರ್ಮಿಳೆ ಕಳೆಯುತ್ತಾಳೆ ಅವಳಾಡುವ ಮಾತು –

"ಅಮ್ಮ
ನಿಮ್ಮ ದು:ಖದ ಮೊರೆಯಂ ನಾನಳೆಯಲಾರೆ;
ಚಿಕ್ಕವಳ್, ನಮಗಾಗಿ ನಿಮ್ಮ ಮಕ್ಕಳಿಗಾಗಿ

ಓಂಕರಿಸದೀಂಟವೇಳ್ಕಾ ಕಾಳಕೂಟೋಪಮದ
ಹೃತ್ತಾಪಮಂ, ತಾಯಿ ನಿನಗಿಲ್ಲದಿನ್ನಾರ್ಗೆ, ಪೇಳ್
ಸಂಮಥಿತ ದಶರಥ ತನೂಜ ಜೀವಿತ ಕಥಾ
ಸಾಗರೋತ್ಥಿತ ಘೋರ ಗರಳಮಂ ಧರಿಸುವ
ಶಿವಶಿವ ಶ್ರೀಕಂಠಶಕ್ತಿ? ಆಶೀರ್ವದಿಸು
ಏಳು, ಬಾರಮ್ಮ; ನೇಸರ್ ಬಳಿಯ ಬಾಳ್ ತುಂಬಿ
ಪರಿವುದಾನಂದ ಭಾಗೀರಥಿಯ ವೊಲ್![೨೮]

ಕಾವ್ಯದುದ್ದಕ್ಕೂ ಇಷ್ಟು ಮಾತನಾಡಿಸದ ಊರ್ಮಿಳೆಯನ್ನು ಕವಿ ಕೈಕೇಯಿಯ ಸಾಗರದಂಥ ದು:ಖ ಕಳೆಯಲು ಇಷ್ಟು ಮಾತನಾಡಿಸುತ್ತಾನೆ. ತನಗೆ ಸತ್ಯದರ್ಶನ ಮಾಡಿಸಿದ ಊರ್ಮಿಳೆಯನ್ನು ಕೈಕೇಯಿ ಮುದ್ದಾಡಿ, ನಸುನಗುತ್ತಾಳೆ. ಹದಿನಾಲ್ಕು ವರ್ಷಗಳಿಂದ ನಗದಿದ್ದ ಅವಳ ಮ್ಲಾನ ವದನದಲ್ಲಿ ನಗು ಮೂಡಿಸಿದ ಮಹಿಮೆ ಊರ್ಮಿಳಾದೇವಿಯದು.

ಸಾಗರದಷ್ಟು ಸುದೀರ್ಘಕಾವ್ಯದಲ್ಲಿ ಊರ್ಮಿಳೆ ಕಾಣಿಸಿಕೊಳ್ಳುವುದು ಕೇವಲ ಎರಡೋ, ಮೂರೋ ಬಾರಿ ಮಾತ್ರ. ಆದರೆ ಅವಳ ವ್ಯಕ್ತಿತ್ವದಲ್ಲಿ ಎಲ್ಲಿಯೂ ಚಂಚಲತೆ, ಅಜ್ಞಾನ, ಅರ್ಧಜ್ಞಾನ, ಅಹಂಕಾರ ಪ್ರತಿಷ್ಠೆ, ಹಠ, ಸ್ವಾರ್ಥಗಳು, ಕನ್ನಡಿ ಹಿಡಿದು ನೋಡಿದರೂ ಸಿಗಲಾರವು. ಅವಳ ವ್ಯಕ್ತಿತ್ವದಲ್ಲಿ ಮಾತಿಗಿಂತ ಮೌನಕ್ಕೆ ಮೊದಲಸ್ಥಾನ. ಅವಳಾಡುವ ಬೆರಳೆಣಿಕೆಯ ಮಾತುಗಳೊಂದೊಂದು ಧ್ವನಿಸಾಗರದಿಂದೆತ್ತಿದ ಅಮೂಲ್ಯ ಮುತ್ತುಗಳೆಂದು ಡಾ. ಎಚ್.ಜೆ. ಲಕ್ಕಪ್ಪಗೌಡರ ಮಾತು ನಿತ್ಯಸತ್ಯ.

ತನ್ನನ್ನು ತಾನು ಇಲ್ಲಗೈದು ಸಾಧನೆಯ ಸಿದ್ಧಿಯ ಉತ್ತುಂಗಕ್ಕೇರುವುದು ಕುವೆಂಪು ಅವರ ಊರ್ಮಿಳಾದೇವಿ. ಮಹಾಕವಿ ಊರ್ಮಿಳೆಯ ಪರಕಾಯ ಪ್ರವೇಶಿಸಿ ತಾವೇ ಇಷ್ಟು ಮಾತನಾಡಿದ್ದೊಂದು ಸಿದ್ಧಿಯ ಸಾಧನೆಯೇ! ಕುವೆಂಪು ಅವರ ಕಾವ್ಯಕುಂಚದಲ್ಲಿ ಅರಳಿದ ಸುಂದರ ಚಿತ್ತಾರ ಈ ಊರ್ಮಿಳಾ!.

೫) ಮಂಡೋದರಿ :

ಪ್ರಪಂಚದ ಪಂಚಮಹಾಪತಿವ್ರತೆಯರಲ್ಲಿ ಒಬ್ಬಳಾದ ಈ ಮಂಡೋದರಿ ರಾವಣನ ಪಟ್ಟದರಾಣಿ. ಈಕೆಯ ತಂದೆ ದಾನವ ಶಿಲ್ಪಿಯಾದ 'ಮಯ' ಈಕೆಯ ದರ್ಶನವಾಗುವುದು ನಮಗೆ ನಿದ್ರಾವಸ್ಥೆಯಲ್ಲಿಯೇ. ಈಕೆ ರಾವಣನ ಪಟ್ಟಮಹಿಷಿಯಾದರೂ ಅದಕ್ಕೆ ತಕ್ಕ ಗಾಂಭೀರ್ಯ, ಗಂಡನನ್ನು ಪ್ರಭಾವಿಸುವ ಶಕ್ತಿ ಮಂಡೋದರಿಯಲ್ಲಿ ಇರಲಿಲ್ಲವೆಂಬುದನ್ನು ಕವಿಯೇ ಹೇಳುತ್ತಾನೆ.

ಸೌಂದರ್ಯದಲ್ಲಿ ಮಂಡೋದರಿ ಸೀತೆಯಷ್ಟೇ ಚಲುವೆಯಾಗಿದ್ದಳು. ಇದನ್ನು ಸೀತಾನ್ವೇಷಣೆಗಾಗಿ ಬಂದ ಆಂಜನೆಯನೇ ಈ ಮಾತುಗಳನ್ನಾಡುತ್ತಾನೆ. ಆತ ಲಂಕೆಯ ಅರಮನೆಯನ್ನು ಪ್ರವೇಶಿಸಿದುದೇ

ತಡ ಅಲ್ಲಿ ಮಿಂಚಿನ ಮರಿಗಳಂತಿದ್ದ ನೂರಾರು ಸ್ತ್ರೀಯರು ಸಂಗೀತ, ನೃತ್ಯ, ಭೋಗಕ್ರೀಡೆಗಳಿಂದ ಆಯಾಸಗೊಂಡು ಅಸ್ತವ್ಯಸ್ತ ಸ್ಥಿತಿಯಲ್ಲಿ ನಿದ್ರಿಸುತ್ತಿದ್ದಾಗ ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಪ್ರತ್ಯೇಕ ಮಂಚದ ಮೇಲೆ ಮಲಗಿದ್ದ ಒಬ್ಬಳು ಸುಂದರಿಯನ್ನು ಕಾಣುತ್ತಾನೆ. ಆಕೆ ಮುತ್ತಿನ ಆಭರಣಗಳಿಂದ ಅಲಂಕರಿಸಿಕೊಂಡು ಅಂತಃಪುರಕ್ಕೆ ಭೂಷಣ ಪ್ರಾಯಳಾಗಿದ್ದಳು. ಚಿನ್ನದ ಮೈಬಣ್ಣದಂತೆ ಕಂಗೊಳಿಸುತ್ತಿದ್ದ ಆಕೆಯನ್ನು ಸೀತೆಯೆಂದೇ ಭಾವಿಸುತ್ತಾನೆ. ಆದರೆ ಆಕೆ ಮಹಾಸಾಧ್ವಿ ಮಂಡೋದರಿಯಾಗಿದ್ದಳು. ಆಂಜನೇಯ ಇವಳನ್ನು ಕುರಿತು ಹೀಗೆ ಹೇಳುತ್ತಾನೆ.

"ಈ ಸತಿಯ
ತನುಮನವ ಪಡೆದವಂಗೆ ಆ ಸತಿಯ ಊಸತಿಯ
ಮೋಹಮೆಂತುಟೋ? ಮದನನಲ್ತಿದಕೆ ವಿಧಿಯಲಾ
ಕಾರಣಂ.........
.... ತ್ರೈಭುವಿನ
ಗೌರವಕೆ ಯೋಗ್ಯನೀಪರಿ ಮಕ್ಕಳಳುವಂತೆ
ಕೈಸೇರದಿರೆ ಬಯಸಿದೊಂದು ಬಣ್ಣದ ಗೊಂಬೆ
ರೋದಿಪುದು ನಾರಾದೊಡಂ ಕಾಣ್ಬರೇಂ?"[೨೯]

ಆಂಜನೇಯ ಹೇಳುವ ಈ ಮಾತುಗಳು – ಸೀತೆಯು ಮಂಡೋದರಿ ಮುಂದೆ ಏನೂ ಅಲ್ಲ. ಆಕೆ ಕೇವಲ ಬಂದು ಬಣ್ಣದ ಕೃತಕ ವಸ್ತುವಾದರೆ. ಮಂಡೋದರಿ ನೈಸರ್ಗಿಕ ಸಜೀವ ರಸಭರಿತ ವಾಸ್ತವ ವ್ಯಕ್ತಿಯಾಗಿದ್ದಳು.

ಮಂಡೋದರಿ ಬಾಹ್ಯ ಸೌಂದರ್ಯದಂತೆ ಆಂತರಿಕ ಸೌಂದರ್ಯವತಿಯೂ ಆಗಿದ್ದಳು. ಪರನಾರಿಯರನ್ನು ಅಪಹರಿಸಿ ತಂದು ಅವಳ ಎದುರೇ ಒಂದು ಪ್ರತ್ಯೇಕ ಮಂಚದಲ್ಲಿ ಕೂಡುವ ಕಾಮುಕಗಂಡನ ಪಟ್ಟದ ರಾಣಿಯ ಮನಸ್ಸನ್ನು ಅರಿತುಕೊಂಡಾಗ ನಮಗೆ ವಾಸ್ತವ ಅರಿವಿಗೆ ಬರುತ್ತದೆ.

ಕುವೆಂಪು ಅವರ ಕಾವ್ಯ ಕುಂಚದಲ್ಲಿ ಇವಳು ಲಂಕಾಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿ, ಸೀತೆಯ ಪಾತಿವ್ರತ್ಯವನ್ನು ರಕ್ಷಿಸುವ ರಕ್ಷಕಳಾಗಿ ಬೆಳಗಿದ್ದಾಳೆ.

ಕಾಮುಕ ರಾವಣ ರಾಮಸತಿ ಸೀತೆಯನ್ನು ಕದ್ದು ತಂದು ಅಶೋಕವನದಲ್ಲಿಟ್ಟು ಅವಳ ಮನವೊಲಿಸಿಕೊಳ್ಳಲು ಅವಳ ಕಡೆಗೆ ಆಗಾಗ ಸುಳಿಯುತ್ತಿರುತ್ತಾನೆ. ಆದರೆ ಮಂಡೋದರಿಯನ್ನು ಮಾತ್ರ ಅತ್ತ ಸುಳಿಯಗೊಡುವುದಿಲ್ಲ. ಅವಳು ಸೀತೆಯನ್ನು ಕಂಡು ಮಾತನಾಡಿಸಬೇಕೆಂದು ಹಂಬಲಿಸಿ ಧೈರ್ಯಸಾಲದೇ ವಾಪಸ್ಸಾಗಿದ್ದಳು. ಬೆಳ್ನನೆಯ ಸೀರೆಯುಟ್ಟ ಮಂಡೋದರಾ ಮೂರ್ತಿ ಸೀತೆಯ ಸಮೀಪ ಬಂದು ಮಾತನಾಡದೇ, ರೋದಿಸಿ, ಅಸ್ಪಷ್ಟವಾಗಿ ಏನೇನೋ ನುಡಿದು ಹಿಂದಕ್ಕೆ

[illegible]

[illegible]

[illegible]

[illegible]

[illegible]

[illegible]

ಹೋಗುತ್ತಿರುತ್ತದೆ. ಏಳು ದಿನ ಹೀಗೆ ಕಳೆದು ಎಂಟನೇಯು ದಿನ ರಾತ್ರಿ ಸೀತೆಯು ಆ ಮೂರ್ತಿಯನ್ನು ಕುರಿತು

"ಆರಮ್ಮ,
ತಂಗೆ, ನೀನ್? ನೋಡುತಿಹೆನೇಳಿರುಳ್ಗಳಿಂ ಬಂದು
ಗೋಳಾಡುತಾವುದನೊ ಸಂಕಟವನೊರೆಯುತಿಹೆ;
ಆರನೋ ಕರೆಯುತಿಹೆ; ಆರನೋ ಬೇಡುತಿಹೆ"

ಎಂದಾಗ ಮಂಡೋದರಿ ಕೊಡುವ ಉತ್ತರ –

"ನಾನಕ್ಕನೆನ್
ನಿನಗೆ ತಂಗೆ, ವಯಸ್ಸಿನಿಂದ ದುಕ್ಕದಿಂ
ನನ್ನವೋಲತಿ ದುಃಖಿ ಲಂಕೆಯೊಳಗಂತಿರ್ಕೆ
ಸೃಷ್ಟಿಯೊಳಗಿಲ್ಲಮೆಂದರಿ"[೩೦]

ಎಂದಾಗ ಸೀತೆ ತಾನು ಸ್ವದೇಶವನ್ನು ತ್ಯಜಿಸಿ, ವನವಾಸವನ್ನೆ ವರಿಸಿ, ರಾಕ್ಷಸನ ಪಾಪಕ್ಕೆ ಬಲಿಯಾದ ನನಗಿಂತಲೂ ನೀನು ದುಃಖಿಯೇ ಎಂದು ಕೇಳುತ್ತಾಳೆ. ಇಲ್ಲಿ ಸೀತೆಯ ಮನೋವೇದನೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದಕ್ಕೆ ಸೀತೆಗೆ ಮಂಡೋದರಿ ನಾನು ಎಷ್ಟೋಜನ ಸೀತೆಯರ ದುಃಖವನ್ನು ಹೊತ್ತಿಸಿದ ರಾವಣನ ಮಡದಿ ಎನ್ನುತ್ತಾಳೆ. ಇದಕ್ಕೆ ಆಶ್ಚರ್ಯದಿಂದ ನೀನು ಮಂಡೋದರಿಯೇ ? ಎಂದಾಗ ಹೌದೆಂದ ಮಂಡೋದರಿಗೆ ಸೀತೆ ನಮಸ್ಕರಿಸುತ್ತಾಳೆ. ಅದಕ್ಕೆ ಮಂಡೋದರಿ ನಾನು ಅಸುರಿ, ನನಗೆ ನಮಸ್ಕರಿಸಬೇಡ ಎನ್ನುತ್ತಾಳೆ. ಅದಕ್ಕೆ ಸೀತೆ ನೀನು ಅಸುರಿಯಲ್ಲ, ದೇವತೆ, ಪತಿವ್ರತೆಯಾಗಿ ನಮಗೆಲ್ಲ ನೀನು ಆದರ್ಶಮಾತೆ, ನಿನಗೆ ನಮಿಸುವುದರಿಂದ ಶೀಘ್ರ ಮಂಗಳ ಉಂಟಾಗುತ್ತದೆ, ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ.

ಸೀತೆಯು ಮಂಡೋದರಿಯ ಪಾತಿವ್ರತ್ಯವನ್ನು ಮುಕ್ತಕಂಠದಿಂದ ಕೊಂಡಾಡುತ್ತಾಳೆ. ಕುವೆಂಪು ಅವರು ಮಂಡೋದರಿಯನ್ನು ಸೀತೆಗಿಂತ ಮಹೋನ್ನತಿಗೇರಿಸಿದಾರೆ. ಅಶೋಕವನದಲ್ಲಿ ಸೀತೆಯೊಂದಿಗೆ ಕಾಣಿಸಿಕೊಂಡ ಮಂಡೋದರಿ ಮತ್ತೊಮ್ಮೆ ರಾವಣನೊಂದಿಗೆ ಕಾಣುತ್ತಾಳೆ.

ರಾಮರಾವಣರ ಯುದ್ಧ ಸಿದ್ಧವಾಗಿದೆ. ಒಂದು ದಿನ ಬಂಗಾರದ ಮಂಚದ ಮೇಲೆ ಕುಳಿತು ರಾವಣ ಚಿಂತಾಕ್ರಾಂತಿವಾಗಿ, ಅನ್ಯಮನಸ್ಕನಾಗಿ ಭೋಜನ ಮಾಡುತ್ತಿದ್ದನ್ನು ಮಂಡೋದರಿ ಅಂಜುತ್ತ ಆ ದಿನದ ರಣವಾರ್ತೆಯನ್ನು ಕೇಳುತ್ತಾಳೆ. ರಾವಣ ಆ ಯುದ್ಧವಾರ್ತೆ ಹೇಳುತ್ತಿದ್ದಾಗ ಅವನ

[illegible]

[illegible]

[illegible]

[illegible]

[illegible]

ಹಣೆಯಲ್ಲಿ ಬೆವರು ಹನಿಯೊಂದು ಮೂಡುತ್ತದೆ. ಇದನ್ನು ನೋಡಿದ ಮಂಡೋದರಿಯ ಕಣ್ಣಲ್ಲೂ ಹನಿ ಮೂಡುತ್ತದೆ. ತನ್ನ ಸೆರಗಿನಂಚಿನಿಂದ ಪತಿಯ ಹಣೆಯ ಬೆವರನ್ನೊರೆಸುತ್ತಾಳೆ. ಅದಕ್ಕೆ ರಾವಣ ನನ್ನ ಹಣೆಯಿರಲಿ. ನಿನ್ನ ಕಣ್ಣೊರೆಸಿಕೊಳ್ಳು, ನಿನಗೇಕೆ ಯುದ್ಧ ಭೀತಿ ಎಂದು ಮಾತು ಮುಂದುವರಿಸುತ್ತಾನೆ. ಅದಕ್ಕೆ ಅವಳು ಮೇಲ್ನೋಟಕ್ಕೆ ನಿನ್ನ ಕೈಹಿಡಿದ ನನಗೆ ಶತ್ರುಗಳ ಭಯವಿಲ್ಲ ಎನ್ನುತ್ತಾಳೆ.

ರಾವಣನಿಗೆ ಈಗ ಸೀತೆಯ ಮೇಲೆ ಕಾಮದ ಲಾಲಸೆಯಿಲ್ಲ. ರಾಮನನ್ನು ಗೆದ್ದು ಕಪ್ಪುಕಾಣಿಕೆಯಾಗಿ ಒಪ್ಪಿಸುವವನಿದ್ದೇನೆ. ಆ ಕಾರಣಕ್ಕಾಗಿ ಯುದ್ಧ ಮುಂದುವರೆಸಿದ್ದೇನೆಂದು ತನ್ನ ರಾಣಿ ಮಂಡೋದರಿಗೆ ಹೇಳುತ್ತಾನೆ. ಮಂಡೋದರಿಯ ಏಕೈಕ ಕರುಳ ಕುಡಿ ಇಂದ್ರಜಿತು ಯುದ್ಧದಲ್ಲಿ ಮಡಿದಾಗ ಜರ್ಜರಿತಳಾಗಿ ಹೋದಳು. ಅವಳನ್ನು ಸಂತೈಸುವ ರಾವಣನ ಕಣ್ಣಲ್ಲೂ ನೀರು ಸುರಿಯುತ್ತದೆ. ಅವನೇ –

"ನನ್ನ ನೀಕ್ಷಿಸು ಮನವ ಕಲ್ಮಾಡು ನನಗಾಗಿ
ಮರೆ ಮಗನ ಹಂಬಲಂ"[೩೧]

–ಎನ್ನುತ್ತಾನೆ. ಕೊನೆಗೆ ರಾವಣ ಸೀತೆಯ ಕಾರಣವಾಗಿಯೇ ತನ್ನ ಮಡಿದುದಾಗಿ ಹೇಳಿ ಸೀತೆಯನ್ನು ಸಂಹರಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತಾನೆ. ಗಂಡನನ್ನು ಎದುರುವಾದಿಸಿ ಪರಿವರ್ತಿಸುವ ಮೊಂಡ ಸತಿಯಲ್ಲ ಮಂಡೋದರಿ. ರಾವಣನ ಪ್ರತಿಜ್ಞೆಯಿಂದ ಶಕ್ತಿ ಗುಂದಿದ ಅವಳು ಸುಮ್ಮನೆ ಕೈಮುಗಿದು ಕುಳಿತು ಬಿಡುತ್ತಾಳೆ. ಅವಳ ಅವಸ್ಥೆಯನ್ನು ನೋಡಿದ ರಾವಣ

"ನೋಡಲಾರೆನ್ ನಿನ್ನ ವದನ ವೈರೂಪ್ಯಮಂ!
ತಪ್ಪಾಯ್ತು, ಕೊಲ್ಲೆನವಳಂ; ಕ್ಷಮಿಸು"[೩೨]

– ಎಂದು ವಚನ ಕೊಡುತ್ತಾನೆ. ತನ್ನ ಕರುಳ ಕುಡಿಯನ್ನೇ ಕತ್ತಿರಿಸಿಕೊಂಡ ಈ ಮಮತಾಮಯಿ ಸೀತೆಯ ಬಗೆಗೆ ತಾಳಿದ ಪ್ರೇಮ ಮತ್ತಾವ ಲೋಕಸಾಹಿತ್ಯದಲ್ಲಿಯೂ ಕಾಣಲಾರದು.

ಮರುದಿನ ರಾವಣ ಯುದ್ಧಕ್ಕೆ ಹೋಗುವಾಗ ಮಂಡೋದರಿಯಿಂದ ವರಗಳನ್ನು ಕೇಳುತ್ತಾನೆ. ಅವು ದಶರಥನ ಮಗ ನನಗೆ ಸೋಲಬೇಕು ಮತ್ತು ಸೀತೆ ನನ್ನ ವಶವಾಗಬೇಕು ಎಂದು. ಅದಕ್ಕೆ ಸೀತೆ ವರನೀಡುತ್ತಾಳೆ. ರಾವಣನಿಗೆ ಸಂದೇಹ ಬಂದು ಮತ್ತೇ ಸೀತೆ ನನಗೆ ನಿಜವಾಗಿಯೂ ಸೋಲುತ್ತಾಳೇನು ಎಂದಾಗ –

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

"ಸೀತೆಯಾಲಂಗಿಪಳ್, ಚುಂಬಿಸೆರ್ದೆಗೊತ್ತುವಳ್
ರಣದಿ ರಾಮನ ಸೋಲಿಪಯ್, ಪುನರ್ಜನ್ಮದೊಳ್"[೩೩]

ಎಂದು ಮುಂದಾಗುವುದನ್ನು ಭವಿಷ್ಯ ನುಡಿಯುತ್ತಾಳೆ.

ರಾವಣ ಯುದ್ಧಕ್ಕೆ ಹೋಗಿ ಎದೆಯಲ್ಲಿ ರಾಮನ ಬ್ರಹ್ಮಾಸ್ತ್ರವನ್ನು ನಟ್ಟಿಸಿಕೊಂಡೇ ಲಂಕೆಗೆ ಹಿಂತಿರುಗುತ್ತಾನೆ. ಆ ಬಾಣವನ್ನು ಕೀಳುವ ಧೈರ್ಯ ಮಂಡೋದರಿಯಲ್ಲದೇ ಬೇರೆ ಯಾರಿಗೂ ಇರಲಿಲ್ಲ. ತಾನೇ ಆ ಬಾಣವನ್ನು ಕೀಳುತ್ತಾಳೆ. ಹೀಗೆ ಅವಳಿಂದಲೇ ರಾವಣನ ಆತ್ಮ ಮೋಕ್ಷವನ್ನು ಪಡೆಯಿತು. ಕೊನೆಗೂ ತಾನೂ ಇಚ್ಛಾಮರಣವನ್ನಪ್ಪಿ ಪತಿಯ ಪಾದ ಸೇರಿದಳು. ಅಲ್ಲಿದ್ದ ವಾನರರು

"ಧನ್ಯ! ಪುಣ್ಯಾತ್ಮೆ! ಮಾತಾಯಿ!
ಹದಿಬದೆಯರರಸಿ ದಲ್"[೩೪]

ಎಂದು ಮಂಡೋದರಿಯನ್ನು ಕೊಂಡಾಡಿದರೆಂದು ಮಹಾಕವಿ ಚಿತ್ರಿಸುತ್ತಾನೆ.

೬) ಶೂರ್ಪನಖಿ :

ರಾಮಾಯಣ ಕಥೆಯ ತಿರುವಿಗೆ ಕಾರಣರಾದ ಮಂಥರೆಯಂತೆ ಇವಳೂ ಒಬ್ಬಳಾಗಿದ್ದಾಳೆ. ಈಕೆಯನ್ನು ವಾಲ್ಮೀಕಿ ಶೂರ್ಪನಖಿಯೆಂದು ಬಣ್ಣಿಸಿದ್ದಾನೆ. ಆದರೆ ಕುವೆಂಪು ಅವರ ಕಾವ್ಯದಲ್ಲಿ ಚಿತ್ರಣಗೊಂಡ ಶೂರ್ಪನಖಿಯೇ ಬೇರೆ.

ಪಂಚವಟಿಯಲ್ಲಿ ರಾಮ ಲಕ್ಷ್ಮಣ-ಸೀತೆಯರು ತಮ್ಮ ವನವಾಸದ ಹದಿಮೂರು ವರ್ಷವನ್ನು ಮುಗಿಸಿರುತ್ತಾರೆ. ಅವರಿಗೆ ಅಯೋಧ್ಯೆಯ ನೆನಪು ಮರುಕಳಿಸುತ್ತದೆ. ಕಾಡಿನಲ್ಲಿ ಯಾವುದೇ ಉತ್ತಮವಾದುದನ್ನು ಕಂಡರೆ ಅದನ್ನು ಅಯೋಧ್ಯೆಯ ವಸ್ತುವಿನೊಂದಿಗೆ ಹೋಲಿಸಿ ಖುಷಿಪಡುತ್ತಾರೆ. ಅವರು ಮೂರು ಜನ ಹಾಗೆ ಬರುತ್ತಿದ್ದಾಗ ಬಿದಿರು ಮಳೆಯ ತುದಿಯಿಂದ ಇಬ್ಬನಿಯ ಹನಿಯೊಂದು ಸೀತೆಯ ಮೇಲೆ ಬೀಳುತ್ತದೆ. ಅದನ್ನು ಕಂಡ ಲಕ್ಷ್ಮಣ-ಅಣ್ಣ ನಿಮ್ಮ ಪಟ್ಟಾಭೀಷೇಕಕ್ಕೆ ಹೀಗೆ ಮಳೆಗಳ ರೂಪದಲ್ಲಿ ಸರ್ವಮಂಗಳೆ ಜಗಜ್ಜನನಿ ನಿಮ್ಮನ್ನು ಹರಸುತ್ತಿದ್ದಾಳೆ ಎನ್ನುತ್ತಾನೆ.

ಆ ಸಮಯಕ್ಕೆ ಅವರಿದ್ದಲ್ಲಿಗೆ ಒಂದು ಋಷಿ ಸಮೂಹ ಬರುತ್ತದೆ. ಅವರು ರಾಮಲಕ್ಷ್ಮಣರಿಗೆ ತಮಗೆ ಯಾರೋ ರಾಕ್ಷಸರು ಹೊಡೆದು ಕಳಿಸಿದ್ದಾರೆ. ಅವರನ್ನು ಹೆದರಿಸಿ ಕಳುಹಿಸುವಂತೆ ಆ ರಾಕ್ಷಸರು ಶ್ರೀರಾಮನನ್ನು ವಿನಂತಿಸಿಕೊಳ್ಳುತ್ತಾರೆ. ಅಣ್ಣನ ಆಜ್ಞೆಯಂತೆ ಲಕ್ಷ್ಮಣ ಕಾಡೆಲ್ಲ ಅಲೆದರೂ

ಅವರು ಸಿಗಲಿಲ್ಲ. ಕೊನೆಗೆ ಲಕ್ಷ್ಮಣ ಬೇಸತ್ತು ಒಂದು ಗುಡ್ಡದ ಮೇಲೆ ಕುಳಿತಿರುತ್ತಾನೆ. ಅಲ್ಲಿ ಅವನಿಗೆ ಸುಮಧುರ ಸಂಗೀತ ಕೇಳಿಸುತ್ತದೆ. ಒಂದು ಸುಂದರವಾದ ಮೇಘ ಆಕಾಶದಲ್ಲಿ ನಡೆದ ರಥದಂತೆ ತೇಲಿ ಅವರ ಪರ್ಣಕುಟಿಯ ಹತ್ತಿರವೇ ಬರುತ್ತದೆ. ಇದನ್ನು ಕಂಡ ಲಕ್ಷ್ಮಣ ಅನುಮಾನದಿಂದ ಪರ್ಣಕುಟಿಗೆ ಬರುತ್ತಾನೆ. ಹಾಗೆ ಮೋಡದಂತೆ ಬಂದವಳು ತಾನು ಲಂಕೇಶ್ವರನ ಸಹೋದರಿ ಚಂದ್ರನಖಿಯೆಂದು ಈಗ ಶ್ರೀರಾಮನಿಗೆ ಸುಸ್ವಾಗತ ಕೋರುತ್ತಾಳೆ. ಇದಕ್ಕೆ ರಾಮ ನೀನು ಸುಖಾಗಮನ ಬಯಸಲು ಬಹಳ ತಡವಾಗಿ ಬಂದಿರುವಿ ನಾವು ಇಂದೋ, ನಾಳೆಯೋ ಇಲ್ಲಿಂದ ಹೊರಡುವವರಿದ್ದೇವೆ. ನಿಮ್ಮ ಆತಿಥ್ಯವನ್ನು ಸವಿಯುವ ಭಾಗ್ಯವಿಲ್ಲದಾಯಿತೆಂದಾಗ ಅವಳು "ನೆಂಟರ ಮನಗೆ ಹೋಗುವ ತನಕ ನಮ್ಮಿಷ್ಟ ಹೋದ ಮೇಲೆ ನಾವು ಅವರ ಸರೆಯಾಳು. ಅವರು ಕಳಿಸಿದಾಗ ಹೋಗಬೇಕು. ನಮ್ಮ ಆತಿಥ್ಯವನ್ನು ಸ್ವೀಕರಿಸದೇ ಅದೆಂತು ನೀವು ಹೋಗುವಿರಿ? ಹೋದರೆ ನಮಗೆ ಅಪಕೀರ್ತಿ, ನಿಮಗೂ ಯೋಗ್ಯವಲ್ಲ" ಎನ್ನುತ್ತಾಳೆ. ಕೆಲ ಸಮಯ ಹಾಗೆ ಮಾತಾಡಿ ಕೊನೆಗೆ ತಾನು ಬಂದ ಉದ್ದೇಶವನ್ನು ತಿಳಿಸುತ್ತಾಳೆ.

> **"ಬಂಜರಾದೊಳ್ನೆಲದ**
> **ಪಾಂಗಿಂದೆ ಬರ್ದುಕುತಿಹೆನಂತೋ ರಿಕ್ತತೆಗೆತ್ತು**
> **ಸತ್ತು, ಬೇಸತ್ತು, ನನ್ನೆರ್ದೆಯ ನೀರಸದಿಳೆಗೆ ನೀಂ**
> **ಮಳೆಯಾಗಿ ಕರೆಯಯ್ಯ, ಹೊಳೆಯಾಗಿ ಹರಿಯಯ್ಯ**
> **ಪಚ್ಚನೇಯ ಹಸುರು ಪಯರಿನ ಬೆಳೆಯ ಸಿರಿಯಾಗಿ**
> **ಬಾರಯ್ಯ, ಕಲ್ಪತರು ನೀನಲ್ತೆ ಬೇಳಪಿರಿಗೆ"**[೨೬]

ಇಷ್ಟು ಸಲೀಸಾಗಿ ತಾನು ಬಂದ ಉದ್ದೇಶವನ್ನು ಯಾವ ಸಂಕೋಚವೂ ಇಲ್ಲದೇ ಹೇಳುವಳು. ಅದಕ್ಕೆ ರಾಮ ತನಗೆ ಮದುವೆಯಾಗಿದೆ, ನನ್ನ ತಮ್ಮ ಬರುವುದರೊಳಗೆ ಇಲ್ಲಿಂದ ಹೊರಟುಹೋಗು, ಇಲ್ಲದಿದ್ದರೆ ಅವನು ನಿನಗೆ ಚೆನ್ನಾಗಿ ಮದುವೆ ಮಾಡುತ್ತಾನೆ, ಎನ್ನುವಷ್ಟರಲ್ಲಿ ಅಲ್ಲಿಗೆ ಲಕ್ಷ್ಮಣ ಬರುತ್ತಾನೆ. ಅವನನ್ನು ನೋಡಿದ ಶೂರ್ಪನಖಿ ಲಕ್ಷ್ಮಣನತ್ತ ಧಾವಿಸುತ್ತಾಳೆ. ಈಗಾಗಲೇ ಕಠಿಣ ತಪಸ್ಸಿನಲ್ಲಿದ್ದ ಲಕ್ಷ್ಮಣ ತನ್ನ ಮೇಲೆ ಏರಿ ಬಂದುದನ್ನು ಸಹಿಸದೇ ಬಾಣದಿಂದ ಜೋರಾಗಿ ಅವಳ ಕಡೆಗೆ ಬೀಸುತ್ತಾನೆ. ಆ ಹೊಡೆತಕ್ಕೆ ಅವಳ ಮೂಗು, ಮುಖ ಕತ್ತಿರಿಸುತ್ತದೆ. ಆ ನೋವನ್ನು ಸಹಿಸದ ಇವಳು ಮೋಡಗಳು ಗುಡುಗುವಂತೆ ಗುಡುಗಿ ರೋಧಿಸುತ್ತಾಳೆ.

ಲಕ್ಷ್ಮಣನಿಂದ ಕಣ್ಣು ಮೂಗುಗಳನ್ನು ಕತ್ತರಿಸಿಕೊಂಡ ಅವಳು ತನ್ನಣ್ಣ ರಾವಣನೆದುರು ನಡೆದುದೆಲ್ಲವನ್ನು ಹೇಳುತ್ತಾಳೆ. ತಂಗಿಗಾದ ಈ ಅವಸ್ಥೆಯನ್ನು ಕಂಡ ರಾವಣನ ರೋಷ ಭುಗಿಲೆದ್ದಿತು. ನಿನ್ನನ್ನು ಹೀಗೆ ಶಿಕ್ಷಿಸಿದವನರ್ಧಾಂಗಿಯನ್ನು ಸುಮ್ಮನೆ ಬಿಡಲಾರೆ ಎನ್ನುತ್ತಾನೆ. ಇದಕ್ಕೆ ಶೂರ್ಪನಖಿ ಮುನ್ನೆಚ್ಚರಿಕೆ ಕೊಡುತ್ತಾಳೆ. ರಾಮನೊಬ್ಬನೆ ಒಂದು ಸೈನ್ಯಕ್ಕೆ ಸಮಾನ. ಅವನೊಬ್ಬನನ್ನೇ ಗೆಲ್ಲವುದು ಸುಲಭವಲ್ಲ, ಅದಕ್ಕೊಂದು ಸುಲಭೋಪಾಯವನ್ನು ಹೇಳುತ್ತಾಳೆ. ಶ್ರೀರಾಮ ಸತಿ ಸೀತೆಯ

[illegible]

[illegible]

[illegible]

[illegible]

ರೂಪಲಾವಣ್ಯವನ್ನು ರಾವಣನ ಮನ ಒಪ್ಪುವಂತೆ ವರ್ಣಿಸುತ್ತಾಳೆ. ಇದನ್ನು ಕೇಳಿದ ರಾವಣ ಸೀತೆಯ ಸೌಂದರ್ಯವನ್ನು ಮನದಲ್ಲಿಯೇ ಚಪ್ಪರಿಸಿದ. ಅವಳನ್ನು ಕದ್ದುತರುವ ಉಪಾಯವನ್ನು ಹೇಳುತ್ತಾಳೆ. ಇದನ್ನು ಕೇಳಿದ ರಾವಣ ಮಾರೀಚನ ಮೊರೆ ಹೋದ. ಇದರಿಂದಾದ ಕಥೆ ಇಡೀ ಲಂಕೆಯೇ ದು:ಖದದಳ್ಳುರಿಯಲ್ಲಿ ಧಗಿಸಿಹೋಗುವಂತಾಯಿತು.

ಇದೆಲ್ಲ ನಡೆದು ಹೋದನಂತರ ಶೂರ್ಪನಖಿ ಒಂದು ದಿನ ರಾವಣನನ್ನು ಭೇಟ್ಟಿಮಾಡಿ ತನಗಾದ ಮಾನಸಿಕ ಪರಿವರ್ತನೆಯನ್ನು ಹೇಳಿಕೊಳ್ಳುತ್ತಾಳೆ. ಲಂಕೆಯ ಸರ್ವಶ್ರೇಷ್ಠರ ಮರಣಕ್ಕೆ ಕಾರಣವೆಂದು ಅಣ್ಣನ ಕಾಲು ಹಿಡಿದು, ಪಾದಕ್ಕೆ ಹಣೆಹಚ್ಚಿ ಗದ್ಗದಿತಳಾಗಿ ಬೇಡಿಕೊಳ್ಳುತ್ತಾಳೆ. ಅವಳ ಅವಸ್ಥೆಯನ್ನು ನೋಡಿದ ರಾವಣ.

"ಏನಿದೀ ಮಲಿನವಸನಂ ನಿನಗೆ?
ಅದೇಕಿಂತು ಸೊರಗಿರುವೆ? ಎಂದಾಗ
ಪಾಪಿ; ಪಶ್ಚಾತ್ತಾಪಿ;
ಬಂದೆನಾಂ ಬಯಸಿ ಪ್ರಾಯಶ್ಚಿತ್ತಮಂ!"[೨೭]

ಎನ್ನುತ್ತಾಳೆ ಆಗ ರಾವಣ ಯಾರಿಗೆ ಪ್ರಾಯಶ್ಚಿತ್ತ ಎಂದಾಗ ಪಾಪಿ ನಾನೇ. ನನಗೇ ಪ್ರಾಯಶ್ಚಿತ್ತ ಇನ್ನಾರಿಗೆ ಎನ್ನುತ್ತಾಳೆ. ಇದನ್ನು ಕೇಳಿದ ರಾವಣ ವ್ಯಂಗ್ಯವಾಗಿ ನಗುತ್ತಾನೆ. ಅಣ್ಣಾ ಏಕೆ ನಗುತ್ತಿರುವಿ. ನನ್ನ ಸಲುವಾಗೇ ನೀನು ಪತಿವ್ರತೆಯಾದ ಸೀತೆಯನ್ನು ಎಳೆತಂದೆ, ಲಂಕೆಯ ಈ ದುರ್ಗತಿಗೆ ನಾನೇ ಕಾರಣ; ಲೆಕ್ಕಕ್ಕೆ ಸಿಗದಷ್ಟು ವೀರರನ್ನು ತಿಂದೆ, ಸೇನಾನಿಗಳನ್ನು ಕುಂದೆ, ಕುಂಭಕರ್ಣ ಮತ್ತು ಅತಿಕಾಯರನ್ನು ಕೊಂದೆನು. ಈಗ ನಿನ್ನ ಕಾಲು ಹಿಡಿದು ಬೇಡುತ್ತೇನೆ, ನಾನು ಹೊತ್ತಿಸಿದ ಬೆಂಕಿಯನ್ನು ನಂದಿಸಲು ನನಗೆ ಅನುಮತಿಯನ್ನು ಕೊಡು ಎಂದಾಗ ನೀನು ಹೊತ್ತಿಸಿದ ಬೆಂಕಿ ನಿನ್ನನ್ನು ಮೀರಿದೆ. ಒಂದು ವೇಳೆ ನೀನೇನಾದರೂ ಅದನ್ನು ನಂದಿಸಲು ಹೋದರೆ ಅದು ನಿನ್ನನ್ನೇ ದಹಿಸಿಬಿಡುತ್ತದೆ. ಎಂದಾಗ ನನಗೆ ಅದೇ ಪ್ರೀಯವಾದುದು ಎನ್ನುತ್ತಾಳೆ. ಕೊನೆಗೆ ರಾವಣ ನಿನ್ನ ಮಾತಿನ ಅರ್ಥವೇನೆಂದು ಕೇಳಿದಾಗ –ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡಬೇಕೆಂಬುದೇ ನನ್ನ ಮನೋರಥ ಎನ್ನುತ್ತಾಳೆ. ಇದನ್ನು ಕೇಳಿದ ರಾವಣನಿಗೆ ಆಶ್ಚರ್ಯವಾಗುತ್ತದೆ. ಅದು ಜೀವಗಳ್ಳರಿಗೆ ಮತ್ತು ಹೆಂಬೇಡಿಗಳಿಗೆ ಹೇಳುವ ಮಾತೆಂದು ತಿರಸ್ಕರಿಸುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ದ್ವೇಷದ ಕಿಡಿಯನ್ನು ಹೊತ್ತಿಸಿ ಮರೆಯಾಗುವ ಶೂರ್ಪನಖಿ ಕುವೆಂಪು ರಾಮಾಯಣದಲ್ಲಿ ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಬೇಡುವ ಕಡುದೀನೆಯಾಗಿದ್ದಾಳೆ. ಇದನ್ನು ಗಮನಿಸಿದಾಗ ನಮಗೆ ಅವಳ ಬಗೆಗೆ ಕೋಪ, ತಿರಸ್ಕಾರಗಳಂತಹ ಗುಣಗಳು ಹೋಗಿ ಕರುಣೆ, ಅನುಕಂಪ, ಆದರ ಮೂಡುವಂತೆ ಮಾಡಿದ್ದು ಕುವೆಂಪು ಅವರ ಕೌಸಲ್ಯ.

೭) ಶಬರಿ :

ರಾಮಾಯಣ ಕಾವ್ಯದಲ್ಲಿ ಬೇಡರಜಾತಿಗೆ ಸೇರಿದ ಸ್ತ್ರೀ ಶಬರಿ. ಈಕೆಯ ಪಾತ್ರವನ್ನು ಸೃಷ್ಟಿಸಿದ ವಾಲ್ಮೀಕಿ ಭಗವಂತನ ಕೃಪೆಗೆ ಸ್ತ್ರೀಪುರುಷರೆಂಬ ಭೇದವಿಲ್ಲವೆಂಬುದನ್ನು ತೋರಿಸಿದ್ದಾನೆ. ಈ ಪಾತ್ರವನ್ನೇ ಕುವೆಂಪು ತಮ್ಮ ಪ್ರತಿಭೆಯಿಂದ ಅದ್ಭುತ ಕಾವ್ಯಕಲಾ ಕೃತಿಯನ್ನಾಗಿ ಸೃಷ್ಟಿಸಿದ್ದಾರೆ.

'ಶಬರಿ' ಈ ಎರಡೂ ಕಾವ್ಯದಲ್ಲಿ ಮುದುಕಿಯಾಗಿದ್ದಳೆಂಬುದು ಸ್ಪಷ್ಟವಾಗುತ್ತದೆ. ತನ್ನ ಗುರು ಮಾತಂಗ ಮುನಿಯ ಮಾತನ್ನೇ ನಂಬಿ ಹತ್ತು ವರ್ಷಗಳ ಸುದೀರ್ಘಕಾಲ ಹಣ್ಣು, ಹಂಪಲಗಳನ್ನು ಬೆಳೆದು ಶ್ರೀರಾಮನಾಗಮನಕ್ಕೆ ಎದುರು ನೋಡುತ್ತಿದ್ದಳು.

"ನೀನೆಂದಿಗೆ ಬರುವೆಯಯ್ಯ, ಓ ನನ್ನಯ್ಯ,
ಕಂದಯ್ಯ ರಾಮಚಂದ್ರಯ್ಯ?
ಹಣ್ಣುಹಣ್ಣಾದ
ಈ ಮುಪ್ಪಿನೊಡಲಿನ್ನೆನಿತು ತಾಳುವುದೋ? ಬಾಳುವುದೋ?
– – – – – – ಬಾರ ಕಂದಯ್ಯ
ಕಣ್ಕೆಡುವ ಮೊದಲೆ ಬಾರಯ್ಯ ತಾ ಬಾಳ್ಕೆಡುವ

ಮುನ್ನವೆನ್ನೆರ್ದೆಗೆ ತಾರಯ್ಯ ನಿನ್ನ ಶಾಂತಿಯಂ."[೨೮]

ಎಂದು ಮೊರೆಯಿಟ್ಟು ಶ್ರೀರಾಮನನ್ನು ಕರೆಯುತ್ತಿರುತ್ತಾಳೆ.

ತನ್ನ ಹತ್ತುವರ್ಷಗಳ ಸುದೀರ್ಘ ನಿರೀಕ್ಷಣೆಯ ಒಂದು ದಿನ ಲಕ್ಷ್ಮಣ ಸಮೇತ ರಾಮ ಅಲ್ಲಿಗೆ ಬರುತ್ತಾನೆ. ಕಾಡು ಬಿಸಿಲಿನಲ್ಲಿ ಅಲೆದಲೆದು ಜಿಡ್ಡುಗಟ್ಟಿದ ಕೂದಲು ಬೆವರಿನಿಂದ ಕೊಳೆಯಾಗಿ ಕಳೆಗುಂದಿದ ಮುಖವನ್ನು ನೋಡಿ ಶಬರಿ ಅವರು ತನ್ನ ಕುಲದ ಬೇಡರೇ ಎಂದು ನಿರಾಶೆಹೊಂದುತ್ತಾಳೆ. ಆಗ ಲಕ್ಷ್ಮಣ– 'ನಾವು ದಣಿದುಬಂದಿದ್ದೇವೆ ಅಜ್ಜಿ, ಬಿಸಿಲು ಸುಡುತಿದೆ ನಿನ್ನ ಗುಡಿಸಲಿನೊಳಗೆ ಒಂದಿಷ್ಟು ಜಾಗ ಕೊಟ್ಟು ತಿನ್ನಲು ಏನಾದರೂ ಇದ್ದರೆ ಈ ಪರದೇಶಿ ಮಕ್ಕಳಿಗೆ ನೀಡೆನ್ನುತ್ತಾನೆ ಅದಕ್ಕೆ ಆ ಅಜ್ಜಿ ;

"ಕಂಡವರ್ಗೆಲ್ಲ
ಬರ್ಪಬೇಡರ್ಗೆಲ್ಲಮುಣಿಸಿತ್ತು ಬೀಡಿತ್ತು
ಮೇಲ್ವಾಸನೀಯೇ ನಾನೇನು ಅಡುಗೂಳಜ್ಜಿ
ಅಲ್ಲ ಕಾಣಯ್ಯ!"[೨೯]

[illegible]

[illegible]

[illegible]

[illegible]

[illegible]

–ಎಂದು ನಿರ್ಭಿಡೆಯಿಂದ ನುಡಿದು ಅವಳು ಮತ್ತೇ ಅವರನ್ನು ಒಳಗೆ ಕರೆದು ನಾನು ಬಡವಳಿದ್ದೇನೆ. ಇದ್ದುದನ್ನು ನೀಡುತ್ತೇನೆ ಬನ್ನಿ ಎಂದು ಒಳಗೆ ಕರೆದು, ಏನೋ ಒಂದು ರೀತಿಯ ಅನುಮಾನ ಬಂದು 'ಮಕ್ಕಳೆ ನೀವಾರು?' ನನ್ನ ಕಣ್ಣು ಮಬ್ಬಾಗಿವೆ. ದೃಷ್ಟಿ ಮಂಜು ಮಂಜಾಗಿದೆ ನನಗೆ ಏನೇನೂ ಗೊತ್ತಾಗದು, ಎಂದು ಅವರನ್ನು ಕೇಳುತ್ತಾಳೆ. ಅವರು ತಾವು ಯಾರೆಂಬುದನ್ನು ನೇರವಾಗಿ ಹೇಳದೇ ಮನೆಗೆಟ್ಟು ನೆಲೆಗೆಟ್ಟು ಕಾಡುಪಾಲಾದವರೆಂದು ಹೇಳಿ ಸ್ನಾನ ಮಾಡಲು ಎಲ್ಲಿಯಾದರೂ ಕೊಳವಿದಯೇ ಎಂದು ಕೇಳುತ್ತಾರೆ. ಅತ್ತ ಅವರಿಗೆ ಸರೋವರ ತೋರಿಸಿ ಇತ್ತ ಕೌತುಕಕ್ಕಾಗಿ ಅವರ ಗಂಟನ್ನು ಮುಟ್ಟಿ ನೋಡುತ್ತಾಳೆ. ಅದರಲ್ಲಿಯ ಬಿಲ್ಲು, ಬತ್ತಳಿಕೆಗಳನ್ನು ಮತ್ತು ನಾರುಡುಗೆಗಳನ್ನು ಕಂಡು ಅಚ್ಚರಿಪಡುತ್ತಾಳೆ. ಆದರೆ ತಾನು ಊಹೆ ಮಾಡಿದ ರಾಮನನ್ನು ಮಾತ್ರ ಕಾಣದಾದಳು. ಅಷ್ಟರಲ್ಲಿ ಸ್ನಾನ ಮಾಡಿ ಬಂದ ಸೋದರರಿಗೆ ಬಗೆಬಗೆಯ ಹಣ್ಣು ಆಹಾರವನ್ನು ಬಡಿಸಿ, ಮಕ್ಕಳೇ ನೀವು ಬಡವರಂತೆ ಕಾಣುತ್ತೀರಿ; ಶ್ರೀರಾಮನೆಲ್ಲಿದ್ದಾನೆಂಬುದನ್ನು ಕೇಳಿದ್ದೀರಾ? ಕಂಡಿದ್ದೀರಾ? ಎಂದುಬರುತ್ತಾನೆ? ಎಂದು ಆತುರದಿಂದ ಕೇಳುತ್ತಾಳೆ. ಶಾಂತಿ ನಿಧಿಯಾದ ಆತನನ್ನು ಕಾಣುವುದೇ ಪರಮಶಾಂತಿ ಎನ್ನುತ್ತಾಳೆ.

ಅದಕ್ಕೆ ಶ್ರೀರಾಮ–ಶಾಂತಿನಿಧಿಯಾದ ಅವನು ಇಂದು ಶಾಂತಿಯಲ್ಲದೇ ತೊಳಲುತ್ತಿದ್ದಾನೆ. ಮನೆಬಿಟ್ಟು ಹೇರಡವಿಯನ್ನೇ ತನ್ನ ಮನೆಮಾಡಿ ತಿರುಗುತ್ತಿದ್ದವನನ್ನು 'ಶಾಂತಿನಿಧಿಯೆಂದೇಕೆ ಬಣ್ಣಿಸುತ್ತಿದ್ದೀಯಾ ತಾಯಿ? ಸಾಮಾನ್ಯನಾದವನನ್ನು ದೇವ ಮಾನವನೆಂದು ಬಣ್ಣಿಸಬೇಡ, ಎನ್ನುತ್ತಾನೆ. ಇದಕ್ಕೆ ಕೋಪಗೊಂಡ ಶಬರಿ 'ತೆಗೆ ಮಹಾತ್ಮನನ್ನು ತೆಗಳಬೇಡ ಆತನನ್ನು ನೀನು ಅರಿಯಲಾರೆ, ಎನ್ನುತ್ತಾಳೆ. ಆಗ ರಾಮ ನನ್ನನ್ನು ನಾನೇ ಅರಿಯಲಾರೆನೇ? ಎಂದಾಗ ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾಳಾದರೂ ಅವಳಿಗೆ ಇನ್ನೂ ಅನುಮಾನ ಪರಿಹಾರವಾಗಲೇ ಇಲ್ಲ.

ಶ್ರೀರಾಮ–ಲಕ್ಷ್ಮಣರು ಅವಳು ಬಡಿಸಿದ ಮೃಷ್ಟಾನ್ನವನ್ನುಂಡು ಮಧ್ಯಾಹ್ನ ವಿಶ್ರಾಂತಿ ಪಡೆಯಲು ಗುಡಿಸಲಲ್ಲಿ ಮಲಗುತ್ತಾರೆ. ಅವರಿಗಾಗಿ ಶಬರಿ ಬೇಲದ ಪಾನಕ ಮಾಡುತ್ತ ಕುಳಿತ್ತಿದ್ದಾಳೆ. ಆಗ ರಾಮ ಕನಸಿನಲ್ಲಿ –

"ನಿಲ್
ರಾಕ್ಷಸಧಮ ನಿಲ್! ಪೇಳೆಲ್ಲಿಗುಯ್ದಪಯ್
ನನ್ನ ಸೀತೆನೆಲವೊ ನೀಚ"[೪೦]

– ಎಂದು ಕನವರಿಸುತ್ತಾನೆ. ಆಗ ಶಬರಿ ಇವನೇ ತಾನು ಊಹಿಸಿದ ರಾಮನೆಂದು ದೊಪ್ಪನೆ ಅವನನ್ನು ಬಿಗಿದಪ್ಪಿ–ದಮ್ಮಯ್ಯಾ, ಸಾಕಿನ್ನು ಮರೆಮಾಡಬೇಡಯ್ಯಾ, ನನ್ನ ಕಂದಯ್ಯ, ಸೀತೆ ಏನಾದಳು? ಎಂದು ಕೇಳುತ್ತಾಳೆ. ರಾಮ ನಡೆದ ವೃತ್ತಾಂತವನ್ನೆಲ್ಲ ತಿಳಿಸಿದ. ಅಂದಿನಿಂದ ಶ್ರೀರಾಮ ಸೀತಾಶೋಕದಿಂದ ಹಾಸಿಗೆ ಹಿಡಿದುಬಿಟ್ಟ. ಆಗ ಶಬರಿ ತನ್ನಿಷ್ಟದೇವತಾ ಮೂರ್ತಿಗೆ ಆರೈಕೆ ಮಾಡಿದಳು.

[illegible]

[illegible]

[illegible]

[illegible]

[illegible]

[illegible]

ರಾಮನಿಗೆ ಆ ಅಜ್ಜಿ ಎಷ್ಟೇ ಆರೈಕೆಮಾಡಿದರೂ ಅವನ ಸೀತಾ ಶೋಕ ಕಾಯಿಲೆ ಕಡಿಮೆಯಾಗಲಿಲ್ಲ. ದಿನದಿನಕ್ಕೆ ಉಲ್ಬನಗೊಂಡಿತು. ಕೃಶದೇಹಿಯಾಗುತ್ತಿದ್ದ ಶ್ರೀರಾಮನನ್ನು ನೋಡಿ ಒಂದು ದಿನ ಬೆಳಗಿನ ಜಾವ ಲಕ್ಷ್ಮಣ ಬಂಡೆಗಲ್ಲೊಂದರ ಮೇಲೆ ಕುಳಿತು ಕಣ್ಣೀರು ಸುರಿಸುತ್ತಿದ್ದ ಅಲ್ಲಿಗೆ ಬಂದ ಶಬರಿ ಲಕ್ಷ್ಮಣನ ಕಣ್ಣೀರೊರಸಿ –

"ಬಾ ಒಳಗೆ ಬಿಡದು:ಖಮಂ
ಸೌಮಿತ್ರ, ನಿನ್ನಣ್ಣನುಸಿರಿಗಾಂ ಹೊಣೆಗಾರ್ತಿ
ನನ್ನ ಗುರು ಕೃಪೆಯಿಂದ ರಾಮನ ರುಜೆಯನ್ನೆಲ್ಲಮಂ
ಹೀರಿ ಬಿಸುಡುವೆ ನೋಡು ಬಾ!"[೪೧]

– ಎಂದು ಅವನನ್ನು ಗಡಿಸಿಲೊಳಗೆ ಕರೆದುಕೊಂಡು ಹೋಗಿ ರಾಮನು ಮಲಗಿದ್ದ ಹಾಸಿಗೆಯ ಸುತ್ತ ಪ್ರದಕ್ಷಿಣೆ ಹಾಕಿ, ರಾಮನ ಪಾದಗಳಿಗೆ ಅಡ್ಡಬಿದ್ದು–ಲಕ್ಷ್ಮಣ ಇನ್ನು ರಾಮನಿಗೆ ಯಾವ ಭಯವೂ ಇಲ್ಲ. ಅವನು ಇಂದಿನಿಂದ ಸುಕ್ಷೇಮಿ ಎನ್ನುತ್ತಾಳೆ. ಮರುದಿನ ರಾಮ ಬೆಳಗಾಗುವುದರೊಳಗಾಗಿ ಎದ್ದು ಕೂಡತ್ತಾನೆ. ಆದರೆ ಶಬರಿ ಹಾಸಿಗೆ ಹಿಡಿಯುತ್ತಾಳೆ. ರಾಮಲಕ್ಷ್ಮಣರು ಎಷ್ಟೇ ಉಪಚರಿಸಿದರೂ ಆಕೆ ಮೇಲೇಳುವುದಿಲ್ಲ. ಶ್ರೀರಾಮ–ಲಕ್ಷ್ಮಣರಿಗೆ–ತುಂಗಭದ್ರೆಯ ಮೇಲಿರುವ ಕಿಷ್ಕಿಂದೆಗೆ ಹೋಗಿ ಸುಗ್ರೀವನ ಸ್ನೇಹ ಮಾಡುವಂತೆ ಸೂಚಿಸಿ –

"ದು:ಖಿಗೆ ನೆರಂ ದು:ಖಿ
ಗೆಲ್ಗೆ ದೈವೇಚ್ಛೆ: ನಿನ್ನಿಚ್ಛೆಯುಂ ಪಲ್ಗೆ!ಪೇಳ್
ನುಡಿನುಡಿಯುತಲೆ ಹರ್ಷಮುಖಿಯಾಗಿ, ಸೌಮಿತ್ರಿ
ರಾಮರಂ ಸುಖಭಾಷ್ಪ ನೇತ್ರದಿಂ ನೋಡುತ್ತೆ,
ನೋಡುತ್ತೆ, ಕಣ್ಮುಚ್ಚಿದಳ್ ಆ ಅಮರ ಸನ್ಯಾನ್ಯೆ,
ಸಂಸ್ನಾತೆ, ಸಂಪೂತೆ ಮೇಣ್ ಶಿವಕಳೇಬರೆ, ಧನ್ಯೆ!"[೪೨]

ಹೀಗೆ ಅವರಿಗೆ ಮುಂದಿನ ಶುಭ ಸೂಚನೆಯನ್ನು ಸಂಕೇತಿಸಿ ಶ್ರೀರಾಮನ ಕೈಗಳಲ್ಲೇ ಕಣ್ಮುಚುತ್ತಾಳೆ. ವಾಲ್ಮೀಕಿ ಕವಿ ಸೃಷ್ಟಿಸಿದ ಈ ಪಾತ್ರವನ್ನು ಕವಿ ಕುವೆಂಪು ಅಮರ ಸನ್ಯಾನ್ಯಗೊಳಿಸಿದ್ದೊಂದು ವಿಶೇಷ.

[illegible]

[illegible]

[illegible]

[illegible]

[illegible]

[illegible]

೨.೮ ಅನಲಾ :

ಕುವೆಂಪು ಅವರ 'ರಾಮಾಯಣ ದರ್ಶನಂ'ದ ಬೆಂಕಿಯ ಹೂವು ಅನಲೆ ಮಹಿಳಾ ಬಂಡಾಯದ ಸೆಲೆ. ಪುರುಷ ದೌರ್ಜನ್ಯದಿಂದ ಜರ್ಜರಿತವಾದ ಭಾರತೀಯ ಮಹಿಳಾ ಸಮಾಜದ ಅಂತರಾಳದ ನೋವು ಅನಲೆಯ ಪ್ರಶ್ನೆಯಾಗಿ ಭುಗಿಲೆದ್ದಿದೆ. ಪರಾಕ್ರಮ ಪ್ರದರ್ಶನ ಮೋಹದ ಪುರುಷದ ಯುದ್ಧದಾಹಕ್ಕೆ ಬಾಲೆಯೊಬ್ಬಳ ಪ್ರತಿಕ್ರಿಯೆಯಿದು. 'ಗಂಡುಗಳ ದೌರ್ಜನ್ಯ ಸರ್ವನಾಶಕ್ಕೆ ಕಾರಣವಾದಾಗಲೂ ಹೆಣ್ಣು ತಟಸ್ಥಳಾಗಿರಬೇಕೇ?' ಅನಲೆಯ ಈ ಪ್ರಶ್ನೆ ಚಿಂತನೀಯವಾದುದು.

ರಾಮ–ರಾವಣರ ಯುದ್ಧದಲ್ಲಿ ಕುಂಭಕರ್ಣ ಸತ್ತಿದ್ದಾನೆ. ಚಿಕ್ಕಪ್ಪನ ಸಾವಿನಿಂದ ಕ್ರೋಧಗೊಂಡ ಮೇಘನಾದ ನರ. ವಾನರ ಸೇನೆಯ ನಿರ್ನಾಮಕ್ಕೆ ಪ್ರತಿಜ್ಞೆ ಮಾಡಿದನು. ಆಗ ಅವನ ತಂಗಿ ಅನಲೆ ಉರಿದೇಳುವವಳು. ಒಂದೆಡೆ ಚಿಕ್ಕಯ್ಯನ ಸಾವಿನ ಆಘಾತ; ಮತ್ತೊಂದೆಡೆ ಸಾವಿರ ಸಾವಿರ ಸಾವಿಗೆ ಕಾರಣವಾಗುವ ಮುಂದಿನ ಯುದ್ಧದ ಭೀಕರತೆ. ಲಂಕೆಯ 'ಪ್ರೀತಿಯ ಮಲ್ಲಿಗೆ' ಅನಲೆ ದುಃಖ ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳುತ್ತ ಅರಮನೆಯಿಂದ ಹೊರಟು ಸೀತೆಯಿದ್ದ ಅಶೋಕ ವನಕ್ಕೆ ಬರುವಳು. ಸೀತೆಯ ಎದೆಯಲ್ಲಿ ಮೊಗವಿಟ್ಟು ಮಗುವಿನಂತೆ ಬಿಕ್ಕುವಳು. ಸೀತಾದೇವಿ ಅವಳ ಮುಂಗುರುಳು ತೀಡಿ ಮಗಳಂತೆ ಮೈದಡವಿ ಸಂತೈಸಿದಳು. ಅನಲೆ ಲಂಕೆಯಲ್ಲಿ ಸೀತೆಗೆ ಸಿಕ್ಕ ಪ್ರೀತಿಯ ಮೊಗ್ಗೆ.

ಷೋಡಷ ವರುಷದ ಕುಮಾರಿ ಅನಲಾ ಲಂಕೇಶನ ಸಹೋದರ ವಿಭೀಷಣನ ಮಗಳು. ತಾಯಿ ಸರಮಾದೇವಿ. "ತಾಯಿ ಸರಮೆ ಗಂಧರ್ವ ಕನ್ಯೆ. ತಂದೆಯಂತೆ ಸತ್ತ್ವನಿಧಿ!". ಹೆಣ್ಣುಮಕ್ಕಳಿಲ್ಲದ ರಾವಣನ ಮುದ್ದಿನ ಪುತ್ಥಳಿ. ಅವನಲ್ಲಿ ಪುಣ್ಯವನ್ನು ಪ್ರಬೋದಿಸುವ ಶಕ್ತಿ. ಲಂಕೆಯ ತಾಯಿ, ಮಂಡೋದರಿ; ರಾಜಕುಮಾರಿ ಅನಲೆ. ರಾವಣನ ಮನಸ್ಸಿನಲ್ಲಿ ಉಕ್ಕಿದ ಪ್ರೀತಿಯ ಸೆಲೆಯ ಹೆಸರೇ ಅನಲೆ. ಲಂಕಾಧಿಪತಿಯ ಮುದ್ದಿನ ಅರಗಿಳಿ.

ರಾವಣ ಸೀತೆಯನ್ನು ಕದ್ದು ಲಂಕೆಗೆ ತಂದ ಸುದ್ದಿ ಹರಡುತ್ತಲೇ ಅನಲೆ ಸೀತೆಯಲ್ಲಿಗೆ ಹೋಗಿ ಬತ್ತಿದ ಅವಳೆದೆಯಲ್ಲಿ ಒಲವಿನ ಒರತೆ ತೋಡುತ್ತಾಳೆ. ತ್ರಿಜಟಾ ತಾಯಿಯಾಗಿ ಪೋಷಿಸಿದರೆ ಅನಲಾ ಮಗಳಾಗಿ ಮುದ್ದಿಸುವಳು. ಲಂಕೆಯಲ್ಲಿ ಸೀತೆಯ ಪರ ಅನುಕಂಪದ ಅಲೆಯನ್ನು ಸೃಷ್ಟಿಸಿದವಳೇ ಅನಲೆ. ರಾವಣ ಮತ್ತು ಸೀತೆಯರಿಬ್ಬರಿಗೂ ತುಂಬ ಪ್ರಿಯಳಾದ ಅವಳಿಗೆ ಮಾತ್ರ ಅದು ಸಾಧ್ಯವಿತ್ತು. ಅದಕ್ಕೆ ಇಂದ್ರಜಿತು ತನ್ನ ಪತ್ನಿ ತಾರಾಕ್ಷಿಗೆ ಹೇಳುವುದು –

> "ಆ ತಂಗಿ, ಕಕ್ಕನ ಮಗಳ್, ನಿನಗೆ
> ಸಖಿಯಲ್ತೆ ಅನಲೆ! ಅವಳುಪದೇಶಮಂ ಕೇಳ್ದು
> ನೀನುಂ ವಿಭೀಷಣಾರ್ಯನ ತೆರದೊಳೊರೆಯುತಿಹೆ
> ನನಗೆ."[೪೩]

ನಾವು ಅನಲೆಯನ್ನು ಸ್ಪಷ್ಟವಾಗಿ ಕಾಣುವುದು 'ಕನಕಲಂಕಾನ್ವೇಷಣ'ದಲ್ಲಿ. ಅದನ್ನು ದರ್ಶಿಸುವವ ಕನಕಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಿದ್ದ ವಾಯುಪುತ್ರ ಆಂಜನೇಯ. ವಿಭೀಷಣನ ಮನೆಗೆ ಇಣುಕಿದಾಗ ಮೊತ್ತಮೊದಲು ಕಂಡವಳೇ ಅನಲೆ. ರತ್ನಗಂಬಳಿಯ ಚಿತ್ರವೇದಿಕೆಯ ಮೇಲೆ ಕುಳಿತು ವೀಣೆಯ ತಂತಿ ಮೀಟುತ್ತ ನಾದವಾಗಿ ನಾದಮೂರುತಿ ಮಾರುತಿಯ ಗಮನ ಸೆಳೆದಳು. ತಂದೆ ಮುಂದೆ, ಪಕ್ಕದಲ್ಲಿ ತಾಯಿ. ಮಾರುತಿಗೆ ಆಶ್ಚರ್ಯ. ಲಂಕೆಯಲ್ಲಿಯೂ ಇಂಥವರು ಇರುವರೇ? – ಪಕ್ಕನೆ ಮಿಂಚಿತು – 'ಲಂಕೆಗೆ ಅತಿಥಿಗಳು' ಎಂಬ ಶಂಕೆ.

ಅವಳ ವೀಣೆಯ ನಾದದಲ್ಲಿ ಸೀತೆಯ ಶೋಕವೇ ತರಂಗಿಸಿತು. 'ಆ ಸಂಗೀತ ಲೋಕಶೋಕವೆಲ್ಲವನ್ನು ಕೇಳುವವರ ಹೃದಯದಲ್ಲಿ ಕರೆಯುವಂತಿತ್ತು. ತಾಯಿ ಸೀತೆಯ ನೆನಪು ಮೀಟುವುದೇ ತಡ, ತನ್ನ ವೀಣೆಯನ್ನು ಎತ್ತಿಟ್ಟು, ಗದ್ಗದಿತಳಾಗಿ ಒಸರುವ ಕಂಬನಿಗಳನ್ನು ಸೆರಗ ತುದಿಯಿಂದ ಒರೆಸಿಕೊಳ್ಳುತ್ತ ಹೇಳುತ್ತಾಳೆ;'

"ಆ ನನ್ನ ಗುರುದೇವಿಯನ್......
ನಿರ್ಭಾಗ್ಯೆಯನ್ ಮರಳಿ ಪತಿಯೆಡೆಗೆ ಕಳುಹದಿಹರೆ,
ಲಂಕೆಗಿನ್ ಸುಖಮೆಲ್ಲಿ? ಲಂಕೆಗಿನ್ ಶುಭಮೆಲ್ಲಿ?
ಲಂಕಿಗರ್ ನಮಗೆ ನೆಮ್ಮದಿಯೆಲ್ಲಿ?. ಚೊಪ್ಪಯ್ಯ
ಮಿಡಿಯಲೊಳ್ವನೆ ನುಡಿಯುವೀ ನನ್ನಿನಿಯ ಬೀಣೆ
ಮೀಂಟಲೀಗಳ್ ಮುನಿದು ಪರಿತಪಿಸುತಿದೆ; ಸುಯ್ದು
ಶಪಿಸುತಿದೆ! ನಿಮಿಂದು ಕೇಳ್ವುದೆಂಬುದುಮದರ
ಗಾನಮಲ್ತನುರೋಧನಂ!................................"[೪೪]

ಅನಲೆಯ ಮಾತು ಕೇಳಿ ಮಾರುತಿಗೆ ತಿಳಿಯಿತು – **"ಇವರಿರುವುದರಿಂದಲೇ ಕ್ಷೇಮವಾಗಿದ್ದಾಳೆ ಲಂಕಾ ಕನಕಲಕ್ಷ್ಮೀ"**

ಅನಲೆಯ ಪಾತ್ರ 'ರಾಮಾಯಣ ದರ್ಶನ'ದ ವೈಚಾರಿಕತೆಯ ಒಂದು ಮಿಂಚು. ಈ ಪಾತ್ರದ ಪ್ರೀತಿಯ ಸೆಳೆತವೇ ಅನನ್ಯವಾದುದು. ಅಶೋಕ ವನದಲ್ಲಿ ಸೀತೆಯ ದೈನ್ಯತೆಗೆ ಮರುಗುವಳು. ರಾವಣನ ಅಹಂಕಾರಕ್ಕೆ ಕೊರಗುವಳು. ಮೇಘನಾದನ ಪ್ರತಿಜ್ಞೆಗೆ ಸಿಡುಕುವಳು. ತಂದೆ ವಿಭೀಷಣನ ವೈಚಾರಿಕತೆಗೆ ಅರಳುವಳು. ಯುದ್ಧದ ಭೀಕರತೆಗೆ ಕುದಿಯುವಳು. ಹೀಗಿದ್ದೂ ಎಲ್ಲರನ್ನೂ ಪ್ರೀತಿಸಿ, ಎಲ್ಲರ ಎದೆಯಲ್ಲೂ ಪ್ರೀತಿಯ ಸೆಲೆಯಾಗಿ ಹರಿಯುವಳು. ಇದು ಅನಲೆಯ ವಿಶೇಷತೆ. ಅವಳ ಪ್ರೀತಿಯ ಒಂದು ತುದಿ ಸೀತೆ; ಇನ್ನೊಂದು ರಾವಣ. ಸೀತೆ ಮತ್ತು ರಾವಣ ದಕ್ಷಿಣೋತ್ತರ ಧ್ರುವಗಳು. ರಾವಣನು ತಮ್ಮನ ಮಗಳು ಅನಲೆಯ ಮುಗ್ಧತೆಗೆ ಸೋತಿದ್ದ; ಅನಲೆ ಸೀತೆಯ ಪ್ರೀತಿಗೆ ಸಿಕ್ಕಿದ್ದಳು. ದೊಡ್ಡಪ್ಪನ ಮನಸ್ಸು ತಿಳಿಗೊಳಿಸಲು ಸಾಕಷ್ಟು ಪ್ರಯತ್ನಿಸಿದಳು.

ಅನಲೆಯ ರಾವಣ ಪ್ರೀತಿ ಕೂಡ ವಿಚಿತ್ರವಾದುದು. ತಂದೆ ವಿಭೀಷಣ ಅಣ್ಣನಿಗೆ ಬುದ್ಧಿ ಹೇಳಲು ಹೋಗಿ ಬಹಿಷ್ಕಾರಕ್ಕೊಳಗಾದನು. ಕೊನೆಯಲ್ಲಿ ರಾಜ್ಯ ಬಿಟ್ಟು ನಿರ್ಗಮಿಸಬೇಕಾಯಿತು. ಆಗ ಹದಿಬದೆ ಮಂಡೋದರಿಗೆ ರಾವಣಾಂತ್ಯದ ಮುನ್ಸೂಚನೆ ನೀಡುವ ಅನಲೆ ಸ್ವಾತಂತ್ರ್ಯದ ತಪಸ್ವಿನಿ. ಸೀತೆಯ ಬಿಡುಗಡೆಯವರೆಗೂ ಸ್ವಯಂ ಗೃಹಬಂಧನಕ್ಕೊಳಗಾಗುವ ಅವಳ ಸಾತ್ವಿಕ ಸಂತಾಪ ರಾವಣನಿಗೊಂದು ನೀತಿಪಾಠ.

ಅವಳು ಹಠವಾದಿ ಮತ್ತು ದಿಟವಾದಿ. ಮುಗ್ಧತೆ ಹಟತನಕ್ಕೆ ಮೊನಚು ನೀಡುತ್ತದೆ. ಸರ್ವಾಧಿಕಾರಕ್ಕೆ ವಿರೋಧಿಸುವ ಹುಮ್ಮಸ್ಸಿನ ಉಮೇದು. ಯಾವ ಹಂಗೂ ಇಲ್ಲದೆ ಸತ್ಯ ನುಡಿಯುವ ನಿಷ್ಠುರೆ. ಮಂಡೋದರಿಗೆ ಪಾತಿವ್ರತ್ಯ ಮುಖ್ಯವಾಗಿದ್ದರೆ ಅನಲೆಗೆ ಸ್ತ್ರೀಸ್ವಾತಂತ್ರ್ಯ ಮುಖ್ಯವಾಗುತ್ತದೆ. ತನಗೊಲಿಯದ ಸೀತೆಯನ್ನು ದೊಡ್ಡಯ್ಯ (ರಾವಣ) ತಂದು ಅಶೋಕವನದಲ್ಲಿ ಸೆರೆಯಾಗಿಸಿದುದು ಅವಳ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ರಾವಣ ಅವಳ ಮಾತನ್ನು ಮಗುವಿನ ಮಾತೆಂದು ಉಪೇಕ್ಷಿಸಿದ. ಈ ಉಪೇಕ್ಷೆಯೇ ಅನಲೆಯ ಮಹಿಳಾ ಬಂಡಾಯಕ್ಕೆ ಗಾಳಿ ಹಾಕಿತು.

ಅನಲೆ ಸೀತೆಯನ್ನು ರಾಮನ ಸತಿಯೆಂದು ಪ್ರೀತಿಸುವುದಿಲ್ಲ. ಬದಲಾಗಿ ರಾಮನನ್ನು ಸೀತೆಯ ಪತಿಯೆಂದು ಗೌರವವಿಸುತ್ತಿದ್ದಳು. ಅವಳು ಸೀತೆಯ ಪ್ರೀತಿಯ ಎದೆಗೂಸು. ಯುದ್ಧದಾಹಿ ಅಣ್ಣ ಮೇಘನಾದನ ಯುದ್ಧಪ್ರೀತಿಗೆ ನೀರೆರೆದು ಅವನ ಸೋಲಿಗೆ ಕಾರಣಳಾಗುತ್ತಾಳೆಂದೆನಿಸಿದರೂ ಅವಳ ಅಸಲು ಚಿಂತೆ ಮಹಿಳಾ ವಿಮೋಚನೆಯದು. ಸೀತೆಯ ರೂಪದಲ್ಲಿ ಮಹಿಳಾ ಸಂಕುಲವೇ ಲಂಕೆಯಲ್ಲಿ ಬಂಧಿಯಾಗಿತ್ತು. ಬಂಧಿತ ಸೀತೆಯ ಬಿಡುಗಡೆಯ ತಪಸ್ಸು ಅನಲೆಯದು.

ಯುದ್ಧ ಮುಗಿಯಿತು. ರಾಮನಿಗೆ ಗೆಲುವಾಯಿತು. ರಾವಣ ಅಸ್ತಂಗತನಾದ. ಸೀತೆಯ ಸೆರೆ ಹರಿಯಿತು. ಅನಲೆಯ ತಪಸ್ಸು ಫಲಿಸಿತು. ಆಗ ರಾಮನಿಂದ ಮತ್ತೆ ಸೀತೆಯ ಪಾತಿವ್ರತ್ಯದ ಪರೀಕ್ಷೆ ಅನಲೆ ಮನದಲ್ಲಿಯೇ ಪುರುಷ ನೀತಿಗೆ ಕುದಿದಳು. 'ರಾಕ್ಷಸ ಮೈಮುಟ್ಟಿರಬಹುದು, ಮನಸ್ಸು ಮುಟ್ಟಿಲ್ಲ'ವೆಂದು ಸೀತೆ ಹೇಳಿದರೂ ರಾಮನಿಗೆ ಸಮಾಧಾನವಾಗಲಿಲ್ಲ. ಪಾತಿವ್ರತ್ಯದ ಪರೀಕ್ಷೆಗೆ ಚಿತೆ ಸಿದ್ಧವಾಯಿತು. ಅದನ್ನು ನೋಡುತ್ತಿದ್ದ ಅನಲೆ ಪ್ರಜ್ವಲಿಸಿದಳು –

"ಹದಿಬದೆಯುನ್ನಗ್ನಿವುಗಿಸುವದಿರಲಿ,
ತನ್ನಂ ಪರೀಕ್ಷಿಸುವರಾರೋ ತಾನೇಂ ಪೆರತೊ
ದುರಿತ ದೋಷಕೆ?"[೪೩]

'ರಾಮ ಸೀತೆಯ ಪಾತಿವ್ರತ್ಯವನ್ನು ಪರೀಕ್ಷಿಸುತ್ತಿದ್ದಾನೆ. ಅವನ ಸೀತಾ ನಿಷ್ಠೆಯನ್ನು ಪರೀಕ್ಷಿಸುವರು ಯಾರು? ಪುರುಷನಿಗೆ ದೋಷವಿಲ್ಲವೇ? ಶೀಲದಲ್ಲಿ ಸ್ತ್ರೀ–ಪುರುಷರೆಂಬ ಭೇದವೇ? – ಅನಲೆ

ಮನದಲ್ಲಿಯೇ ಸಿಡಿಯುತ್ತಿದ್ದಳು. ರಾಮನ ಬಗ್ಗೆ ಜಿಗುಪ್ಸೆ ಮೂಡುತ್ತಿದ್ದಂತೆಯೇ ಅವನೂ ಚಿತೆ ಪ್ರವೇಶಿಸಿ ಸತಿ ಪ್ರೀತಿಯನ್ನು ಋಜುವಾತು ಪಡಿಸಿದಾಗ ಅವಳು' –

"............................ **ಪೂಜ್ಯೆಯಂ**

ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ!"[೪೬]

ಎಂದು ರಾಮನಡಿಗೆರುತ್ತಾಳೆ.

ಅನಲೆಯ ಪಾತ್ರದಲ್ಲಿ ಕುವೆಂಪು ಹೆಣ್ಣಿನ ಮನದಾಳದ ತಿಳಿಗೊಳವನ್ನು ತೆರೆದಿಟ್ಟಿದ್ದಾರೆ. ಅನಲೆ ಹೆಣ್ತನದ ಕನ್ನಡಿ. ಯಾವುದೇ ಕಲೆಯಿಲ್ಲದೆ ಮಹೋಜ್ವಲವಾಗಿದೆ.

೨.೯ ತ್ರಿಜಟಾ :

ಕುವೆಂಪು ಮಹದ್ಘಟನೆಗಳ ಕೋಲಾಹಲದ ನಡುವೆ ಸಾಮಾನ್ಯ ಘಟನೆಗಳನ್ನು ಮರೆಯದೆ ಎತ್ತಿ ತೋರಿದ್ದಾರೆ. ಅವುಗಳಲ್ಲಿ ತ್ರಿಜಟೆಯಂತಹ ರಾಕ್ಷಸ ಸ್ತ್ರೀಯ ಸಾಧನೆ ಕೂಡ ಒಂದು. ತ್ರಿಜಟೆ ಸೀತೆಯನ್ನು ಕಾವಲವಷ್ಟೇ ಮಾಡಲಿಲ್ಲ. ಅವಳ ಸುಖ ದುಃಖ ನೋವು ನಲಿವುಗಳಲ್ಲೂ ಭಾಗಿಯಾದಳು.

ತ್ರಿಜಟೆ ರಾಕ್ಷಸ ಸ್ತ್ರೀಯಳಾಗಿದ್ದರೂ ಅವಳಲ್ಲಿ ಮಾನವೀಯ ಮೌಲ್ಯಗಳು ತುಂಬಿ ತುಳುಕಿದುದನ್ನು ಕುವೆಂಪು ರಾಮಾಯಣದಲ್ಲಿ ಕಾಣುತ್ತೇವೆ. ಸರ್ವಕಾಲಿಕ ಮಾನವೀಯ ಮೌಲ್ಯಗಳು ಮಾನವರಾಗಿ ಹುಟ್ಟಿದವರಲ್ಲಿಯೇ ಇಳಿಮುಖವಾಗುತ್ತಿರುವಾಗ ಅಂಥ ಮೌಲ್ಯಗಳು ಅವಳಲ್ಲಿರುವುದು ಅಪೂರ್ವವಾದುದಾಗಿದೆ. ಹಾಗೆಂದರೆ ಆಕೆ ಸೀತೆಯನ್ನು ದೇವರಂತೆ ಭಾವಿಸಿದಳು: ಆರಾಧಿಸಿದಳು, ಮಗಳಂತೆ ಪ್ರೀತಿಯಿಂದ, ಆಸಕ್ತಿಯಿಂದ, ಎಚ್ಚರದಿಂದ ಕಾಪಾಡಿದಳು; ಗೆಳತಿಯಂತೆ ಸಲಹೆ ಸಮಾಧಾನಗಳನ್ನು ಹೇಳಿದಳು. ಇವಳಿಂದಾಗಿಯೇ ಅಶೋಕ ವನದಲ್ಲಿ ಸೀತೆಗೆ ಬದುಕು ಸಹ್ಯವಾಯಿತು. ಸೀತೆಗೆ ತನ್ನ ಸಂತೋಷವನ್ನು ದು:ಖವನ್ನು ಮನಸ್ಸಿನ ತುಮುಲವನ್ನು ತೋಡಿಕೊಳ್ಳಲು ಸಹೃದಯಿಯಾದ, ವಾತ್ಸಲ್ಯಮಯಿಯಾದ, ಅನುಭವಸ್ಥಳಾದ, ಸಮಯ ಪ್ರಜ್ಞೆಯುಳ್ಳ ಗೆಳತಿಯೊಬ್ಬಳು ದೊರೆತಳು ಅವಳೇ ತ್ರಿಜಟೆ. ವಾಲ್ಮೀಕಿ ರಾಮಾಯಣದಲ್ಲಿ ಈಕೆಯ ವೈಶಾಲ್ಯ ಹೃದಯವಂತಿಕೆ ಕ್ರಮಶೀಲ ವಿಕಾಸಗಳು ಅಲ್ಲಿ ಕಾಣುವುದಿಲ್ಲ ಇಲ್ಲಿಯ ಹಾಗೆ ಸ್ಫುಟವಾಗಿ ವ್ಯಕ್ತಗೊಂಡಿಲ್ಲ.

ಲಂಕಾಧಿಪತಿಯಾದ ರಾವಣ ಸೀತೆಯನ್ನು ಅಪಹರಿಸಿ ತಂದ ಮೇಲೆ, ಅವಳನ್ನು ತನ್ನ ಬಯಕೆಗೆ ಬಗ್ಗಿಸಿಕೊಳ್ಳಲು ನಾನಾ ವಿಧದ ಪ್ರಯತ್ನಗಳನ್ನೆಸಗುತ್ತಾನೆ. ಹೆಣ್ಣಿನ ಮೋಹಕ್ಕೆ ಬೀಳುವ ಮನಸ್ಸುಗಳು ಹಲವಾರು ಕಾರ್ಯತಂತ್ರಗಳನ್ನು ಹೆಣೆಯುವಂತೆ, ರಾವಣ ಕೂಡ ಸೀತೆಗೆ, ರಾಮನೆಂದೂ ಆ ಶತಯೋಜನ ಶರಧಿಯನ್ನು ದಾಟಿ ಬರುವುದು ಸಾಧ್ಯವಿಲ್ಲವೆಂದು ಅವಳನ್ನುಳಿದು ಆತ ಕಿಷ್ಕಿಂಧೆಯವಳೊಬ್ಬಳನ್ನು ನೆನೆದು ಸುಖವಾಗಿರುವನೆಂದು, ಆ ಕೃತಘ್ನನನ್ನು ಮರೆತು ತನ್ನನ್ನು ಒಲಿದು

ಸುಖವಾಗಿರಬೇಕೆಂದು ಪುಸಲಾವಣೆಯ ಮಾತುಗಳ್ನನಾಡುತ್ತಾನೆ. ಆ ನುಡಿಗಳ ಆಘಾತಕ್ಕೆ ತತ್ತರಿಸಿ ಸೀತೆ ಇಳೆಗೊರಗುವಾಗ ಅವಳಿಗೆ ಆಸರೆಯಾಗುವಳು ತ್ರಿಜಟೆಯೇ.

ರಾವಣನಿಗೆ ಸೀತೆ ಮರುತ್ತರ ಕೊಡುವುದು ಸಹ ತ್ರಿಜಟೆಯ ಮೂಲಕವಾಗಿಯೇ; ಅಷ್ಟೇ ಅಲ್ಲ, ಆಕೆ ತನ್ನನ್ನು ಒಲಿಯುವಂತೆ ತನ್ನ ಶಕ್ತಿ ಸಾಮರ್ಥ್ಯ ಪ್ರಭಾವಗಳನ್ನು ಅರಿಯುವಂತೆ ಭೋದಿಸಬೇಕೆಂದು ರಾವಣ ಹೇಳುವುದೂ ತ್ರಿಜಟೆಗೇನೇ ಹೀಗೆ ತ್ರಿಜಟೆ ಇವರೀರ್ವರ ನಡುವಿನ ಮಾಧ್ಯಮವಾಗಿ ಕಾರ್ಯ ನಿರ್ವಹಿಸುವಳು.

ಸೀತೆಯೇನಾದರೂ ನಿರಶನ ವ್ರತದಿಂದ ಆತ್ಮಹತ್ಯೆ ಮಾಡಿಕೊಂಡರೆ ತಾನೂ ಅದೇ ಚಿತೆಯನ್ನೇರಿ ಹೆಣದೊಡನೆಯೇ ಪವಡಿಸಿ ಭಸ್ಮರೂಪದಲ್ಲಾದರೂ ಅವಳನ್ನು ಕೂಡಿ ಸಾಯುಜ್ಯ ಹೊಂದುವೆನೆಂದು ಬೆದರಿಸಿದಾಗ, (ಈ ವಾಕ್ಯ ಜನ್ನನ ಅನಂತನಾಥ ಪುರಾಣದಲ್ಲಿ ಬರುವ ಚಂಡಶಾಸನನ ಚರಿತ್ರೆಯಲ್ಲಿ ನೋಡುತ್ತೇವೆ) ಸೀತೆಗೆ ಬದುಕು ಮರಣಗಳೆರಡೂ ಘೋರತರವಾದವುಗಳೆಂದೆನ್ನಿಸಿ ನಿರಾಶೆಯ ಪಾತಾಳದಲ್ಲಿ ಕುಸಿದು ಆಕೆ ದಿಕ್ಕುಗಾಣದೆ ಕಂಗೆಟ್ಟಾಗ ತಾನೂ ಅವಳೊಡನೆ ಅಳುತ್ತ ಮಾತೃ ಹೃದಯಿಯಾಗಿ ತಾಯಿಯಂತೆ ರಮಿಸಿ ಹಿತವಚನಗಳಿಂದ ಆಕೆಯ ಮನಸ್ಸಿನ ದುಗುಡು ದುಮ್ಮಾನಗಳನ್ನು ದೂರ ಮಾಡಿದವಳೂ ತ್ರಿಜಟೆಯೇ.

ವ್ಯಕ್ತಿಗಳನ್ನು ಸಂದರ್ಭಗಳನ್ನು ತೂಗಿ ನಿಷ್ಪಕ್ಷಪಾತವಾಗಿ ವಿಮರ್ಶಿಸುವ 'ನಿರ್ಮಲ ಹೃದಯ' ತ್ರಿಜಟೆಗಿತ್ತೆಂಬುದು ತಿಳಿದುಬರುತ್ತದೆ. ಅಷ್ಟೇ ಅಲ್ಲ ಸೀತೆಯ ಉದ್ಧಾರವೂ ಬಹುದೂರವಿಲ್ಲವೆಂಬುದನ್ನು ಆತ್ಮಸಾಕ್ಷಿಯಾಗಿಯೇ ನುಡಿದು ಆಕೆಯ ನಂದುತ್ತಿದ್ದ ಆಸೆಗೆ ಭರವಸೆಯ ಜಲವನ್ನೆರೆಯುತ್ತಾಳೆ. ತ್ರಿಜಟೆ "ಆ ಚಂದ್ರನಖಿಯುಮಂ ಧವಳಮಾರ್ಗಕೆ ಗೆಲ್ದ ನಿನಗೆ ನಿನ್ನುದ್ಧಾರಮನತಿದೂರಂ ವಲಂ!"[೪೭] ಎಂದು ಭವಿಷ್ಯ ನುಡಿಯುತ್ತಾಳೆ. ಚಂದ್ರನಖಿಯ ಪೂರ್ವಸ್ಥಿತಿ ತ್ರಿಜಟೆಗೆ ಪೂರ್ಣವಾಗಿ ಅರಿವಿತ್ತು ಅಂತಹ ತಾಮಸಪ್ರವೃತ್ತಿಯ ಘೋರ ರಕ್ಕಸಿಯನ್ನು ತನ್ನ ನಡೆನುಡಿಗಳ ಪ್ರಭಾವದಿಂದ ಸಾತ್ವಿಕ ಪಥದತ್ತ ಸೀತೆ ಪರಿವರ್ತಿಸಿದುದು ಅವಳಿಗೆ ಅಚ್ಚರಿಯ ಆನಂದದ ದೈವಿಕ ಸಂಗತಿಯಾಗಿತ್ತು ಆದ್ದರಿಂದಲೇ ಸೀತೆಯ ಮಹಾಧವಳಸತ್ವದ ಬಗ್ಗೆ ಆಕೆಗೆ ಭರವಸೆ ಗೌರವ ಆದರ ಅಗಾಧವಾಗಿ ಬೆಳೆದಿತ್ತು. ಇದರಿಂದಾಗಿ ಅವಳ ಮನಸ್ಸೂ ಸರಳ ಮುಗ್ದತೆಯಿಂದ ವೈಚಾರಿಕತೆಯ ಕಡೆಗೆ ಅತ್ಮಜ್ಞಾನದ ಕಡೆಗೆ ಅರಳತೊಡಗಿತ್ತು. ಒಳ್ಳೆಯವರ ಸಹವಾಸದಿಂದ ಉತ್ತಮ ಗುಣಗಳನ್ನು ಪಡೆಯುತ್ತಾರೆ ಎಂಬುದಕ್ಕೆ ತ್ರಿಜಟೆಯೇ ಸಾಕ್ಷಿ.

ಭವಿಷ್ಯಸೂಚಕ ಸ್ವಪ್ನವೊಂದನ್ನು ಕಾಣಲೂ ಆಕೆಗೆ ಸಾಧ್ಯ ಮಾಡಿ ಕೊಟ್ಟಿತ್ತು. ತನ್ನೆದೆಯ ಆಸೆಯೇ ಮೂರ್ತಗೊಂಡಂಥ ಸ್ವಪ್ನವನ್ನು ಸೀತೆಗೆ ಹೇಳಿ, ಅದು ಅವಳ ಮತ್ತು ರಾಮನ ಸಮ್ಮಿಲನವನ್ನು ರಾವಣನ ವಿನಾಶವನ್ನೂ ಸೂಚಿಸುತ್ತದೆಂಬುದನ್ನು ಆಕೆಗೆ ಅರಿವು ಮಾಡಿಕೊಡುತ್ತಾಳೆ. ಇಂಥ ಸಂತೋಷದ ಸಂಗತಿಯನ್ನು ಆರಿಸಿದ ದು:ಖತಪ್ತೆ ಸೀತೆ ಸಂಭ್ರಮದಿಂದ ಪರಿಸರವನ್ನೇ ಮರೆತು

ಆಕೆಯನ್ನು ಅಕ್ಕರೆಯಿಂದ ತಬ್ಬಲು ಹೋದಾಗ ತ್ರಿಜಟೆ ಸನ್ನೆಯಿಂದ ಅದನ್ನು ತಡೆದು, ಸುತ್ತಲಿನ ಕಾವಲನ್ನು ನೆನಪು ಮಾಡುತ್ತಾಳೆ ಇಲ್ಲೆಲ್ಲ ತ್ರಿಜಟೆಯ ಸಾತ್ವಿಕ ಹೃದಯ, ಶುಭ ದೃಷ್ಟಿ ಮತ್ತು ಪರಿಸರ ಪ್ರಜ್ಞೆಗಳು ಸೊಗಸಾಗಿ ವ್ಯಕ್ತವಾಗುತ್ತವೆ. ಆದರೂ ಸೀತೆ ತನಗಾದ ಸಂತೋಷವನ್ನು ಬಚ್ಚಿಡಲಾಗದೆ ಅವಳ ಕಿವಿಯಲ್ಲಿ ಉಸುರುತ್ತಾಳೆ.

ನಿನ್ನನ್ನರಿಂ ಸುಕ್ಷೇಮಮೀ ಲಂಕೆ.
ತ್ರಿಜಟೆ ರಾಕ್ಷಸ ನೀಚನಪವಚನ ನಿಚಯಮಂ
ನೂಂಕಿ, ಭೀರುಗೆ ಧೈರ್ಯಮಂ ನೀಡಿತಯ್ ನಿನ್ನ
ವಾಣಿ ಕನಸಿಗೆ ಮಿಗಿಲ್, ನಿನ್ನ ಹರುಷಮೆ ನನಗೆ
ಕೊಟ್ಟಿಪುದು ಕಲ್ಯಾಣಂ."[೪೮]

ಇದು ಕೇವಲ ಹೊಗಳಿಕೆಯಲ್ಲ; ಸೀತೆಯ ಅಂತರಂಗದಿಂದ ಹರಿದು ಬಂದ, ತ್ರಿಜಟೆಯ ವ್ಯಕ್ತಿತ್ವಕ್ಕೆ ಅರ್ಹವಾದ ಪ್ರಾಮಾಣಿಕ ಮಾತುಗಳಿವು.

ತ್ರಿಜಟೆಗೆ ಯಾವಾಗಲೂ ಸೀತೆಯದೇ ಧ್ಯಾನ, ಆಕೆಯ ಕಣ್ಣು, ಕಿವಿ, ಮನಸ್ಸುಗಳೆಲ್ಲ ಸೀತೆಯ ಸುತ್ತಲೂ ಸದಾ ಕಾವಲು ಕಾಯುತ್ತಿದ್ದವು. ಗಂಡನಿಂದ ದೂರಾದ ಸೀತೆ ಯಾವ ಗಳಿಗೆಯಲ್ಲಿ ಏನಾದರೂ ಮಾಡಿಕೊಂಡಾಳು ಎಂಬ ಶಂಕೆಯಿಂದ ಸದಾ ಅವಳನ್ನು ಬಾಧಿಸುತ್ತಿತ್ತು ಅದಕ್ಕಾಗಿ ಸೀತೆಗೆ "ಯಾವ ಅಕಾರ್ಯಕ್ಕೂ ಮನಸ್ಸು ಕೊಡಬೇಡ. ನಿನ್ನ ಪ್ರಾಣಕ್ಕೆ ನನ್ನ ಪ್ರಾಣವನ್ನು ಒತ್ತೆ ಇಟ್ಟಿದ್ದೇನೆ : ನಿನ್ನ ಪ್ರಾಣಕ್ಕೆ ಏನಾದರೂ ಕೇಡು ಉಂಟಾದರೆ ಅದರ ಬಳಿಯೇ ನನ್ನ ಹೆಣ ನೇತಾಡುತ್ತದೆ" ಈ ವ್ಯಾಖ್ಯಾನದಿಂದ ಸೀತೆಯೆ ಮೇಲಿನ ವಾತ್ಸಲ್ಯ ಈಕೆಯ ಹೃದಯದಲ್ಲಿ ಎಷ್ಟೊಂದಿತ್ತು ಎಂಬುದಕ್ಕೆ ಬೇರೆ ವಾಕ್ಯಗಳ ಅವಶ್ಯಕತೆಯಿಲ್ಲವೆನಿಸುತ್ತದೆ.

ಆಂಜನೇಯನ ಆಗಮನದಿಂದ ಆತನನ್ನು ಶೋಧಿಸುತ್ತ ರಾಕ್ಷಸ ಸೈನ್ಯದ ಆರ್ಭಟವನ್ನು ಕೇಳಿ ಹೆದರಿದ ತ್ರಿಜಟೆ, ಹೆದರಿ ಬೇಟೆಗಾರರಿಂದ ತಾಯಿ ಹುಲಿ ತನ್ನ ಮರಿಯನ್ನು ರಕ್ಷಿಸುವದಕ್ಕಾಗಿ ತಂದು ಗವಿಯಲ್ಲಿರಿಸುವಂತೆ, ಸೀತೆಯನ್ನು ಎತ್ತಿ ತಂದು ಪರ್ಣಕುಟಿಯಲ್ಲಿ ಕೂರಿಸುತ್ತಾಳೆ ತ್ರಿಜಟೆಯ ಮಾತೃ ಹೃದಯಕ್ಕೆ ಈ ಒಂದು ನಿದರ್ಶನ ಸಾಕೆನಿಸುವುದು.

ಮರಿ ಹಕ್ಕಿ ಹಸಿವಾದಾಗ ತನ್ನ ತಾಯಿಯನ್ನು ಆಹಾರ ಕೋರುವಂತೆ ಸೀತೆ ತನಗೆ ಹಣ್ಣುಗಳನ್ನು ತಾರೆಂದೂ ಕೇಳಿ, ನಡೆದ ಘಟನೆಗೆ ಸ್ವಲ್ಪವೂ ಅಂಜದೆ ತ್ರಿಜಟೆಯೇ ಬೆರಗಾಗುವಂತೆ ಅವಳಿಗೆ ಅಭಯ ನೀಡುತ್ತಾಳೆ.

ರಾಮ ಮತ್ತು ರಾವಣನ ಮಧ್ಯೆ ಹೋರಾಟ ತೀವ್ರವಾಗಿ ದಿನದಿನವೂ ಲಂಕೆಯ ಮನೆಮನೆಯೂ ಕಣ್ಣೀರಿನಿಂದ ತುಂಬಿ ಹೋದಾಗ ತ್ರಿಜಟೆ ಕೆಲ ಪ್ರಶ್ನೆಗಳನ್ನು ಕೇಳಿದಾಗ, ಆಕೆ ಮೌನ ಗಂಭೀರಳಾಗಿದ್ದು, ದು:ಖ ಜಲವನ್ನು ತುಂಬಿಕೊಂಡಂತಹ ಮೇಘ ಅದನ್ನು ನೋಡಿ ಆಕೆಯೂ ದು:ಖಕ್ಕೀಡಾಗುವಳು. ಅವಳ ದು:ಖದಲ್ಲಿ ಇವಳೂ ಪಾಲ್ಗೊಳ್ಳುವಳು.

ತ್ರಿಜಟೆಯ ಬಗ್ಗೆ ಸೀತೆ ತಳೆದಿದ್ದ ಭಾವ ಎಂಥದೆಂಬುದನ್ನು ಇದು ಅಭಿವ್ಯಕ್ತ ಪಡಿಸುತ್ತದೆ ಸ್ವತ ಸೀತೆಯಿಂದ ಅಕ್ಕ, ತಾಯಿ ಎಂದು ಕರೆಸಿಕೊಳ್ಳುವ ಸೌಭಾಗ್ಯವನ್ನು ಪಡೆದವಳು ತ್ರಿಜಟೆ ಸೀತೆಯ ಕಾತುರದ ಪ್ರಶ್ನೆಗಳಿಗೆ ಉತ್ತರಿಸುತ್ತ ಕುಂಭಕರ್ಣ ಮಡಿದುದನ್ನು ಅಸಂಖ್ಯಾತ ರಕ್ಕಸರು ರಣಮಾರಿಗೆ ಆಹುತಿಯಾದುದನ್ನು ಮಡಿದವರ ಶವಗಳಿಗೆ ಸಾಮೂಹಿಕ ದಹನ ಕ್ರಿಯೆಯನ್ನು ಮಾಡುತ್ತಿದ್ದುದನ್ನೂ ತಿಳಿಸಿ, ಅವರಲ್ಲಿ ತನ್ನ ತಂದೆಯ ಶವವೂ ಕೂಡ ಇರಬಹುದೆಂದು ಉಸುರುತ್ತಾಳೆ.

ಅಷ್ಟೇ ಅಲ್ಲ ಅಣ್ಣನ ಸ್ಥಿತಿಯೂ ಚಿಂತಾಜನಕವಾಗಿದ್ದರೂ, ಆ ನೋವಿನಲ್ಲೂ ಸೀತೆಯ ಕಾವಲಕ್ಕಾಗಿ ಧಾವಿಸಿದ್ದಾಳೆ ತ್ರಿಜಟೆ. ಆದರೆ ಹೀಗೆಯೇ ಯುದ್ಧ ಮುಂದುವರಿದರೆ ತನ್ನ ಗಂಡನಿಗೂ ಏನಾದರೂ ಆದರೆ ತನ್ನ ಗತಿಯೇನು ಎಂಬ ಚಿಂತೆಯಲ್ಲಿ ಮುಳುಗಿದಾಗ, ವೈದೇಹಿಗೆ ನಿಜವೆನಿಸಿ ತೀವ್ರ ಸಂಕಟಪಡುತ್ತಾಳೆ. ತನ್ನಿಂದ ಯಾರ್‍ಯಾರಿಗೆ ಎಂಥೆಂಥ ಕಷ್ಟ ಎಂದು ತನ್ನನ್ನು ತಾನು ಜರೆದುಕೊಳ್ಳುತ್ತಾಳೆ, ಆದರೂ ತನ್ನನ್ನು ಮಾತೃಹೃದಯದಿಂದ ಪೋಷಿಸುತ್ತಿರುವ ತ್ರಿಜಟೆಯ ಬದುಕನ್ನು ಭದ್ರಗೊಳಿಸುವುದು ತನ್ನ ಕರ್ತವ್ಯವೆಂದು ಆಕೆ ಭಾವಿಸುತ್ತಾಳೆ.

ತ್ರಿಜಟೆಯ ದು:ಖ ಸೀತೆಯ ತಪ: ಶಕ್ತಿಯನ್ನು ಜಾಗೃತಗೊಳಿಸಿ, ಆಕೆ ಆಶ್ಚರ್ಯಕರ ರೀತಿಯಲ್ಲಿ ಆಶ್ವಾಸನೆ ನೀಡುತ್ತಾಳೆ.

ನನ್ನ ಮಾಂಗಲ್ಯಮಂ ಪಣವಿಟ್ಟು ಪೇಳ್ವೆನೀ
ಪೂಣ್ಕೆಯಂ ನಿನಗೆ ವೈಧವ್ಯಮಾದಂದೆನಗೆ
ವೈಧವ್ಯಮೆಂದು ತಿಳಿ! ಆ ಭೀತಿಯಂ ಬಿಡು ಕೆಳದಿ''

ತ್ರಿಜಟೆಯ ತ್ರಿಕರಣ ಸೇವೆಯೇ ತನ್ನ ಪ್ರತಿಫಲ, ಇದನ್ನು ಹರಕೆಯಲ್ಲ, ವರವೆಂದು ಭಾವಿಸುತ್ತಾಳೆ. ತ್ರಿಜಟೆ. ಅವಳ ಮನಸ್ಸಿನೊಳಗೆ ಸೀತೆಯನ್ನು ನೋಯಿಸಿದೆನೆಂದು ಅನ್ನಿಸಿ, ಅಂತ:ಕರಣ ಜಾಗೃತವಾಗಿ ಕೈ ಮುಗಿದು ಕ್ಷಮೆ ಕೇಳುತ್ತಾಳೆ.

ಅನ್ಯರ ಸೇವೆಯೇ ಬದುಕಿನ ಪ್ರಧಾನ ಗುರಿಯೆಂದು ತಿಳಿದಿದ್ದ. ಸಾಮಾನ್ಯ ಸ್ತ್ರೀಯಲ್ಲಿ ಕೆಲವು ವೇದಸಾರದ ನುಡಿಗಳು ಒಮ್ಮೊಮ್ಮೆ ಬಂದಾಗ, ಆ ಮಾತುಗಳನ್ನು ಕೇಳಿದ ಸೀತೆ ಬೆರಗಾಗಿ ಈ ಮಾತನ್ನು ಎಲ್ಲಿ ಕಲಿತೆ ಎಂದು ಪ್ರಶ್ನಿಸಿದಾಗ, ತ್ರಿಜಟೆ "ನೀನೇ ಗುರುವಲ್ತೆ" ಎಂದು ಧನ್ಯತಾಭಾವದಿಂದ

ಹೇಳಿದಳು. ಈ ಮಾತುಗಳಲ್ಲಿ ಅವಳಿಗೆ ಸೀತೆಯ ಮೇಲಿದ್ದ ಅಭಿಮಾನ, ನಂಬಿಕೆ, ನಿರಹಂಕಾರದ ಭಾವನೆ ಇರುವುದನ್ನು ಕವಿ ಪ್ರತಿಬಿಂಬಿಸಿದ್ದಾನೆ. ಅಷ್ಟೆ ಅಲ್ಲದೆ ಸೀತೆಗೆ ಪ್ರತಿಯಾಗಿ ಏನು ಹೇಳಬೇಕೆಂಬುದೇ ತೋರ್ಪಡದೆ "ಪಿರಿಯೊಳ್ ನೀ ಸಖೀ, ಪೆರ್ಮೆನುಡಿಗಳಿಗೆ ಪೊಣ್ಮುತಿರ್ಪುದು ನಿನ್ನ ಜಿಹ್ವೆ!" ಎಂದು ಹೃದಯ ತುಂಬಿ ಕೊಂಡಾಡುತ್ತಾಳೆ. ತ್ರಿಜಟೆಯ ವ್ಯಕ್ತಿತ್ವದ ಸಾರ್ಥಕತೆಗೆ ಸಾಧ್ವಿಯಾದ ಸೀತೆಯ ಈ ಪ್ರಶಸ್ತಿಗಿಂತ ಬೇರೇನೂ ಬೇಡವಾದೀತು.

ತನ್ನ ಕಡೆಯ ಮಹಾವೀರರೆಲ್ಲ ಅಳಿದು, ತಾನೊಬ್ಬನೇ ಉಳಿದು, ತನ್ನ ಮೂಲಬಲವನ್ನು ಯುದ್ಧದಲ್ಲಿ ತೊಡಗಿಸಬೇಕಾದ ಅನಿವಾರ್ಯತೆಯೊದಗಿದಾಗ ರಾವಣ ಕೊನೆಯ ಬಾರಿ ಸೀತೆಯ ದರ್ಶನಕ್ಕೆಂದು ಬರುತ್ತಾನೆ. ಕೊನೆಯ ಭೇಟಿಯಲ್ಲಿ ಆತ ಅಲ್ಲಿ ನೋಡಿದ್ದು ಪರ್ಣಶಾಲೆಗೆ ಚಿತಾಗ್ನಿ ಹೊತ್ತಿರುವುದನ್ನು, ಆ ಉರಿಯ ನಡುವೆ ಸೀತೆಯ ಬದಲಾಗಿ ರಣಚಂಡಿ ನರ್ತಿಸುವುದನ್ನು ಕಂಡು ಹೌಹಾರಿ ಪರ್ಣಕುಟಿಯ ಬಳಿ ಬರದೆಯೇ ಅಂಜಿ ದೂರದಿಂದಲೇ ಹಿಂದಿರುಗುತ್ತಾನೆ.

ರಾವಣನ ಅಂಜಿಕೆಯ ಈ ನೋಟವನ್ನು ನೋಡಿ ಸೀತೆಗೆ ತಿಳಿಸಿದಾಗ, ಧ್ಯಾನದಲ್ಲಿ ಮುಳುಗಿದ್ದ ಆಕೆ ಗಂಭೀರ ಮುಖ ಮುದ್ರೆಯಿಂದ "ಬಾರನಿನ್ ಬಾಳಿಗವನ್ ಈ ಜನ್ಮದೊಳ್! ತ್ರಿಜಟೆ ಕುಡಿದುದಾತನ ಸೂತ್ರ ಮಾಯೆ ಪಟವಾಡಿಪಳ್ ಜೀವಗಳನೆಂಬೆ : ಆದ್ಯಾಶಕ್ತಿ, ಕಾಲವಶಿಯಿನ್ ರಾಕ್ಷಸನ ಬಾಲ್ ಪಟಂ" ಎಂದು ನುಡಿದಾಗ ತನ್ನ ಮುಂದಿದ್ದೂ ತನಗಪರಿಚಿತಳಂತೆ ಗೋಚರವಾಗುತ್ತಿರುವ ಆಕೆಯ ಧ್ವನಿಶಕ್ತಿಗೆ ಅಶ್ಚರ್ಯಗೊಂಡ ತ್ರಿಜಟೆಗೆ ಸತ್ಯ ದರ್ಶನವಾಗುತ್ತದೆ.

ಸೀತಾದೇವಿಯಲ್ಲಿ ದೈವತ್ವವನ್ನು ಕಂಡು ತ್ರಿಜಟೆ ಅವಳಲ್ಲಿ ಧನ್ಯತಾಭಾವ ಕಾಣುತ್ತಾಳೆ ಅವಳನ್ನು ಮೇಲೆತ್ತಿ ಹರಿಸಿ ಸಂತೈಸಿ ತಮ್ಮೆಲ್ಲರ ಸಾಕ್ಷಾತ್ಕಾರಕ್ಕೆ ಕಾರಣವಾದ ಅವಳನ್ನು ಮನಃ ಪೂರ್ವಕವಾಗಿ ನೆನೆಯುತ್ತಾಳೆ. ಕೃತಾರ್ಥಭಾವದಿಂದ ಆಕೆ ಮರು ನುಡಿಯುತ್ತಾಳೆ.

ನಾನು ಮೊರ್ವಳಾ ಜೀವರ್ಕಳೊಳ್
ನಾಂ ಕೃತಜ್ಞೆ ಲಂಕೇಶ್ವರಗೆ !
ನಿನ್ನ ಸೇವಾಭಾಗ್ಯಮೆನಗಾದುದಾತನಿಂ.
ನಾನೆಲ್ಲಿ? ನೀನೆಲ್ಲಿ? ಲಂಕಾ ಅಯೋಧ್ಯಾಂತರಂ !
ಲಭಿಸುತಿರ್ದುದೆ ನನಗೆ ನಿನ್ನ ದರ್ಶನಮಾ
ದಶಗ್ರೀವ ಸಾಹಸವಿನಾ ?[೩೦]

ವಿಧಿಯೊಡ್ಡಿದ ಜೀವನದ ಜಟಿಲ ಜಾಲದಲ್ಲಿ ಒಂದೊಂದು ಘಟ್ಟದಲ್ಲಿ ಒಬ್ಬೊಬ್ಬರಿಗೆ ಒಬ್ಬೊಬ್ಬರಿಂದ ಒಂದೊಂದು ಕಾರಣದಿಂದ ಜೀವನದ ಸಾಕ್ಷಾತ್ಕಾರ, ದೈವದ ಸಾಕ್ಷಾತ್ಕಾರ ಆಗುತ್ತದೆ. ಆ ಸಾಕ್ಷಾತ್ಕಾರ ಹಂತಹಂತವಾಗಿ ನಡೆಯುವ ಶ್ರದ್ಧಾಪೂರ್ಣವಾದ ಸಾಧನೆಯಿಂದ ಇದು ಲಭ್ಯವಾಗುತ್ತದೆ.

ಮುಗ್ಧಳಾದ, ಸಾಮಾನ್ಯಳಾದ ತ್ರಿಜಟೆ ಸೀತೆಯ ಸಾನಿಧ್ಯದಿಂದ ಸಮರ್ಪಣಾಭಾವದ ಸೇವೆಯಿಂದ, ವಾತ್ಸಲ್ಯಪೂರ್ಣ ತನ್ಮಯತೆಯಿಂದ ಧನ್ಯಳಾಗುತ್ತಾಳೆ. ಸಾಮಾನ್ಯತೆ ತನ್ನಂತರಂಗದ

ಪ್ರಾಮಾಣಿಕತೆ ಮತ್ತು ಪರಿಶುದ್ಧತೆಗಳಿಂದ, ಶ್ರದ್ಧೆ ಹಾಗೂ ಪರಿಶ್ರಮಗಳಿಂದ ಪರಿಪೂರ್ಣತೆಯನ್ನು ಅಸಾಮನ್ಯತೆಯನ್ನು ಗಳಿಸಿಕೊಳ್ಳುವುದು ಸುಲಭಸಾಧ್ಯ ತತ್ವವನ್ನು ಕವಿ ಈ ಪಾತ್ರದ ಮೂಲಕ ಅನ್ಯಾದೃಶವಾಗಿ ಕೆನೆಗಟ್ಟಿಸಿದ್ದಾರೆ.

. . .

ಟಿಪ್ಪಣಿಗಳು

೧) ಕುವೆಂಪು : ಶ್ರೀ ರಾಮಾಯಣ ದರ್ಶನಂ : ಅಯೋಧ್ಯಾಕಾಂಡ : ಪುಟ–೪೨–೪೪

೨) ಡಾ. ಎಚ್. ಜೆ. ಲಕ್ಕಪ್ಪಗೌಡ : ಶ್ರೀ ರಾ. ದ. ಪಾತ್ರಲೋಕ : ಪುಟ–೨೪೦

೩) ಕುವೆಂಪು : ಶ್ರೀ ರಾ. ದ. : ಪುಟ–೮೭

೪) ಕುವೆಂಪು : ಶ್ರೀ ರಾ. ದ. : ಪುಟ–೨೯

೫) ಅದೇ : ಪುಟ–೨೩೩

೬) ಕುವೆಂಪು : ಶ್ರೀ ರಾ. ದ. : ಓ ಲಕ್ಷ್ಮಣಾ! : ಪುಟ–೨೯–೨೪೨

೭) ಕುವೆಂಪು : ಶ್ರೀ ರಾ. ದ. : ಸಂಸ್ಕೃತಿ ಲಂಕಾ : ಪುಟ–೨೨೦

೮) ಕುವೆಂಪು : ಶ್ರೀ ರಾ. ದ. : ಪುಟ–೪೮೪

೯) ಕುವೆಂಪು : ಶ್ರೀ ರಾ. ದ. : "ಮಹಾಚ್ಛೆಲ್ಪಿದಿಟಂ" : ಪುಟ–೨೩೬

೧೦) ಕುವೆಂಪು : ಶ್ರೀ ರಾ. ದ. : ದಶಾನನ ಸ್ವಪ್ನ ಸಿದ್ಧಿ : ಪುಟ–೨೬೮

೧೧) ಕುವೆಂಪು : ಶ್ರೀ ರಾ. ದ. : ಪುಟ–೦೦೦

೧೨) ಅದೇ : ಪುಟ–೧೪೮

೧೩) ಕುವೆಂಪು : ಶ್ರೀ ರಾ. ದ. ಅಯೋಧ್ಯಾ ಸಂಪುಟ : ಪುಟ–೨೧೭–೨೧

೧೪) ಅದೇ : ಪುಟ–೬೪

೧೫) ಡಾ. ಎಚ್. ಜೆ. ಲಕ್ಕಪ್ಪಗೌಡ : ಶ್ರೀ ರಾ. ದ. ಪಾತ್ರಲೋಕ : ಪುಟ–೨೭೯

೧೬) ಅದೇ : ಪುಟ–೨೮೧

೧೭) ಅದೇ : ಪುಟ–೨೮೪

೧೮) ಅದೇ : ಪುಟ–೨೮೭–೮೮

೧೯) ಕುವೆಂಪು : ಶ್ರೀ ರಾ. ದ. ಕವಿಕ್ರತುದರ್ಶನ : ಪುಟ–೨೦

೨೦) ಕುವೆಂಪು : ಶ್ರೀ ರಾ. ದ. : ಪುಟ–೨೪

೨೧) ಅದೇ : ಪುಟ–೬೫

೨೨) ಕುವೆಂಪು : ಶ್ರೀ ರಾ. ದ. ಅಯೋಧ್ಯಾ ಕಾಂಡ ಸಂಪುಟ : ಪುಟ–೧೨೧

೨೩) ಕುವೆಂಪು : ಶ್ರೀ ರಾ. ದ. : ಪುಟ–೧೨೨

೨೪) ಕುವೆಂಪು : ಶ್ರೀ ರಾ. ದ. ಅಯೋಧ್ಯಾ ಕಾಂಡ ಸಂಪುಟ : ಪುಟ–೧೨೩

೨೫) ಕುವೆಂಪು : ಶ್ರೀ ರಾ. ದ. ತಪಸಿದ್ಧಿ : ಪುಟ–೮೨೪

೨೬) ಕುವೆಂಪು : ಶ್ರೀ ರಾ. ದ. ಚಿತ್ರಕೂಟಕೆ : ಪುಟ–೧೩೦

೨೭) ಕುವೆಂಪು : ಶ್ರೀ ರಾ. ದ. ಶ್ರೀ ಸಂಪುಟ : ಪುಟ–೮೫೧

೨೮) ಅದೇ : ಪುಟ–೮೪೨–೫೩

೨೯) ಕುವೆಂಪು : ಶ್ರೀ ರಾ. ದ. ಕನಕ ಲಂಕಾನ್ವೇಷಣಂ : ಪುಟ–೪೫೫

೩೦) ಕುವೆಂಪು : ಶ್ರೀ ರಾ. ದ. ನಾನಕ್ಕನೆನ್ ನಿನಗೆ ತಂಗೆ : ಪುಟ–೩೩೬

೩೧) ಕುವೆಂಪು : ಶ್ರೀ ರಾ. ದ. ನಿರಿ ಮಹಚ್ಛಿಲ್ಪಿದಿಟಂ : ಪುಟ–೭೨೫

೩೨) ಕೋ. ಚೆನ್ನಬಸಪ್ಪ : ಶ್ರೀ ರಾ. ದ. ಮಹಾಕಾವ್ಯಸಮೀಕ್ಷೆ : ಪುಟ–೩೧೨–೧೩

೩೩) ಅದೇ :

೩೪) ಅದೇ :

೩೫) ಕೋ. ಚೆನ್ನಬಸಪ್ಪ : ಶ್ರೀ ರಾ. ದ. ಮಹಾಕಾವ್ಯ ಸಮೀಕ್ಷೆ : ಪುಟ–೩೧೯

೩೬) ಕುವೆಂಪು : ಶ್ರೀ ರಾ. ದ. : ಪುಟ–೨೦೭

೩೭) ಅದೇ : ಪುಟ–೨೩೩–೩೪

೩೮) ಕುವೆಂಪು : ಶ್ರೀ ರಾ. ದ. ಶಬರಿಗಾದನು : ಅತಿಥಿ ದಾಶರಥಿ : ಪುಟ–೨೬೭

೩೯) ಅದೇ : ಪುಟ–೨೬೯

೪೦) ಅದೇ : ಪುಟ–೨೭೪

೪೧) ಅದೇ : ಪುಟ–೨೭೫

೪೨) ಅದೇ : ಪುಟ–೨೭೭

೪೩) ಕುವೆಂಪು : ಶ್ರೀ ರಾ. ದ. ಲಂಕಾಸಂಪುಟ : ಪುಟ–೪೪೩

೪೪) ಅದೇ : ಪುಟ–೪೫೩

೪೫) ಡಾ. ಎಚ್. ಜೆ. ಲಕ್ಕಪ್ಪಗೌಡ : ಶ್ರೀ ರಾ. ದ. ಪಾತ್ರ : ಪುಟ–೪೦೧

೪೬) ಕುವೆಂಪು : ಶ್ರೀ ರಾ. ದ. ಲಂಕಾಸಂಪುಟ : ಪುಟ–೮೩೯

೪೭) ಅದೇ : ಪುಟ–೪೮೭

೪೮) ಅದೇ : ಪುಟ–೬೯೧

೪೯) ಅದೇ : ಪುಟ–೭೫೪

೫೦) ಅದೇ : ಪುಟ–೭೪೬

ಅಧ್ಯಾಯ – ೪

ಮಹಿಳಾ ವಿಮೋಚನೆ
ಮತ್ತು ಕುವೆಂಪು ದರ್ಶನ

೪.೧ ವಿಮೋಚನೆ ಪದದ ಅರ್ಥ

೪.೨ ಪ್ರಾಚೀನ ಭಾರತದಲ್ಲಿ ಮಹಿಳಾ ವಿಮೋಚನೆ

೪.೩ ಪಾಶ್ಚಾತ್ಯದಲ್ಲಿ ಸ್ತ್ರೀ ವಾದ

೪.೪ ಶ್ರೀ ರಾಮಾಯಣ ದರ್ಶನಂದಲ್ಲಿ ಮಹಿಳಾ ವಿಮೋಚನೆ

[illegible]

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ – ೪
ಮಹಿಳಾ ವಿಮೋಚನೆ ಮತ್ತು ಕುವೆಂಪು ದರ್ಶನ

'ವಿಮೋಚನೆ' ಈ ಪದದ ಅರ್ಥ–ಬಿಡುಗಡೆ, ಮೋಕ್ಷ ಎಂದಾಗುತ್ತದೆ. ಮಹಿಳೆಯನ್ನು ಪುರುಷ ಶೋಷಣೆಯಿಂದ ಸ್ವತಂತ್ರಳಾಗುವುದೇ ಎಂದರ್ಥ, ಮಹಿಳೆಯು ಪುರುಷನ ಅಡಿಯಾಳಾಗಿ ಬಾಳಿದ್ದು ಇಂದು ನಿನ್ನೆಯ ಸಂಗತಿಯಲ್ಲ ಅದು ತಲತಲಾಂತರ ವೇದಗಳ ಕಾಲದಿಂದಲೂ ಮುಂದುವರೆದುಕೊಂಡು ಬಂದದ್ದೇ ಆಗಿದೆ. ಅನಾದಿಕಾಲದಿಂದಲೂ ಆಕೆ ಸಾಮೂಹಿಕ ನೆಲೆಯಲ್ಲಿ ಶಿಶುಪಾಲನೆ, ಅಡುಗೆ, ಬಟ್ಟೆ ತೊಳೆಯುವ ಕಾಯಕ ಇತ್ಯಾದಿ ಕಾರ್ಯದಲ್ಲಿ ನಿರತಳಾಗಿ ಪುರುಷನ ಅಡಿಯಾಳಾಗಿಯೇ ಬದುಕಿದ್ದಾಳೆ, ಬದುಕುತ್ತಿದ್ದಾಳೆ.

"ಸಮಾಜದ ಬಹುಮುಖ್ಯ ಘಟಕವಾದ ಕುಟುಂಬದ ಪರಿಕಲ್ಪನೆಯು ಋಗ್ವೇದ ಸಂಹಿತೆಯಲ್ಲಿ ನಮಗೆ ದೊರೆಯುತ್ತದೆ. ಸೂರ್ಯನ ಮಗಳು ಸೂರ್ಯಳ ಮದುವೆಯ ಉಲ್ಲೇಖದಲ್ಲಿ ವಧು ತನ್ನ ಗಂಡನ ಮನೆಗೆ ಸಾಮ್ರಾಜ್ಞಿಯಾಗಿ ಹೋಗುತ್ತಾಳೆ ಎಂದಿದೆ. ಪತಿ, ಮಕ್ಕಳು, ಅತ್ತೆಮಾವ, ಮೈದುನ, ನಾದಿನಿ, ಸಂಪತ್ತಿನ ಮೇಲೆ ಪೂರ್ಣಪ್ರಭುತ್ವ ನಿನಗಿರಲಿ ಎಂದು ಹೆಣ್ಣನ್ನು ಹರಸಿ ಕಳುಹಿಸಿ ಕೊಡಲಾಗುತ್ತದೆ. ಆದರೆ ಮಾತೃಮೂಲ ಬಹುಪತ್ನಿತ್ವ ಪದ್ಧತಿಯಲ್ಲಿ ಹೆಣ್ಣಿನ ಮೂಲಕ ಸಂತತಿಯನ್ನು ಗುರುತಿಸಲಾಗುತ್ತಿತ್ತು. ಅದರ ಜೊತೆಗೇ ಪಿತೃಮೂಲ ಬಹುಪತ್ನಿತ್ವ ಪದ್ಧತಿಯು ಜಾರಿಯಲ್ಲಿದ್ದು ಅದೇ ಕ್ರಮೇಣ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು."[೧]

ಕೃಷಿ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಕೇಂದ್ರಸ್ಥಾನವಿತ್ತೆಂದು ಮಾನವಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಸ್ತ್ರೀ ಫಲವಂತಿಕೆ ಹಾಗೂ ಸಮೃದ್ಧಿಯ ಸಂಕೇತವಾಗಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆ ಜಾರಿಗೊಳ್ಳುವವರೆಗೂ ಸ್ತ್ರೀ ಫಲವಂತಿಕೆಯ ಸಂಕೇತವಾಗಿಯೇ ಚಿತ್ರಿತಳಾಗಿದ್ದಳು. ಆಗ ಅವಳನ್ನು ಲೈಂಗಿಕ ಕಾಮನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲಾಗದ ಚಪಲೆಯಾಗಿರಲಿಲ್ಲ. ಆದರೆ ಪಿತೃಪ್ರಧಾನ ವ್ಯವಸ್ಥೆ ಗಟ್ಟಿಗೊಂಡಂತೆಲ್ಲ ಅವಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕಾದ ಕಠಿಣ ನಿಯಮಾವಳಿಗಳ ಸಂಹಿತೆ ಸಿದ್ಧಗೊಂಡಿತು.

ಜೈವಿಕ ಆಧಾರದ ಅಥವಾ ಲಿಂಗಭೇದದ ಆಧಾರದ ಮೇಲೆ ಮಾನವ ಜನಾಂಗವನ್ನು ಸ್ತ್ರೀಯರು ಮತ್ತು ಪುರುಷರು ಎಂದು ಎರಡು ಸಮೂಹಗಳಾಗಿ ವರ್ಗೀಕರಿಸುತ್ತಾರೆ. ಇದೊಂದೇ ಕಾರಣಕ್ಕೆ ಅವರುಗಳ ಈ ನಡುವೆ ಬಹಳಷ್ಟು ಭೂಷಣಗಳು ಕೆಲಸ ಹೊಣೆಗಾರಿಕೆಗಳು ಹಾಗೂ

[illegible]

[illegible]

[illegible]

[illegible]

[illegible]

[illegible]

ಪಾತ್ರ ಅಂತಸ್ತುಗಳು ಭಿನ್ನವಾಗಿವೆ. ಇದು ವರೆಗಿನ ಇತಿಹಾಸದಲ್ಲಿ ಸ್ತ್ರೀ ಪುರುಷರಿಬ್ಬರೂ ಸರಿ ಸಮಾನರಾಗಿದ್ದ ಉದಾಹರಣೆ ಒಂದೂ ಇಲ್ಲ. ಎಲ್ಲ ಕಾಲದ ಸ್ತ್ರೀಯರು ಪುರುಷರಂತೆ ಬಾಳಬೇಕೆಂಬ ಅಭಿಲಾಸೆ ಇಟ್ಟುಕೊಂಡಿದ್ದಿರಬಹುದಾದರೂ ಅದು ಇವರಿಗೆ ಸಾಧ್ಯವಾಗಿರಲಿಕ್ಕಿಲ್ಲ. ಸ್ತ್ರೀ ಪುರುಷರಿಬ್ಬರೂ ಭಿನ್ನ ಭಿನ್ನ ಸಂಸ್ಕೃತಿಗಳ ಪ್ರತ್ಯೇಕ ಪ್ರತಿಮೆಗಳಾಗಿದ್ದಾರೆ.

"ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗೂ ಸಮಾಜದಲ್ಲಿ ಸಮಾನ ಸ್ಥಾನವಿತ್ತೆಂಬುದಕ್ಕೆ ಕೆಲವು ಸಮರ್ಥನೆಗಳು –

* ಅಪಸ್ತಂಭನೆಂಬ ಸ್ಮೃತಿಕಾರನು ವಿಧಿಸಿರುವಂತೆ ಸ್ತ್ರೀಯೊಬ್ಬಳು ನಡೆಯುವಾಗ ಉಳಿದವರೆಲ್ಲರೂ ಆಕೆಗೆ ದಾರಿಬಿಟ್ಟು ಅವಕಾಶ ಮಾಡಿಕೊಡಬೇಕು.
* ಸ್ಮೃತಿಕಾರ ಮನುಮಹರ್ಷಿ ತಿಳಿಸಿರುವಂತೆ– ಸ್ತ್ರೀಯರು ಸದಾ ದು:ಖದಿಂದ ಇರುವ ಕುಟುಂಬಗಳು ಏಳಿಗೆ ಕಾಣದೇ ನಶಿಸುತ್ತವೆ. ಆದರೆ ಅವರು ಸಂತಸದಿಂದ ಇರುವೆಡೆ ಅವು ಉತ್ತರೋತ್ತರ ಸಮೃದ್ಧಿಯನ್ನು ಕಾಣುತ್ತವೆ, ಮಾತ್ರವಲ್ಲ. 'ಯತ್ರ ನಾರ್ಯಂತು ಪೂಜ್ಯತೆ ತತ್ರ ರಮಂತಾ ದೇವತಾ' ಎಂದಿದ್ದಾನೆ.
* ಯಾಜ್ಞವಲ್ಕ್ಯ ತಿಳಿಸಿರುವಂತೆ ಸ್ತ್ರೀಯರು ಭೂಮಿಯಲ್ಲಿರುವ ಎಲ್ಲಾ ದೈಹಿಕ ಗುಣಗಳ ಪ್ರತಿ ಮೂರ್ತಿಗಳಿದ್ದಂತೆ.
* ಮಹಾಭಾರತದಲ್ಲಿ–ಸ್ತ್ರೀಯರು ಸಮಸ್ತ ಸಾಮಾಜಿಕ ಸಂಘಟನೆಯ ಕೇಂದ್ರ ಬಿಂದುಗಳಿದ್ದಂತೆ ಎಂಬ ಮಾತಿದೆ."[೨]

ವೇದಗಳ ಕಾಲದಲ್ಲಿ ಸ್ತ್ರೀಯರು, ಶಿಕ್ಷಣ, ವಿವಾಹ, ವಿವಾಹ, ವಿವಾಹ ವಿಚ್ಛೇದನ, ಉತ್ಪಾದನೆ, ಸಂಪತ್ತಿನ ಅನುಭೋಗ, ಧಾರ್ಮಿಕ ಕ್ರಿಯಾವಿಧಿಗಳ ಆಚರಣೆ ಮುಂತಾದ ವಿಷಯಗಳಲ್ಲಿ ಪುರುಷರಷ್ಟೇ ಸ್ವತಂತ್ರರಾಗಿದ್ದರು. ಸ್ತ್ರೀ ಇಲ್ಲದ ಪುರುಷ ಹಾಗೂ ಪುರುಷನಿಲ್ಲದ ಸ್ತ್ರೀ ಅಪರಿಪೂರ್ಣರು. ಪತ್ನಿಯಿಲ್ಲದ ಪುರುಷ ಅಪರಿಪೂರ್ಣನಾದ ವ್ಯಕ್ತಿ ಎಂದು 'ಶತಪಥ' ಬ್ರಾಹ್ಮಣ ಸ್ಪಷ್ಟವಾಗಿ ಸಾರಿದೆ. ವೇದಗಳ ಕಾಲದಲ್ಲಿ ಹೆಣ್ಣುಮಗುವಿಗೂ ಉಪನಯನ ಸಂಸ್ಕಾರ ನೀಡಿ ವೇದಾಧ್ಯಯನಕ್ಕೆ ಸಿದ್ಧಗೊಳಿಸಲಾಗುತ್ತಿತ್ತು. ಅಥರ್ವಣವೇದವು ಸ್ತ್ರೀಯೊಬ್ಬಳ ವೈವಾಹಿಕ ಜೀವನದ ಯಶಸ್ಸು. ಆಕೆಗೆ ಆಕೆಯ ಬ್ರಹ್ಮಚರ್ಯದಲ್ಲಿ ನೀಡಲಾದ ಸುಯೋಗ್ಯವಾದ ಶಿಕ್ಷಣವನ್ನು ಹೊಂದಿಕೊಂಡಿರುತ್ತದೆಂದು ತಿಳಿಸಿದೆ. ವೇದಗಳ ಕಾಲದಲ್ಲಿ ಶಿಕ್ಷಣ ಪಡೆದು ತತ್ವಜ್ಞಾನಿಗಳಾಗಿದ್ದ ಸುಲಭಾ, ಮೈತ್ರೇಯಿ, ಗಾರ್ಗಿ, ಅಪಲ್ಯಾ ಮುಂತಾದವರ ಉಲ್ಲೇಖ ಸಿಗುತ್ತದೆ.

ಡಾ. ಅನುಪಮಾ ನಿರಂಜನರ ಮಾಧವಿ ಕಾದಂಬರಿಯ ಮಾಧವಿಯೇ ಮಾನಸಿಕವಾಗಿ ನೊಂದು ಪುರುಷ ಸಮಾಜದಿಂದ ವಿಮೋಚನೆ ಪಡೆಯುತ್ತಾಳೆ.

ಅವಳು ಮಾನಸಿಕವಾಗಿ ನೊಂದು ಪುರುಷ ಸಮಾಜದಿಂದ ವಿಮೋಚನೆ ಪಡೆಯುತ್ತಾಳೆ.

ಬುದ್ಧ ಮತ್ತು ಮಹಾವೀರರು ಎಲ್ಲ ಜೀವಿಗಳನ್ನು ಉದ್ಧರಿಸುವ ಮುಕ್ತ ಮಾರ್ಗವಾಗಿ ಧರ್ಮವನ್ನು ಮುಂದಿಟ್ಟರು. ಶೂದ್ರ, ಅಸ್ಪೃಶ್ಯರೊಂದಿಗೆ ಸ್ತ್ರೀ ವರ್ಗವೂ ಈ ಧರ್ಮದ ಮಾರ್ಗದಲ್ಲಿ ಮುನ್ನಡೆಯಲು ಅವಕಾಶ ಕೊಟ್ಟಿದ್ದರು. ಉದಾ: ಮಹಾವೀರನ ಸಮವಸರಣ ಸಭೆಯಲ್ಲಿ ಆರ್ಯಿಕೆಯರ ಸಮೂಹದ ಮುಖ್ಯಳಾಗಿ ಚಂದನೆ ಇದ್ದಳು. ಬುದ್ಧನ ಧರ್ಮ ಮಾರ್ಗದಲ್ಲಿ ಸ್ತ್ರೀಯರಿಗೂ ಸ್ಥಾನವನ್ನು ಕಲ್ಪಿಸಲಾಗಿತ್ತು.

"ಶೂದ್ರ ಕುಲದಲ್ಲಿ ಹುಟ್ಟಿದ ಜನಾಬಾಯಿ ೧೪ನೇ ಶತಮಾನದಲ್ಲಿ ಮಹಾರಾಷ್ಟ್ರ ಭಕ್ತೆ ಈಕೆ ಮಹಿಳೆಗೆ ವೇದಾಧ್ಯಯನವನ್ನು ನಿಷೇಧಿಸುವ ಶಿಷ್ಟ ಸಮಾಜಕ್ಕೆ ದಿಟ್ಟ ಉತ್ತರ ಕೊಟ್ಟಿದ್ದಾಳೆ."[೩]

ಪಾಶ್ಚಾತ್ಯರು ಸ್ತ್ರೀಯನ್ನು 'Second Sex' ಎಂದೇ ಪರಿಗಣಿಸಿದ್ದಾರೆ. ಅಂದರೆ ಅವಳಿಗೆ ಪುರುಷನಿಂದ ಪ್ರತ್ಯೇಕತೆ ಬೇಕಿಲ್ಲ. ಅವನೊಂದಿಗೆ ಅವನ ಆಧೀನಳಾಗಿರುವುದೇ ಅವಳ ಜವಬ್ದಾರಿ ಎಂದು ಪರಿಗಣಿಸಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಪಾಶ್ಚಾತ್ಯರಲ್ಲಿ ಅನೇಕ ಸ್ತ್ರೀವಾದಗಳು ಹುಟ್ಟಿಕೊಂಡವು.

ಕುವೆಂಪು ದರ್ಶನದಲ್ಲಿ ಮಹಿಳಾ ವಿಮೋಚನೆ :

ಭೂಮಿಗೆ ಹೆಣ್ಣು ಗಂಡು ಎಂಬ ಜಾತಿಗಳೆರಡು ಎಂದು ದಾಖಲಾದವೋ ಅಂದಿನಿಂದ ಪುರುಷ ಹೆಣ್ಣನ್ನು ತುಚ್ಛವಾಗಿ ಕಾಣುವ ಪರಂಪರೆ ನಡೆದುಕೊಂಡೇ ಬಂದಿದೆ. ಇದು ಪುರಾಣೇತಿಹಾಸಗಳಿಂದಲೂ ಸ್ಪಷ್ಟ. ಆದರೆ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಮಹಾಕವಿ ಕುವೆಂಪು ಚಿತ್ರಿಸಿದ ಮಹಿಳಾ ವಿಮೋಚನೆಯ ಸೂಕ್ಷ್ಮ ಎಳೆಗಳು ಕಾವ್ಯ ಓದುಗನ ಅರಿವಿಗೆ ಬರುತ್ತವೆ. ಮಹಾಕವಿ ಮಹೋನ್ನತವನ್ನು ಚಿತ್ರಿಸುವುದರ ಜೊತೆಗೆ ಒಂದು ಅನ್ಯ ಜೀವಿಯ ದೇಹ ಪ್ರವೇಶಿಸಿ ಆ ನೋವನ್ನು ಅನುಭವಿಸಿ ಕಾವ್ಯದ ಮೂಲಕ ಅದನ್ನು ಹೊರ ಹಾಕುತ್ತಾನೆ. ಇದುವೇ ಆತನ ದಿವ್ಯಚಕ್ಷು!

ಕುವೆಂಪು ಅವರ ಈ ಕಾವ್ಯದಲ್ಲಿಯ ಮಹಿಳೆಯರಲ್ಲಿ ಕಂಡು ಬರುವ ಕೆಲವು ಅಂಶಗಳು ಹಿಗೀವೆ.

೧) **ಆದರ್ಶತೆ**

೨) **ಯುದ್ಧವಿರೋಧ ನೀತಿ**

೩) **ಪ್ರತಿಭಟನೆ**

೪) **ದುಷ್ಟ ಶಿಕ್ಷೆ – ಶಿಷ್ಟ ರಕ್ಷಣೆ**

೫) **ಪರಂಪರೆಯನ್ನು ಮೀರದ ಸಹಿಷ್ಣುತೆ**

೬) **ಬಂಡಾಯ ಪ್ರವೃತ್ತಿ**

ಕಾವ್ಯದಲ್ಲಿ ಬರುವ ಮಹಿಳಾ ಪಾತ್ರಗಳು ತಾವು ವಿಮೋಚನೆಗಾಗಿ ನಡೆಸಿದ ಪ್ರಯತ್ನ ರಹಸ್ಯವಾಗಿ ವ್ಯಕ್ತವಾಗಿದೆ.

ಕಾವ್ಯದಲ್ಲಿಯ ಸೀತಾ ಎಲ್ಲರಂತೆ ಒಬ್ಬ ಮಹಾರಾಜನ ಮಗಳಾದರೂ ಸಾಮಾನ್ಯರಂತೆ ಬಾಳಿ ಬದುಕಿದ್ದು ಒಂದು ವಿಧಿಲೀಲೆ. ಸೀತೆಯ ಆತ್ಮ ಗಗನದಷ್ಟು ಎತ್ತರವಾಗಿದ್ದರೂ ಅವಳ ಪಾದ ಮಾತ್ರ ಭೂಮಿಯಲ್ಲಿಯೇ ಭದ್ರವಾಗಿ ನಿಂತಿದ್ದವು. ಅವಳು ಈ ಲೋಕದವಳೇ ಆದರೂ ಈ ಲೋಕವನ್ನೇ ಧಿಕ್ಕರಿಸಿ, ತಿರಸ್ಕರಿಸಿ ಬದುಕಿದವಳಲ್ಲ. ಇಲ್ಲಿ ಇದ್ದುಕೊಂಡೇ ತನ್ನ ಆತ್ಮೋದ್ಧಾರವನ್ನು ಮಾಡಿಕೊಂಡ ದೇವಕನ್ಯೆ. ರಾಮನೊಂದಿಗೆ ಇರುವಷ್ಟು ದಿನಗಳು ಅವಳು ವಿಮೋಚನೆಯ ವಿಚಾರ ಮಾಡಿರಲಿಕಿಲ್ಲ. ಏಕೆಂದರೆ ಅವರಿಬ್ಬರ ಸಂಸಾರ ನೌಕೆ ಬಾನ ಮತ್ತು ಚಂದಿರನಂತಿತ್ತು. ಒಬ್ಬರಿಲ್ಲದೇ ಮತ್ತೊಬ್ಬರು ಒಂದು ಕ್ಷಣವೂ ಬದುಕಲಾರರು ಎನ್ನುವ ಮಟ್ಟಕ್ಕೆ ಇವರಿದ್ದರು.

ಸೀತೆಯ ಬದುಕು ಬೇಸರವಾದುದು ಬಹುಶ: ಅವಳೊಂದು ದಿನ ಅಡುಗೆ ಮಾಡುತ್ತಿದ್ದಾಗ ಲಕ್ಷ್ಮಣ ಹಸಿ ಸೌದೆ ತಂದು ಅವು ಹೊತ್ತದೇ ಸೀತೆ ಮುಖವೆಲ್ಲ ಮಸಿ ಮಾಡಿಕೊಂಡಿದ್ದಳು. ಅವಳ ಆ ಅವಸ್ಥೆಯನ್ನು ನೋಡಿದಾಗ ಬಹುಶ: ಅವಳು ಒಲೆ ಹೊತ್ತಿಸಲು ಪಟ್ಟ ಪ್ರಯತ್ನ, ಅನುಭವಿಸಿದ ನೋವು ಇಂದಿನ ಒಬ್ಬ ಸಾಮಾನ್ಯ ಬಡ ಕೂಲಿ ಹೆಣ್ಣೊಬ್ಬಳ ಬದುಕನ್ನು ಕಣ್ಣೆದುರು ತಂದು ನಿಲ್ಲಿಸುತ್ತದೆ. ಅವಳಿಗೆ ಇವರೀರ್ವರಿಗೆ ಅಡುಗೆ ಮಾಡುವುದು ಬೇಸರವಾಗಿತ್ತೆಂಬುದಕ್ಕಿಂತ ಹಸಿ ಸೌದೆಯಿಂದ ಒಲೆ ಹೊತ್ತಿಸುವುದೇ ಕಷ್ಟವಾಗಿತ್ತು.

ಅನಂತರ ಅವಳು ರಾವಣನಿಂದ ಅಪಹರಣಕ್ಕೊಳಗಾಗಿ ಅಶೋಕ ವನದಲ್ಲಿ ಬಂಧೀಯಾಗುತ್ತಾಳೆ. ಅಲ್ಲಿ ಸುಮಾರು ಹತ್ತು ತಿಂಗಳು ನಿರಶನ ವ್ರತದಿಂದ ಯೋಗಿನಿಯಂತೆ ತಪಗೈಯ್ಯುತ್ತಾಳೆ. ತನ್ನ ಈ ತಪಸ್ಸು ತಾನು ರಾವಣನಿಂದ ಪಡೆಯಲಿಚ್ಚಿಸುವ ಬಿಡುಗಡೆಯ ಹಿನ್ನೆಲೆ ಒಂದಾದರೂ ತನ್ನ ಪತಿಯಾಗಮನದ ಉದ್ದೇಶವೂ ಇತ್ತು.

ರಾವಣ ಸೀತೆಯನ್ನು ಒಂದು ದಿನ ಏಕಾಂತದಲ್ಲಿ ಕಾಣಲು ಬರುತ್ತಾನೆ. ಅವಳು ನೇರವಾಗಿಯೇ ಅವನನ್ನು ತಿರಸ್ಕರಿಸಿ ತ್ರಿಜಟೆಯ ಮೂಲಕ –

"ಪಾಪಿಗೆ ಮೋಕ್ಷಮೆಂತಂತೆ
ದುರ್ಲಭಳ್ ನಾನೀ ನಿಶಾಚರಗೆ"

– ಎನ್ನುತ್ತಾಳೆ. ಈ ಮಾತನ್ನು ಕೇಳಿದ ರಾವಣ ಇನ್ನೆರಡು ತಿಂಗಳ ಅವಧಿ ಕೊಡುತ್ತೇನೆ. ಆಗಲೂ ನಿನ್ನ ಈ ಮನಸ್ಸು ಪರಿವರ್ತಿತವಾಗದಿದ್ದರೆ ನಾನು ಬಲಾತ್ಕಾರವಾಗಿಯೇ ನಿನ್ನನ್ನು ನೋಡುತ್ತೇನೆ ಎಂದು ಹೇಳುತ್ತಾನೆ. ಅದಕ್ಕಿಂತ ಮೊದಲು ಒಂದು ವೇಳೆ ಉಪವಾಸದಿಂದ ನೀನು ಆತ್ಮಹತ್ಯೆ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮಾಡಿಕೊಂಡರೂ ನಾನು ಚಿತೆಯೇರಿ ನಿನ್ನನ್ನು ಭಸ್ಮರೂಪದಿಂದಲಾದರೂ ಸೇರಿ ಸಾಯುಜ್ಯ ಪದವಿ ಪಡೆಯುತ್ತೇನೆ ಎನ್ನುತ್ತಾನೆ. ಸೀತೆಗೆ ಅಶೋಕ ವನದಲ್ಲಿ ಆತ್ಮಹತ್ಯೆಯ ವಿಚಾರವೊಂದೇ ಉಳಿದಿರಬಹುದು. ಅದನ್ನು ಕಂಡುಕೊಂಡೇ ರಾವಣ ಹೀಗೆ ಹೇಳಿದಾಗ ಅವಳು ಈ ದುಷ್ಟ ಕಾಮಪಿಶಾಚಿಯಿಂದ ಆತ್ಮಹತ್ಯೆಯಿಂದಾದರೂ ವಿಮೋಚನೆ ಹೊಂದಬಹುದಲ್ಲ ಎಂದು ಯೋಚಿಸಿರಬಹುದು. ರಾವಣನ ಮಾತುಗಳನ್ನು ಕೇಳಿದ ನಂತರ ಆಕೆ ಆತ್ಮಹತ್ಯೆಯ ನಿರ್ಧಾರದಿಂದ ಆತ್ಮೋದ್ಧಾರದ ವಿಚಾರ ಮಾಡುತ್ತಾಳೆ.

ದರ್ಶನದ ಕವಿ ಕೊನೆಗೆ ರಾವಣನ ಬಾಯಿಂದಲೇ ಅವಳನ್ನು ವಿಮೋಚನೆಗೊಳಿಸಿದ್ದಾರೆ. ಆತ ತನ್ನ ಹೆಂಡತಿ ಮಂಡೋದರಿಗೆ ಹೇಳುವ ಮಾತು.

"ನಿನಗಿಂ ಮಿಗಿಲ್ ಸೀತೆ
ನನಗೆ ದೇವತೆ ಮಾತೆ; ಶ್ರದ್ಧೆಗೆಟ್ಟಿರ್ದೆನಗೆ
ಶ್ರದ್ಧೆಯಂ ಮರುಕೊಳಿಸುತಾತ್ಮದುದ್ಧಾರಮಂ
ತಂದ ದೇವತೆ ಪುಣ್ಯ ಮಾತೆ!"[೪]

ಸೀತಾದೇವಿ ಕೈಕೊಂಡಿದ್ದ ಕಠೋರ ಪತಿವ್ರತಾ ತಪಸ್ಸು ರಾವಣನಲ್ಲಿ ಯಾವ ಪರಿವರ್ತನೆಯನ್ನುಂಟು ಮಾಡಿತ್ತೋ, ಆ ತಪಸ್ಸಿನಿಂದ ಸೀತೆಯೂ ಪರಿವರ್ತನೆಗೊಂಡು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ಮಹಾ ಮಾನಿನಿಯಾದಳು. ಈ ಮೂಲಕ ರಾವಣನ ಮನಸ್ಸಿನ ಬಂದಿಖಾನೆಯಿಂದ ವಿಮೋಚನೆಗೊಂಡಳೆಂಬುದು ಇಲ್ಲಿ ಸ್ಪಷ್ಟ.

ವಾಲ್ಮೀಕಿ ರಾಮಾಯಣದಲ್ಲಿ ಎಲ್ಲೋ ಒಂದೆರಡು ಕಡೆ ಮಾತ್ರ ಉಲ್ಲೇಖಗೊಂಡ ಲಕ್ಷ್ಮಣನ ಪತ್ನಿ ಊರ್ಮಿಳೆ, ದರ್ಶನದಲ್ಲಿ ಕುವೆಂಪುರವರ ಕಾವ್ಯ ಕೌಶಲ್ಯದಿಂದ ಸ್ಪಷ್ಟ ದರ್ಶನ ನೀಡುತ್ತಾಳೆ.

ಜನಕರಾಜನ ಔರಸ ಪುತ್ರಿಯಾದ ಇವಳ ಲಗ್ನ ಸೀತೆಯ ಸ್ವಯಂವರದಲ್ಲಿಯೇ ಯಾವ ಸದ್ದು ಗದ್ದಲವಿಲ್ಲದೇ ನಡೆದು ಹೋಗುತ್ತದೆ. ಮದುವೆಯಾದ ಹೊಸದರಲ್ಲೇ ಪತಿ ರಾಮನೊಡನೆ ವನವಾಸ ವರ್ತಿಯಾಗುತ್ತಾನೆ. ಅದಕ್ಕೆ ಒಂದು ಚೂರು ವಿರೋಧ ಮಾಡದ ಮಹಾಮಾತೆ ಊರ್ಮಿಳಾ ತನ್ನ ಗಂಡ ವನವಾಸಕ್ಕೆ ಹೋದ ಮೇಲೆ ಸರಯೂ ತೀರದಲ್ಲಿ ಪರ್ಣಕುಟಿ ಕಟ್ಟ ಚಿರ ತಪಸ್ವಿನಿಯಾಗಿ – "ಕಟ್ಟಿದಳ್ ಚಿತ್ತಪೋಮಂಗಳದ ರಕ್ಷೆಯಂ ಮೈಥಿಲಿಗೆ ರಾಮಂಗೆ ಮೇಣ್ ತನ್ನಿನಿಯ ದೇವನಿಗೆ"[೫] ಅಲ್ಲಿಯೂ ತನ್ನ ಪತಿಯ ವನವಾಸದ ಇಡೀ ಹದಿನಾಲ್ಕು ವರ್ಷ ತಪಸ್ಸಿನಲ್ಲಿಯೇ ಕಳೆಯುತ್ತಾಳೆ.

ಮತ್ತೇ ನಾವು ಊರ್ಮಿಳೆಯ ಹೆಸರನ್ನು ಕೇಳುವುದು ಕಾವ್ಯದ ಕೊನೆಗೆ, ಅದೂ ವರೆಗೆ ತಪಸ್ಸಿನಲ್ಲಿ ಲೀನಳಾದ ಊರ್ಮಿಳೆಯನ್ನು ಮಾಂಡವಿ ಕೂಗಿ ಕರೆಯುತ್ತಾಳೆ. ಮಾಂಡವಿ ವಿಷಯವನ್ನು ಹೇಳಿದಾಗ ಊರ್ಮಿಳೆ–ಮೀಯದೆ ಉಡಲಾರದೇ ಅವರೆ [ಲಕ್ಷ್ಮಣ]ಡೆಗೆ ಹೋಗುವುದು ಮಂಗಳವಲ್ಲ ಎನ್ನುತ್ತಾಳೆ. ಮತ್ತೆ ಮಾಂಡವಿ ಅವರು ನಿನ್ನ ಕಠೋರ ವ್ರತವನ್ನು ನೋಡಬಾರದೇ ಎಂದಾಗ –

[illegible]

[illegible]

[illegible]

[illegible]

[illegible]

[illegible]

[illegible]

“ಚಿ:! ಕಡಲ್ಗಿದಿರ್
ಪನಿಗೇಂ ಪ್ರದರ್ಶನಂ? ದೇವರ್ ತಪಕ್ಕಿದಿರ್
ನಮ್ಮದೊರ್ ತೃಣಮಲ್ತೆ! ಸಂತೋಷ ಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈಯುವುದೆ ಎಲ್ಲ ಸಾಧನೆಗೆ ಕೊನೆಯ ಗುರಿ;
ಮೇಣ್ ತಪಕೆ ಕೇಳ್, ತಂಗೆ ಪರಮ ಪ್ರಯೋಜನಂ.”[೬]

ಇಡೀ ಕಾವ್ಯದಲ್ಲಿ ಅವಳಾಡುವ ಮಾತು ಕೇವಲ ಮೂರೇ; ಆದರೂ ಅವಳಲ್ಲಿ ತಪಸ್ಸಿನ ಪೂರ್ಣಪ್ರಜ್ಞೆ ತನಗಿಂತಲೂ ತನ್ನ ಗಂಡನ ಆತ್ಮೋದ್ಧಾರದ ತುಡಿತ ವ್ಯಕ್ತವಾಗಿದೆ. ಊರ್ಮಿಳಾ ಪಾತ್ರದ ಮೂಲಕ ದರ್ಶನದ ನಮ್ಮ ನಾಡಿನ ಉದಾತ್ತ ಸಂಸ್ಕೃತಿಯನ್ನು ಸಂಕೇತಿಸಿದ್ದಾರೆ. ಮಹಿಳಾ ವಿಮೋಚನೆಯ ಜೊತೆಯಲ್ಲಿ ಮಹನೀಯರ ವಿಮೋಚನೆಯೂ ಅಡಗಿದೆ.

‘ಶ್ರೀ ರಾಮಾಯಣ ದರ್ಶನಂ’ ಮಹಾಕಾವ್ಯದಲ್ಲಿ ಇಡೀ ಕಥೆಗೆ ಹೊಸದೊಂದು ತಿರುವು ನೀಡಿದ ಕೈಕೇಯಿ ಆರಂಭದಲ್ಲಿ ಕಠೋರಿ, ಮಾತ್ಸರ್ಯ ಎನಿಸಿದರೂ ಅಂತಿಮವಾಗಿ ಅವಳ ಅವಸ್ಥೆಗೆ, ಅವಳುಪಟ್ಟ ವ್ಯಥೆಗಾಗಿ ಸಹೃದಯ ಕಂಬನಿ ಮಿಡಿಯುತ್ತಾನೆ. ವನವಾಸಮೂರ್ತಿಗಳನ್ನು ಎದುರುಗೊಳ್ಳಲು ಸುಮಿತ್ರೆ, ಮಾಂಡವಿ, ಊರ್ಮಿಳೆಯರು ಕೈಕೇಯಿಯನ್ನು ನೋಡಿದಾಗ ಅವಳು– ಕೃಶಮಲೀನ ಮೂಕಶೋಕದ ಶಿಲಾಪ್ರತಿಮೆಯಂತೆ ಪೂಜೆಯಿಲ್ಲದೇ ಹಾಳುಬಿದ್ದ ದೇವ ಮಂದಿರದ ವಿಗ್ರಹದಂತೆ.

ಭಾರವಾದ ಕಡು ದು:ಖದಲ್ಲಿ ಮುಳುಗಿದ್ದಳು. ಅವಳು ತನ್ನ ಪಾದಕ್ಕೆ ನಮಿಸಿದ ಊರ್ಮಿಳೆಗೆ ಮುತ್ತೊತ್ತುತ್ತಾಳೆ. ಏನೊಂದನ್ನೂ ಮಾತನಾಡಲಾರದೇ ಮೌನಿಯಾಗಿ ಕಂಬನಿಗರೆಯುತ್ತಾಳೆ. ಕೈಕೇಯಿಯ ಅಂತರಂಗವೇ ಪೂರ್ವ ನೆನಪಿನ ಕಾಳ್ಗಿಚ್ಚಿನಲ್ಲಿ ಕುದಿದು ಹರಿಯುವ ಜ್ವಾಲೆಯಾಗಿತ್ತು. ಅದೂ ವರೆಗೂ ಮಾತನಾಡದ ಅವಳು ಊರ್ಮಿಳೆಯ ಮಾತುಗಳನ್ನು ಕೇಳಿ ನಸುನಗುತ್ತಾಳೆ. ಹದಿನಾಲ್ಕು ವರ್ಷಗಳ ಹಿಂದೊಮ್ಮೆ ಆಕೆ ಹೀಗೆ ನಕ್ಕಿದ್ದಳು. ಆದರೆ ಆ ನಗುವಿಗೂ ಇದಕ್ಕೂ ಬಹಳ ವ್ಯತ್ಯಾಸವಿದೆ.

ರಾಮನನ್ನು ಎದುರುಗೊಳ್ಳಲು ಮುಂದೆ ನಡೆಯುತ್ತಾಳೆ. ತನ್ನ ಕಾರಣವಾಗಿಯೇ ಶ್ರೀರಾಮನಿಗೆ ವನವಾಸ ಪ್ರಾಪ್ತವಾಗಿತ್ತೆಂಬ ಅರಿವು ಅವಳಿಗಿದ್ದರೂ ಯಾವ ಅಳುಕು ಇಲ್ಲದೇ ಸ್ವಾಗತಿಸಲು ಮುನ್ನಡೆಯುತ್ತಾಳೆ. ಈ ಸಂದರ್ಭದಲ್ಲಿ ಕವಿ ರಾಮನಲ್ಲಿಯ ರಾಮತ್ವವನ್ನು ಪ್ರಕಾಶಿಸಿದವಳು. ಕೈಕಾಮಾತೆ ತನ್ನ ಪಾದಕ್ಕೆ ವಂದಿಸಿದ ಶ್ರೀರಾಮನನ್ನು ಮೌನವಾಗಿಯೇ ಹರಸುತ್ತಾಳೆ. ಭಗವಂತನ ಸಾಕ್ಷಾತ್ ಸ್ವರೂಪವೇ ಆದ ಶ್ರೀರಾಮನನ್ನು ಸ್ಪರ್ಶಿಸಿ, ದರ್ಶಿಸಿ ಪುನೀತಳಾಗಿದ್ದಾಳೆ. ಹೀಗೆ ರಾಮನಾಗಮನದಿಂದ ಕೈಕೇಯಿ ವಿಮೋಚನೆಗೊಂಡಿದ್ದಾಳೆ ಮತ್ತು ಕೈಕೇಯಿಯ ನಿಮಿತ್ತ ಶ್ರೀರಾಮ, ಲೋಕವಂದಿತನಾದನೆಂದು ಕವಿ ಹೇಳುತ್ತಾನೆ.

ಇಡೀ ರಾಮಾಯಣ ಕಥೆಯ ತಿರುವಿಗೆ ಮುಖ್ಯ ಕೇಂದ್ರಬಿಂದುವಾಗಿದ್ದ ಮಂಥರಾದೇವಿಯ ವಿಮೋಚನೆ ಇಂದಿನ ಸ್ವಾರ್ಥ ಜನತೆಯ ಪರ ಮೂಡಿಬಂದುದಾಗಿದೆ. ತಾನೂ ಇದುವರೆಗೂ ಯಾರಿಗೋಸ್ಕರ ತನ್ನ ಇಡೀ ಬದುಕನ್ನು ಮುಡುಪಿಟ್ಟಿದ್ದಳೋ ಅವನಿಗೆ ರಾಜ್ಯ ಪ್ರಾಪ್ತವಾದಾಗ ಬಹುಶಃ ಹೆತ್ತ ತಾಯಿ ಕೈಕೇಯಿಗಿಂತ ಇವಳೇ ಹೆಚ್ಚು ಸಂತೋಷಪಟ್ಟಿದ್ದಾಳೆ. ದಶರಥನ ಅರಮನೆಯಲ್ಲಿ ಪ್ರತಿಯೊಬ್ಬರೂ ಇವಳನ್ನು ಪಶುವಿಗಿಂತ ಕಡೆಯಾಗಿ ಕಂಡರು.

ಕೈಕೇಯಿಯ ತವರು ಮನೆಯಿಂದ ಮರಳಿದ ಭರತ, ಶತೃಘ್ನ. ಇಡೀ ರಾಜ್ಯದ ಅಧೋಗತಿಗೆ ಈ ಮೃತ್ಯುಸ್ವರೂಪಿಣಿ ಮಂಥರೆಯೇ ಕಾರಣ ಎಂದು ಶತೃಘ್ನ ಮಂಥರೆಯ ಮುಂಡೆಯನ್ನೆತ್ತಿ, ಕಲ್ಲಿನ ನೆಲಕ್ಕೆ ಕುಕ್ಕುತ್ತಾನೆ. ಆ ಹೊಡೆತಕ್ಕೆ ಮಂಥರೆಯ ಮೈ ಮೂಳೆಗಳೆಲ್ಲ ನುಚ್ಚುನೂರಾಗಿ ಹೋದವು. ಈ ಹೊಡೆತ ತಾಳಲಾರದೇ ಅವಳು ಭರತನ ಹೆಸರನ್ನೇ ಹಿಡಿದು ಚೀರಿ ಅಳುತ್ತಾಳೆ. ಭರತ ಸಹೋದರನಿಗೆ ಹೆಣ್ಣುಕೋಲೆ ಯೋಗ್ಯವಲ್ಲ ಎನ್ನುತ್ತ ಅವಳನ್ನು ಬಿಡಿಸುತ್ತಾನೆ.

ಶತೃಘ್ನನಿಂದ ಹೊಡೆತ ತಿಂದರೂ ಕೊನೆಗೆ ಶ್ರೀರಾಮಪಥವನ್ನನುಸರಿಸಿದ ಮಂಥರೆ ದಾರಿಯುದ್ದಕ್ಕೂ ಕೈಕೇಯಿ ಮತ್ತು ಭರತನನ್ನೇ ಹರಸುತ್ತಾಳೆ. ತನ್ನ ವೈಯಕ್ತಿಕತೆಯ ನೋವನ್ನು ಮರೆತೂ ಭರತನ ಯೋಗ ಕ್ಷೇಮಕ್ಕಾಗಿಯೇ ಮಿಡಿವ ಜೀವ ಅದು!

ರಾಮನ ಮಾರ್ಗವನ್ನು ಹಿಡಿದ ಮಂಥರೆಯನ್ನು ಕವಿ –

"ಬೆಳಗಿನಿಂದುಣಿಸಿಲ್ಲ
ನೀರ್ಪನಿಯನೀಂಟಿಲ್ಲ. ಪೆಟ್ಟನಲ್ಲದೆ ಬೇರೆ
ತಿಂದಿಲ್ಲ. ಕಣ್ಣೀರನಿಲ್ಲದಿನ್ನೇನುಮಂ
ಕುಡಿದಿಲ್ಲ. ಬೆನ್ನಿಗಂಟಿದ ಹೊಟ್ಟೆ ಹಸಿವಿಂದೆ
ಗಂಟಲೊಣಗಿದ ನೀರಡಿಕೆಯಿಂದ, ರಕ್ತಂ
ಬಸಿವ ಗಾಯದ ಪಸಿಯ ನೋವಿಂದೆ."[೭]

ರಾಮನನ್ನು ಕರೆಕರೆದು ಪ್ರಜ್ಞೆಯಿಲ್ಲದೆ ನಡೆಯುತ್ತಾಳೆ. ರಾಮನ ಬಗ್ಗೆ ಹಿಂದೆ ದ್ವೇಷಮಾತ್ಸರ್ಯದಿಂದಿದ್ದ ಇವಳಲ್ಲಿ ಈಗ ಸಂಪೂರ್ಣ ರಾಮಮೂರ್ತಿ ತುಂಬಿದೆ. ಆಕೆ ಹಾಗೇ ಆ ಕಾಡಿನಲ್ಲಿ ನಡೆಯುತ್ತಾ ನಡೆಯುತ್ತಾ ಹೋದಂತೆ ಸ್ವಲ್ಪ ದೂರದಲ್ಲಿ ಜ್ಯೋತಿಯೊಂದನ್ನು ಕಾಣುತ್ತಾಳೆ, ಆ ಬೆಂಕಿಯೊಡಲಿನಲ್ಲಿ ರಾಮನ ಮೂರ್ತಿಯನ್ನು ಕಂಡಂತಾಗಿ ಅದನ್ನು ಅಪ್ಪಿಕೊಳ್ಳಲು ಹಾತೊರೆದು ಮುಂದೆ ಹೋಗಿ –

"ಓ ಭರತನಣ್ಣಯ್ಯ
ಓನನ್ನ ರಾಮಯ್ಯ ಬಾರಯ್ಯ ದಮ್ಮಯ್ಯ"[೮]

ಎನ್ನುತ್ತ ಆಕೆಯ ಎದೆನವಿಲು ಗರಿಗೆದರಿ ಕುಣಿಯುತ್ತಿರಲು, ಹಾರಿ ಮುಂದಕ್ಕೆ ನಡೆದು ಓಡುತ್ತಾಳೆ. ಆ ರಾಮಾಗ್ನಿ ತನ್ನ ಸಹಸ್ರ ಬಾಹುಗಳಿಂದ ಅವಳನ್ನು ಆಲಂಗಿಸಿತು. ಮಂಥರೆಯ ಪಾರ್ಥಿವ ಪಂಚಭೂತ ಶರೀರ ಅಗ್ನಿಶರೀರವಾಗಿ ಕಂಗೊಳಿಸಿತು. ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯೇ ಆಯಿತು.

ಮಂಥರೆ ಬದುಕಿನುದ್ದಕ್ಕೂ ದಶರಥನ ಅರಮನೆಯ ಬಹುತೇಕರಿಂದ ಬೈಗುಳ, ನಿಂದೆ, ಶಿಕ್ಷೆ ಅನುಭವಿಸಿದಳು. ಕೊನೆಗೆ ಶತೃಘ್ನನಿಂದ ಪೆಟ್ಟುತಿಂದು ರಾಮನ ಮೂರ್ತಿಯ ಮೂಲಕ ಬದುಕಿನ ಬವಣೆಯಿಂದ ವಿಮೋಚನೆ ಪಡೆದಳು.

'ಶ್ರೀ ರಾಮಾಯಣ ದರ್ಶನಂ'ದಲ್ಲಿ ರಾವಣನಲ್ಲಿಯ ಕಾಮ ಪಿಪಾಸೆಯನ್ನು ಜಾಗೃತಗೊಳಿಸಿ ಸೀತಾಪಹರಣಕ್ಕೆ ಕಾರಣಳಾದ ಶೂರ್ಪನಖಿಯ ಪಾತ್ರವು, ಅವಳು ಕೊನೆಯಲ್ಲಿ ಬಯಸುವ ಪ್ರಾಯಶ್ಚಿತವೂ ಇದೆಲ್ಲವೂ ಇಂದಿನ ದುಡುಕ ಸ್ವಭಾವದವರು ದುಡುಕಿ ಅನಂತರ ಪಡುವ ಯಾತನೆಯನ್ನು ಎತ್ತಿಹಿಡಿಯುತ್ತದೆ. ಅಂದರೆ ತಮ್ಮ ಸ್ವಾರ್ಥಕ್ಕಾಗಿ ಮತ್ತೊಬ್ಬರನ್ನು ಬಲಿಕೊಡಲು ಆಯತಪ್ಪಿ ತಾವೇ ಬಲಿ ಪಶುವಾಗುವುದು. ಅನಂತರ ಅವರು ಪಡುವ ಪಶ್ಚಾತ್ತಾಪಕ್ಕೆ ಒಂದು ಉದಾಹರಣೆಯಾಗಿದೆ.

ಶೂರ್ಪನಖಿ ತಾನು ಹೊತ್ತಿಸಿದ ಕಿಡಿಯಿಂದ ಇಡೀ ಲಂಕಾ ನಗರವೇ ದು:ಖದ ದಾವಾನಲದಲ್ಲಿ ಕೈತೊಳೆಯುವಂತಾಯಿತು. ಇಡೀ ಲಂಕೆಯನ್ನು ಈ ದುರ್ಗತಿಗೆ ತಂದವಳು ತಾನೇ ಎಂಬುದು ಅವಳ ಅರಿವಿಗೆ ಬಂದಿತ್ತು. ಈ ಸಂದರ್ಭದಲ್ಲಿ ಅವಳು ರಾವಣನನ್ನು ಸಂಧಿಸುತ್ತಾಳೆ. ಆಗ ಅವಳು ತೋರ್ಪಡಿಸಿದ ಮಾನಸಿಕ ಪರಿವರ್ತನೆ , ಮಾನವೀಯಗುಣ, ಪಶ್ಚಾತ್ತಾಪ ಪಡುವ ರೀತಿ ಅನ್ಯಾದೃಶ್ಯವಾಗಿದೆ. ಅವಳನ್ನು ರಾವಣ ಮಾತನಾಡಿಸುತ್ತಾನೆ. ಅವಳ ಅವಸ್ಥೆಯನ್ನು ಕಂಡು ಕರುಬುತ್ತಾನೆ. ಅದಕ್ಕೆ ಶೂರ್ಪನಖಿ ತಾನು ಪಾಪಿ, ಪಶ್ಚಾತ್ತಾಪವನ್ನು ಬಯಸಿ ಬಂದುವಾಗಿ ಹೇಳುತ್ತಾಳೆ. ಕೊನೆಗೆ ತಾನು ಹೊತ್ತಿಸಿದ ಕಿಡಿಯನ್ನು ತಾನೇ ಆರಿಸಲು ಬಂದುದಾಗಿ ಹೇಳುತ್ತಾಳೆ. ಅವಳ ಮಾತಿನ ಉದ್ದೇಶ ಶ್ರೀರಾಮನಿಗೆ ಸೀತೆಯನ್ನು ಸುರಕ್ಷಿತವಾಗಿ ಒಪ್ಪಿಸುವದೇ ಆಗಿತ್ತು. ಅದಕ್ಕೆ ರಾವಣ– ರಾಮನನ್ನು ಸೋಲಿಸಿ ಅವನಿಗೆ ಕಪ್ಪು ಕಾಣಿಕೆಯನ್ನಾಗಿ ಸೀತೆಯನ್ನು ಒಪ್ಪಿಸುತ್ತೇನೆ ಎನ್ನುತ್ತಾನೆ. ಇದಕ್ಕೆ ಅವಳೂ ಒಪ್ಪುತ್ತಾಳೆ.

ಈ ಮೊದಲು ತಾನು ಹೊತ್ತಿಸಿದ ಕಿಡಿಯನ್ನು ತನಗೆ ಆರಿಸಲು ಅನುಮತಿ ಕೊಡೆಂದು ಶೂರ್ಪನಖಿ ಹೇಳಿದಾಗ ನೀನು ಹೊತ್ತಿಸಿದ ಕಿಡಿ ನಿನ್ನನ್ನು ಮೀರಿದೆ. ಒಂದು ವೇಳೆ ನೀನದನ್ನು ಆರಿಸಲು ಹೋದರೆ ಅದು ನಿನ್ನನ್ನೇ ಆಹುತಿ ತೆಗೆದುಕೊಳ್ಳುತ್ತದೆ. ಎನ್ನುತ್ತಾನೆ ರಾವಣ, ಅದಕ್ಕೆ ಅವಳು ನವಗೆ ಅದೇ ಯೋಗ್ಯವಾದುದು ಎನ್ನುವಲ್ಲಿ ಅವಳೂ ಮಂಥರೆಯಂತೆ ಬೆಂಕಿಯ ಮೂಲಕವೇ ವಿಮೋಚನೆ ಹೊಂದುವ ಉದ್ದೇಶವಿಟ್ಟುಕೊಂಡಿದ್ದಳೆಂಬುದಿಲ್ಲಿ ನಮ್ಮ ಅರಿವಿಗೆ ಬರುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಹಗೆತನದ ಬೀಜ ಬಿತ್ತಿ ಲಂಕಾ ನಗರಿಯ ಅವನತಿಗೆ ಕಾರಣಳಾದ ಶೂರ್ಪನಖಿ'

ದರ್ಶನದ ಕವಿ ಕಾವ್ಯದಲ್ಲಿ ತಾನೇ ಹೊತ್ತಿಸಿದ ಕಿಡಿಯನ್ನು ಜಾಗೃತಗೊಳಿಸಿದ ಚಂದ್ರನಖಿಯಾಗಿ ಬೆಳಗಿದ್ದಾಳೆ.

ರಾವಣನ ಮಡದಿಯಾದ ಮಹಾಸತಿ ಮಂಡೋದರಿ ಸೀತೆಯನ್ನು ಕಂಡು ಮಾತನಾಡಿಸಲು ಪ್ರಯತ್ನಿಸುತ್ತಾಳೆ. ಕೊನೆಗೆ ಒಂದು ಬೆಳದಿಂಗಳ ಇರುಳಿನಲ್ಲಿ ಆಕೆಯನ್ನು ಮಾತನಾಡಿಸಿದಾಗ ಅವಳು "ತಾನು ಎಷ್ಟೋ ಜನ ಸೀತೆಯರ ದು:ಖವನ್ನು ಹೊತ್ತಿಸಿದ ರಾವಣನ ಮಡದಿ" ಎಂದು ತನ್ನನ್ನು ಪರಿಚಯಿಸಿಕೊಳ್ಳುತ್ತಾಳೆ. ಇದನ್ನು ಗಮನಿಸಿದಾಗ ರಾವಣನಿಂದ ಮಹಾಸತಿ ಮಂಡೋದರಿ ಎಷ್ಟು ಕಷ್ಟಕ್ಕೆ ಒಳಗಾಗಿದ್ದಳೆಂಬುದು ಗೊತ್ತಾಗುತ್ತದೆ. ಅವನ ವಿರುದ್ಧ ಪ್ರತಿಭಟಿಸಿ ಹೊರಬರಲಾಗದೇ ಅವನಲ್ಲಿ ಕೈದಿಯಂತೆ ಬದುಕಿದಳು.

ಮಂಡೋದರಿ ಒಮ್ಮೊಮ್ಮೆ ಕಾಮಾಂಧನಾದ ತನ್ನ ಪತಿಗೆ ಬುದ್ಧಿವಾದ ಹೇಳುವ ಧೈರ್ಯವನ್ನು ಮಾಡುತ್ತಾಳೆ. ತನ್ನ ಮಗ ಇಂದ್ರಜಿತು ಲಕ್ಷ್ಮಣನಿಂದ ಮರಣ ಹೊಂದಿದಾಗ ರಾವಣ ಸೀತೆಯನ್ನೇ ವಧಿಸುತ್ತೇನೆಂದು ಖಡ್ಗ ಹಿರಿಯುತ್ತಾನೆ. ಈ ಮಾತನ್ನು ಕೇಳಿದ ಮಂಡೋದರಿ ಮಾತನಾಡಲು ಬಾಯಿ ಬಾರದೇ ಕೇವಲ ನಿಸ್ಸಹಾಯಕಳಾಗಿ ಯಾಚನೆಯ ಮುಖಮಾಡಿ ಕೈಮುಗಿಯುತ್ತಾಳೆ. ಸತಿಯ ಮುಖವನ್ನೇ ನೋಡುತ್ತಿದ್ದ ರಾವಣ ಅವಳ ಕೋರಿಕೆಯಂತೆ ಸೀತೆಯನ್ನು ಕೊಲ್ಲಲಾರೆ ತನ್ನನ್ನು ಕ್ಷಮಿಸು ಎನ್ನುತ್ತಾನೆ. ತನ್ನ ಮಗನ ಸಾವಿಗೆ ಪರೋಕ್ಷವಾಗಿ ಕಾರಣಳಾದ ಸೀತೆಯನ್ನು ಕೊಲ್ಲಗೊಡದ ಆಕೆಯ ಹೃದಯ ವಿಶಾಲತೆ ಪ್ರತಿಯೊಬ್ಬರಿಗೂ ಮನ:ಕಲಕುವಂತಹದ್ದು.

ಕೊನೆಗೆ ರಾವಣ ರಾಮನನ್ನು ಗೆದ್ದುತರುತ್ತೇನೆಂದು ಯುದ್ಧಕ್ಕೆ ಹೋಗುತ್ತಾನೆ. ಆತ ರಣರಂಗದಿಂದ ರಾಮನ ಬ್ರಹ್ಮಾಸ್ತ್ರವನ್ನು ಎದೆಯಲ್ಲಿ ನಾಟಿಸಿಕೊಂಡೇ ಲಂಕಾನಗರಕ್ಕೆ ಮರಳುತ್ತಾನೆ, ರಾಮಬಾಣವನ್ನು ತನ್ನ ಪತಿವ್ರತಾಶಕ್ತಿಯಿಂದ ಕೀಳುತ್ತಾಳೆ. ಆಕೆ ಕಿತ್ತೊಡನೆ ರಾಮಬಾಣ ರಾವಣನ ಪ್ರಾಣವನ್ನು ಹೀರಿತು. ರಾವಣನ ಆತ್ಮ ಮೋಕ್ಷ ಪಡೆಯಿತು. ಇತ್ತ ಮಂಡೋದರಿಯೂ ಇಚ್ಛಾಮರಣವನ್ನಪ್ಪಿ ಪತಿಯ ಪಾದದಲ್ಲಿ ಅಸು ನೀಗಿದಳು. ಕೊನೆಗೂ ರಾವಣನ ಆತ್ಮದಲಿಯೇ ತನ್ನನ್ನು ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಮಹಾಸಾಧ್ವಿ ಪತಿವ್ರತಾ ತಿಲಕ ಈ ಮಹಾಮಾತೆ ಮಂಡೋದರಿ!

ಈ ಕಾವ್ಯದಲ್ಲಿ ಬರುವ ಇನ್ನೊಂದು ಪಾತ್ರ ಶಬರಿಯದು. ಈಕೆ ತನ್ನ ಗುರುಮತಂಗ ಮುನಿಯ ಮಾತಿನಂತೆ ಹತ್ತು ವರ್ಷಗಳ ವರೆಗೆ ಶ್ರೀರಾಮಾಗಮನದ ದಾರಿ ಕಾಯ್ದಳು. ಶ್ರೀರಾಮ ಅಲ್ಲಿ ಬರುವ ಹೊತ್ತಿಗೆ ಅವಳ ಕಣ್ಣು ಮಂಜಾಗಿದ್ದವು. ಬಗೆ ಮಬ್ಬಾಗಿತ್ತು. ಮುಪ್ಪು ಆವರಿಸಿತ್ತು. ತನ್ನ ಎದುರೇ ಆಕೆ ಲೋಕಪೂಜ್ಯ ಶ್ರೀರಾಮನ ಮೂರ್ತಿಯನ್ನವಳು ಗುರುತಿಸದಾದಳು. ಕೊನೆಗೆ ಅವರ ಸಮಾಚಾರ ತಿಳಿದ ಶಬರಿ ತನ್ನನ್ನೇ ತಾನು ನಂಬದಾದಳು.

ಶ್ರೀರಾಮಚಂದ್ರನಿಗೆ ಅಲ್ಲಿರುವಷ್ಟು ದಿವಸ ಶೋಕಭಾರದಿಂದ ವಿಚಿತ್ರ ರುಜೆಯೊಂದು ಬಡಿದುಕೊಂಡಿತು. ಎಷ್ಟೇ ಶುಶ್ರೂಸೆ ಮಾಡಿದರೂ ಮೇಲೇಳುವ ಸ್ಥಿತಿಯನ್ನೇ ಕಾಣದಾದನು. ತನ್ನ

ಯೋಗ ಶಕ್ತಿಯಿಂದ ಆತನ ರುಜೆಯನ್ನು ಹೀರಿಕೊಂಡು ತಾನೇ ಹಾಸಿಗೆ ಹಿಡಿದಳು. ಶ್ರೀರಾಮ–ಲಕ್ಷ್ಮಣರು ಎಷ್ಟೇ ಶೂಶ್ರೂಸೆ ಮಾಡಿದರೂ ಅಜ್ಜಿ ಮೇಲೇಳದೆ ತೀರಿಹೋದಳು. ಶ್ರೀರಾಮನೇ ಅವಳ ಕಳೇಬರಕ್ಕೆ ಅಗ್ನಿ ಕೊಳ್ಳಿ ಹಚ್ಚುತ್ತಾನೆ. ಸ್ವತ: ಶ್ರೀರಾಮನಿಂದ ಈ ಬೇಡತಿ ಬೇಡಲೋಕ ಹಾಗೂ ಈ ಪ್ರಪಂಚದಿಂದ ವಿಮೋಚನೆ ಪಡೆದು ಭವಮುಕ್ತಳಾದಳೆಂಬುದನ್ನು ಕುವೆಂಪು ಸ್ಪಷ್ಟಪಡಿಸುತ್ತಾರೆ. ಶ್ರೀರಾಮಾಗಮನದಿಂದಲೇ ತನಗೆ ವಿಮೋಚನೆ ಎಂಬುದನ್ನು ಗಟ್ಟಿಯಾಗಿ ತಿಳಿದಿದ್ದ ಅವಳು ಹತ್ತು ವರ್ಷಗಳ ವರೆಗೆ ಬಾಳಿ ಬದುಕಿ ಜನ್ಮಪಾವನೆಯಾದಳು.

ಕಾವ್ಯದಲ್ಲಿ ಬರುವ ಮತ್ತೊಂದು ಸಹೃದಯರ ಮನಕಲಕುವ ವಯಸ್ಸಿನಿಂದ ಕಿರಿಯಳಾದರೂ ಬುದ್ಧಿಯಲ್ಲಿ ರಾವಣನಿಗೂ ತಿದ್ದಿಬುದ್ಧಿ ಹೇಳುವ ಪುಟ್ಟ ಹೃದಯದ ಪಾತ್ರ ಅನಲೆಯದು. ಅಶೋಕ ವನದಲ್ಲಿ ಸೀತೆಯ ದು:ಖಕ್ಕೆ ಸ್ಪಂದಿಸಿದ ಆಕೆಗೆ ಮುಂದಾಗುವ ಸಮಾಚಾರದ ಸುದ್ದಿವಾಹಿನಿಯಾಗಿ ಬದುಕಿದ್ದ ಸಣ್ಣಜೀವ ಅದು. ಶ್ರೀರಾಮಚಂದ್ರ ರಾವಣನನ್ನು ಕೊಂದು ಸೀತೆಯನ್ನು ಅಗ್ನಿಪ್ರವೇಶ ಮಾಡಿಸಿ ಪರೀಕ್ಷಿಸಿದ ನಂತರ ತಾನು ಸ್ವೀಕರಿಸುವುದಾಗಿ ಹೇಳುತ್ತಾನೆ. ಅದಕ್ಕೆ ಯಾರೂ ಆಕ್ಷೇಪಿಸುವುದಿಲ್ಲ. ಆದರೆ ಕೇವಲ ಹೆಣ್ಣೊಬ್ಬಳಿಗೇಕೆ ಈ ಅಗ್ನಿ ಪ್ರವೇಶ ಪರೀಕ್ಷೆ ಪುರುಷನನ್ನು ಪರೀಕ್ಷಿಸುವವರಾರು? ಎಂದ ಅನಲೆಯ ಮಾತಿಗೆ ಸ್ವತ: ತಾನೇ ಸೀತೆಯ ಅಗ್ನಿ ಪರೀಕ್ಷೆಯಲ್ಲಿ ತನ್ನನ್ನು ಪರೀಕ್ಷಿಸಿಕೊಂಡು ತಾನೂ ಏಕಪತ್ನಿ ವ್ರತಸ್ಥನೆಂಬುದನ್ನು ಜಗತ್ತಿಗೆ ಗೊತ್ತುಪಡಿಸುತ್ತಾನೆ. ಹೀಗೆ ಲೋಕವಂದಿತನಾದ ಶ್ರೀರಾಮನೇ ಅನಲೆಯ ಮಾತಿನಂತೆ ಅಗ್ನಿಪ್ರವೇಶ ಮಾಡಿ ತನ್ನ ಕೀರ್ತಿಗೆ ಅಂಟಬಹುದಾದ ಕಳಂಕದಿಂದ ವಿಮೋಚನೆಗೊಂಡನು. ಇದು ಅನಲೆಯ ಮೂಲಕ ಕವಿ ಶ್ರೀರಾಮನನ್ನೇ ವಿಮೋಚನೆಗೊಳಿಸಿದ್ದೊಂದು ವಿಶೇಷ!

ದರ್ಶನದ ಕವಿ ಕಾವ್ಯದಲ್ಲಿಯ ಒಂದೊಂದು ಸ್ತ್ರೀ ಪಾತ್ರವನ್ನು ಶ್ರೀ ರಾಮನಿಂದಲೋ ಅಥವಾ ಒಂದು ಪಾತ್ರದಿಂದ ಮತ್ತೊಂದನ್ನೋ ಮುಕ್ತಗೊಳಿಸಿದ್ದಾರೆ. ಬೇರೆ ಲೋಕ ಸಾಹಿತ್ಯದ ಕವಿಗಳಂತೆ ತಾವಷ್ಟೇ ಬಿಡುಗಡೆಗೊಳ್ಳಲು ಹವಣಿಸದೇ ಇಡೀ ಕಾವ್ಯವೇ ಶ್ರೀಮದ್ ವಾಲ್ಮೀಕಿ ಕಾವ್ಯದಿಂದ ವಿಮೋಚನೆಗೊಂಡು ಲೋಕಪೂಜ್ಯಗೊಂಡಿದೆ ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ!

ಟಿಪ್ಪಣಿಗಳು

೧) ಡಾ. ಪ್ರೀತಿ ಶುಭಚಂದ್ರ : ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು : ಪುಟ–೨೪೦

೨) ಚ. ನ. ಶಂಕರರಾವ : ಭಾರತೀಯ ಸಮಾಜ ಅಧ್ಯಯನ ಸಂಪುಟ–೨ : ಪುಟ–೧೦೭

೩) ಡಾ. ಪ್ರೀತಿ ಶುಭಚಂದ್ರ : ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಹಾಗೂ ಮಹಿಳಾ ಚಳುವಳಿಗಳು : ಪುಟ–೨೪೫

೪) ಕುವೆಂಪು : ಶ್ರೀ ರಾ. ದ. ದರ್ಶನನ ಸ್ವಪ್ನಸಿದ್ಧಿ : ಪುಟ–೨೬೮

೫) ಕೊ. ಚನ್ನಬಸಪ್ಪ : ಶ್ರೀ ರಾ. ದ. ಮಹಾಕಾವ್ಯ ಸಮೀಕ್ಷೆ : ಪುಟ–೨೧೭

೬) ಕುವೆಂಪು : ಶ್ರೀ ರಾ. ದ. ತಪಸ್ಸಿದ್ಧಿ : ಪುಟ–೮೫೧

೭) ಕುವೆಂಪು : ಶ್ರೀ ರಾ. ದ. : ಪುಟ–೧೨೨

೮) ಕುವೆಂಪು : ಅದೇ. ಪುಟ–೧೨೨

ಅಧ್ಯಾಯ – ೫

ಸಮಾರೋಪ

ಅಧ್ಯಾಯ – ೫
ಸಮಾರೋಪ

"ಸಾಹಿತ್ಯ ರಸಾನುಭವದ ಸುಂದರ ಅಭಿವ್ಯಕ್ತಿ". ಬದಲಾವಣೆಯು ಜೀವಂತಿಕೆಯ ಲಕ್ಷಣ ಎಂಬುದು ನಿಸರ್ಗವಾದಿಗಳ ಅಭಿಮತ. ಹವಾಗುಣ ಬದಲಾಗದಿದ್ದರೆ ಪ್ರಕೃತಿಯೂ ಬರಡಾಗುತ್ತಿತ್ತು. ಜೀವ ಸಂತತಿ ನಿರ್ನಾಮವಾಗುತ್ತಿತ್ತು. ಹಾಗೆ ಸಾಹಿತ್ಯವೂ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಹೊಂದುತ್ತ ಸಾಗಿತು. ಸಾವಿರಾರು ವರ್ಷಗಳ ಹಿಂದೆ ರಚನೆಯಾದ ಒಂದು ಕಥೆಯನ್ನು ಅನಂತರದ ಸಾವಿರಾರು ವರ್ಷಗಳ ಮುಂಚಿನ ಕವಿ ಯಾವ ಅರ್ಥವ್ಯತ್ಯಾಸವನ್ನು ಮಾಡದೇ ಅಥವಾ ಅದರ ಪಡಿಯಚ್ಚನ್ನೇ ಕಟ್ಟಿಕೊಡದೇ ಸತತ ಪ್ರಯತ್ನ, ಅಚಲ ನಿರ್ಧಾರಗಳಿಂದ ಒಂದು ಮಹಾಕಾವ್ಯವನ್ನು ಕಟ್ಟಿಕೊಡುವ ದಿಟ್ಟತನ ತೋರಿದವರು ಮಹಾಕವಿ ಕುವೆಂಪು.

ಕುವೆಂಪು ಶ್ರೀರಾಮಾಯಣದರ್ಶನಂ ಮಹಾಕಾವ್ಯವನ್ನು ರಚಿಸಿದ್ದು ಕ್ರಿ.ಶ ೧೯೩೬ ರಿಂದ ೧೯೪೬ ರ ನಡುವೆ. ಆಗ ಅವರ ವಯಸ್ಸು ಕೇವಲ ೩೨ ರಿಂದ ೪೨. ಸಾಮಾನ್ಯವಾಗಿ ಒಬ್ಬ ಮನುಷ್ಯ ಪೂರ್ಣವಾಗಿ ಮಾಗಬೇಕಾದರೆ ಸುಮಾರು ೬೦ ವರ್ಷಗಳನ್ನಾದರೂ ಕಳೆದಿರಬೇಕು. ಆದರೆ ಕುವೆಂಪು ಅವರಲ್ಲಿ ಜನ್ಮಜಾತ ಪ್ರತಿಭೆಯಿತ್ತು. ಈ ಕಾವ್ಯದ ರಚನೆಯ ಕುರಿತು ಅವರು ೧೯೨೬ ರ ಸುಮಾರಿಗೇ ಕನಸು ಕಾಣುತ್ತಿದ್ದರೆಂದು. ಎಚ್.ಜೆ. ಲಕ್ಕಪ್ಪಗೌಡರ 'ಶ್ರೀ ರಾಮಯಣ ದರ್ಶನಂ ಪಾತ್ರಲೋಕ' ಕೃತಿಯ ಮುನ್ನುಡಿಯಲ್ಲಿ ಸಂತೋಷಕುಮಾರ ಗುಲ್ವಾಡಿಯವರು ಹೇಳಿದ್ದಾರೆ.

ಕವಿಯ ತನ್ನ ಆದರ್ಶದ ಗುರಿಯಂತೆ ಸನಾತನ ಸಂಸ್ಕೃತಿಯನ್ನು ಪ್ರತಿಯೊಂದು ಪಾತ್ರಗಳ ಮೂಲಕ ಪ್ರತಿಯೊಂದು ಪಾತ್ರದ ಒಳಹೊಕ್ಕು ಅಂತರಂಗ ದರ್ಶನ ಮಾಡಿಸಿದ್ದಾರೆ. ಈ ಪ್ರಬಂಧದಲ್ಲಿ ಕುವೆಂಪು ನಿರೂಪಿಸಿದ ಸ್ತ್ರೀಪಾತ್ರಗಳ ಗುಣ, ಶೀಲ, ನಡೆ, ನುಡಿ, ಸ್ವಭಾವ, ಸ್ವರೂಪ ವೈಶಿಷ್ಟ್ಯಗಳನ್ನೆಲ್ಲ ಒರೆಗೆ ಹಚ್ಚಿ ತಿಕ್ಕಿ ಬೆಳಗಿಸಿದ್ದಾರೆ. ಈ ಕಾವ್ಯದ ಪ್ರಮುಖ ಪಾತ್ರಗಳ ಜೊತೆಗೆ ಪೂರಕಪಾತ್ರಗಳಾದ– ಕೈಕೇಯಿ, ಊರ್ಮಿಳೆ, ಮಂಡೋದರಿ, ಶೂರ್ಪನಖಿ, ಅನಲೆ ಮುಂತಾದ ಪಾತ್ರಗಳ ಮಹತ್ವವನ್ನು ಎತ್ತಿ ಹಿಡಿದುದ್ದನ್ನು ತಿಳಿಸಲಾಗಿದೆ. ಮಹರ್ಷಿ ವಾಲ್ಮೀಕಿ ವಿರಚಿತ ರಾಮಾಯಣ ಕಥೆಯಲ್ಲಿ ಬರುವ ಕೌಸಲಾದೇವಿಯ ಪಾತ್ರವನ್ನು ನೋಡಿದಾಗ ಇಡೀ ಕಾವ್ಯದುದ್ದಕ್ಕೂ ಯಾವ ಐಭೋಗದ ಐಹಿಕ ಸುಖವನ್ನು ಕಾಣದಿದ್ದರೂ ಶ್ರೀರಾಮನ ಹೆತ್ತಜನನಿ ಎಂಬ ಕಾರಣಕ್ಕೆ ಸದಾಕಾಲ ಪ್ರಾಥಃಸ್ಮರಣೀಯಳಾಗಿ ಕಾವ್ಯವಾಚಕರ ಸ್ಮರಣೆಯಲ್ಲುಳಿಯುತ್ತಾಳೆ. ಮಹಾಭಾರತದಲ್ಲಿಯ ಪಾಂಡವರ ಜನನಿ ಕುಂತಿಯ ಪಾಡು ಮತ್ತು ಈಕೆಯದು ಹೆಚ್ಚೂ ಕಡಿಮೆ ಒಂದೇ ಆಗಿದ್ದಂತೆ ಕಂಡುಬರುತ್ತದೆ. ಶ್ರೀರಾಮನ ಜನನಕ್ಕಿಂತ ಮೊದಲೆ ಕೌಸಲ್ಯೆ ಬೈರಾಗಿಯಾಗಿದ್ದಳೆಂಬುದನ್ನು ವಾಲ್ಮೀಕಿಯೇ ಉಲ್ಲೇಖಿಸಿದ್ದಾನೆ.

[illegible]

[illegible]

[illegible]

[illegible]

[illegible]

ಇದಕ್ಕೆ ಕಾರಣ ಬಹುಶಃ ದಶರಥ ಕಿರಿಯ ರಾಣಿಯರ ಮೇಲಿನ ಪ್ರೀತಿಯಿಂದ ಈಕೆಯನ್ನು ಉಪೇಕ್ಷೆ ಮಾಡಿರಬಹುದು. ಆದರೆ ಕುವೆಂಪು ಈ ಪಾತ್ರವನ್ನು ಅಷ್ಟಾಗಿ ಎತ್ತಿ ಹಿಡಿದಿಲ್ಲ.

ಇನ್ನುಳಿದ ಪಾತ್ರಗಳನ್ನು ಕವಿ ತನ್ನ ಅನುಭವದ ಮೂಸೆಯಲ್ಲಿ ಅದ್ದಿ, ತಿದ್ದಿ, ಚೆಂದದ ಆಕೃತಿ ಮಾಡಿದ್ದಾನೆ. ವಾಲ್ಮೀಕಿ ರಾಮಾಯಣದಲ್ಲಿ ಬರುವ ಭರತಮಾತೆಗೆ ಭರತನೆಷ್ಟು ಪ್ರಿಯನೋ ರಾಮನೂ ಅಷ್ಟೇ ಪ್ರಿಯನಾಗಿದ್ದ. ಆಗ ಅವಳಿಗೆ ಸವತಿ ಮಾತ್ಸರ್ಯ ಅಡ್ಡಬರಲಿಲ್ಲವೆಂಬುದನ್ನು ಮಹರ್ಷಿ ಸೂಚಿಸುತ್ತಾನೆ. ಆದರೆ ಪ್ರೋ. ಕೆ. ಎಸ್. ನಾರಾಯಣಾಚಾರ್ಯರು ತಮ್ಮ ಶ್ರೀರಾಮಾಯಣ ಪಾತ್ರ ಪ್ರಪಂಚದಲ್ಲಿ–ಮೂಲ ಕೈಕೇಯಿಯನ್ನು ತಿದ್ದುವ ಪ್ರಯತ್ನ ಕಾವ್ಯ ಕಾರ್ಖಾನೆಗಳಲ್ಲಿ ಕಮ್ಮಟಗಳಲ್ಲಿ ಇನ್ನೂ ನಡೆದೇ ಇದೆ ಎನ್ನುತ್ತಾರೆ. ವಾಲ್ಮೀಕಿ ರಾಮಾಯಣದಲ್ಲಿ ಅನ್ಯಾಯಕ್ಕೊಳಗಾಗಿರುವ ಕೈಕೇಯಿಗೆ ದರ್ಶನದ ಕವಿ ಉಚಿತವಾದ ನ್ಯಾಯವನ್ನು ಒದಗಿಸಿದ್ದಾರೆ.

ಶ್ರೀರಾಮನನ್ನು ಕಾಡಿಗಟ್ಟಿದ ಕೈಕೇಯ ಮುಂದಿನ ಸ್ಥಿತಿಯನ್ನು ವಾಲ್ಮೀಕಿ ಹೇಳಲಿಲ್ಲ. ಆದರೆ ಕುವೆಂಪು ರಾಮಾಯಣದಲ್ಲಿ ಆಕೆಯ ಸ್ಥಿತಿಯನ್ನು–

"ಪಾಳ್ಮನೆಯ ತೆರದಿನೆಸೆದಳ್ ಮಾತೆ

ನಿರ್ಜನೆ, ನಿರಾಭರಣೆ, ನಿಶ್ಚಲೆ, ರವ ವಿಹೀನೆ" ಎಂದು ಆಕೆಯ ನಿಶ್ಚಲವ್ಯಕ್ತಿತ್ವವನ್ನು ದರ್ಶಿಸುತ್ತಾನೆ.

ಕೈಕೆಯೆಂಬುದು ಒಂದು ಹುತ್ತ! ಅದರಲ್ಲಿ ಯಾವ ಯಾವ ಜಾತಿಯ ಹಾವುಗಳಿದ್ದವು ಎಂಬುದು ಮೇಲ್ನೋಟಕ್ಕೆ ಯಾರಿಗೂ ತಿಳಿಯುತ್ತಿರಲಿಲ್ಲ. ಮಂಥರೆಯೆಂಬ ಮಳೆ. ಮುಂಗಾರಿನ ಹೊಸ ಧಾರಾಕಾರವಾಗಿ ಹೊಯ್ದಾಗ, ಹುತ್ತವೆಲ್ಲ ನೀರಿನಿಂದ ತುಂಬಿ ಅಲ್ಲಿನ್ನಿರಲಾಗದೇ ಹೊರ ಬಂದ ಹಾವುಗಳಂತೆ, ಈ ದುರ್ವರಗಳೆರಡು ಅವಳ ಬಾಯಿಂದ ಹೊರ ಬಿದ್ದವೆಂದು ಕಾಳಿದಾಸ ತನ್ನ ರಘುವಂಶದಲ್ಲಿ ಹೇಳಿದ್ದಾನೆ. ಕೈಕೇಯಿಯ ಮನಸ್ಸೇ ಒಂದು ಚಿತಾಗಾರವಾಗಿತ್ತು. ಎಂಥ ಪ್ರಸಂಗದಲ್ಲೂ ಅದು ಇನ್ನೊಬ್ಬರನ್ನು ದಹಿಸದೇ ಬಿಡುತ್ತಿರಲಿಲ್ಲ. ಅಷ್ಟು ಮೊಂಡುತನ ಅವಳಲ್ಲಿ ತನ್ನ ತಾಯಿಯಿಂದಲೇ ಬಂದಿತ್ತೆಂಬುದು ವಿಮರ್ಶಕರ ಮಾತು.

ಸೀತೆ ಮತ್ತು ಊರ್ಮಿಳೆಯರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ನಮಗೆ ಊರ್ಮಿಳೆಯೇ ಹೆಚ್ಚು ಇಷ್ಟವಾಗುತ್ತಾಳೆ. ಸೀತೆ ಎಲ್ಲ ರಾಮಾಯಣಗಳ ಅಧಿನಾಯಕಿ, ಆದರೆ ಕುವೆಂಪು ರಾಮಾಯಣದ ನಿಜವಾದ ನಾಯಕಿ ಊರ್ಮಿಳೆ. ಮೂಲದಲ್ಲಿ ವಾಲ್ಮೀಕಿ ಊರ್ಮಿಳೆಯನ್ನು ಒಂದು ಸ್ವತಂತ್ರ ಪಾತ್ರವಾಗಿ ಚಿತ್ರಿಸಲಿಲ್ಲ. ಒಂದೆರಡು ಸಂದರ್ಭ ಬಿಟ್ಟರೆ ಮುಂದೆ ಅವಳು ಕಾವ್ಯದಲ್ಲಿ ಎಲ್ಲೂ ಕಾಣಿಸಲಿಲ್ಲ. ಶ್ರೀರಾಮ–ಲಕ್ಷ್ಮಣ ಸೀತೆಯನ್ನು ವನವಾಸಕ್ಕೆ ಕಳುಹಿಸಿದ ಊರ್ಮಿಳೆ ಮುಂದೇನಾದಳೆಂಬುದನ್ನು ವಾಲ್ಮೀಕಿ ಹೇಳಲಿಲ್ಲ. ಆದರೆ ಕುವೆಂಪು ತನ್ನ ಕಾವ್ಯದಲ್ಲಿ ಅವಳಿಗೊಂದು ಮೌಲ್ಯಯುತ ಸ್ಥಾನವನ್ನು ನೀಡಿ ಗೌರವಿಸುತ್ತಾನೆ. ಜೊತೆಗೆ ಶ್ರೀರಾಮ ಸೀತೆ ಹಾಗೂ

[illegible]

[illegible]

[illegible]

[illegible]

[illegible]

ಸೌಮಿತ್ರಿ ಮತ್ತೇ ಕಾಡಿನಿಂದ ಮರಳಿ ಬಂದಾಗ ಅವಳನ್ನು ಮಾತನಾಡಿಸುತ್ತಾರೆ. ಇದು ಮಹಾಕವಿಯೊಬ್ಬನ ದರ್ಶನಾಭಿವ್ಯಕ್ತಿ;

ಸೀತೆಯ ವಿಚಾರಕ್ಕೆ ಬಂದಾಗ ಇಡೀ ಕಾವ್ಯದಲ್ಲಿ ರಾವಣಪಹರಣದ ಹತ್ತು ತಿಂಗಳನ್ನು ಬಿಟ್ಟರೆ ಅವಳೆಂದೂ ಒಂದೂ ದಿನ ಏಕಾಂಗಿಯಾಗಿ ಬದುಕಿದಳೆಂಬುದು ನಮಗೆ ಸಿಗದು. ತನ್ನ ಪತಿ ಸಾನಿಧ್ಯದಲ್ಲಿದ್ದುಕೊಂಡೇ ಬದುಕು ನೂಕಿದಳು. ಜನಕರಾಜನ ಮಗಳು, ದಶರಥರಾಜನ ಸೊಸೆ ಒಬ್ಬ ಸಾಮಾನ್ಯ ಸ್ತ್ರೀಯಂತೆ ಬದುಕಬೇಕಾಗಿ ಬಂದುದು ವಿಧಿನಿಯೋಜಿತ ಕಾರ್ಯವೇ ಸರಿ. ಆದರೆ ಅವಳೆಂದೂ ತನ್ನ ರಾಜ ಗಾಂಭಿರ್ಯವನ್ನು ಮಾತಿನಲ್ಲಾಗಲಿ ಅಥವಾ ಕೃತಿಯಲ್ಲಾಗಲಿ ತೋರಿಸಿದ ಉದಾಹರಣೆ ಕಾವ್ಯದಲ್ಲಿಲ್ಲ. ಶ್ರೀರಾಮ ಮತ್ತು ಲಕ್ಷ್ಮಣರ ಮೇಲೆ ಕೇವಲ ಒಂದೊಂದು ಬಾರಿ ಹಸಿ ಸೌದೆ ತಂದ ಸಂದರ್ಭದಲ್ಲಿ ರಾಮನ ಮೇಲೆ ಮತ್ತು ಮಾಯಾಮೃಗದ ಬೆನ್ನು ಹತ್ತಿದ ರಾಮ ಕೊನೆಗೆ ಆರ್ತನಾದ ಮಾಡಿದ್ದನ್ನು ಕೇಳಿಯೂ ಸುಮ್ಮನಾದ ಲಕ್ಷ್ಮಣನ ಮೇಲೆ ಆಕೆ ಕೋಪಗೊಂಡಿದ್ದಿತ್ತು. ಅನಂತರ ಆಕೆಯ ಬದುಕೆಲ್ಲ ಕಂಬನಿಯಲ್ಲಿಯೇ ಮಿಂದು ಅಂತಿಮವಾಗಿ ಹುಲುಸಾದ ಫಸಲು ಪಡೆಯಿತು.

ಮಂಥರೆ ಶ್ರೀರಾಮಾಯಣ ಕಥೆಗೆ ತಿರುವು ನೀಡಿದ ಪಾತ್ರ. ಬಹುಶ: ಮಂಥರೆ ಇಲ್ಲದಿದ್ದರೆ ರಾಮಾಯಣವೇ ನಡೆಯುತ್ತಿತ್ತೋ ಇಲ್ಲವೋ ಎಂಬುದು ಸಂದೇಹ! ಏಕೆಂದರೆ ತಾನು ಹೆತ್ತ ಮಗನಿಗಿಂತ ಹೆಚ್ಚು ರಾಮನನ್ನೇ ಪ್ರೀತಿಸುವ ಕೈಕೇಯಿಯ ಚಿತ್ರವನ್ನು ಜಾಲಾಡಿದ ಜಾಣೆ ಈ ಮಂಥರೆ. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯನ್ನು ಕೈಕೇಯಿಗೆ ತಿಳಿಸುವ ಅವಳ ಕೌಶಲ್ಯ ಪಳಗಿದ ರಾಜಕಾರಣಿಯನ್ನು ಪರಿಚಯಿಸುತ್ತದೆ. ಆದರೆ ದಶರಥನ ಅರಮನೆಯಲ್ಲಿ ಪ್ರತಿಯೊಬ್ಬರೂ ಆಕೆಯನ್ನು ನಡೆಸಿಕೊಂಡ ರೀತಿ ಇಂದಿನ ಸಮಾಜಕ್ಕೆ ಒಪ್ಪಿಗೆಯಾಗುತ್ತದೆ. ಅವಳ ಸ್ಥಾನದಲ್ಲಿ ಇನ್ನಾವ ಸ್ತ್ರೀಯೇ ಆಗಿದ್ದರೆ ಒಂದು ಕ್ಷಣವೂ ಅಲ್ಲಿರುತ್ತಿರಲಿಲ್ಲ. ಆಕೆ ತನ್ನ ಇಡೀ ಬದುಕನ್ನು ಮುಡಿಪಿಟ್ಟದ್ದು ಕೈಕೇಯಿಯ ಕಂದ ಭರತನ ಶ್ರೇಯಸ್ಸಿಗಾಗಿ!

ಎಲ್ಲರಿಂದ ಮನನೊಂದು ಬೇಸತ್ತು ಖಂಡಿಸಿದ ಆ ದುಷ್ಟೆಯನ್ನು, ನೀಚಳನ್ನು, ಪಾತಕಿಯನ್ನು ದಯಾಲಕ್ಷ್ಮಿ ಪುಣ್ಯ ಲಕ್ಷ್ಮಿಯೆಂದು ಕುವೆಂಪು ಬಣ್ಣಿಸಿದ್ದಾರೆ. ಆದರೆ ಕೊನೆಗೆ ಶತೃಘ್ನನಿಂದ ಏಟನ್ನು ತಿಂದ ಈ ಮುದುಕಿ ಯಾರಿಗೂ, ತನ್ನ ಒಡತಿ ಕೈಕೇಯಿಗೂ ಹೇಳದೇ ರಾಮನ ದಾರಿಯನ್ನು ಹಿಡಿದು ತನ್ನ ದೇಹವನ್ನು ಬೆಂಕಿಗರ್ಪಿಸಿದ್ದು ಕಾವ್ಯ ಓದುಗರಲ್ಲಿ ಕನಿಕರ ತರಿಸುತ್ತದೆ.

ರಾಮಾಯಣದಲ್ಲಿ ರಾಮನ ವಿರುದ್ಧ ರಾವಣನನ್ನು ಎತ್ತಿ ಕಟ್ಟಿ ಆ ಮೂಲಕ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದ ಮತ್ತೊಂದು ಪಾತ್ರ ಶೂರ್ಪನಖಿಯದು. ಆದರೆ ಕುವೆಂಪು ಅವಳನ್ನು ಚಂದ್ರನಖಿಯೆಂದೇ ಬಣ್ಣಿಸಿದ್ದಾರೆ. ಆರಂಭದಲ್ಲಿ ಶ್ರೀರಾಮನ ಬಳಿ ಬಂದ ಶೂರ್ಪನಖಿ ತನ್ನ ಉದ್ದೇಶವನ್ನು ನೇರವಾಗಿಯೇ ತಿಳಿಸುತ್ತಾಳೆ. ಇದು ನಮ್ಮ ಮನುಷ್ಯ ಸಂಸ್ಕೃತಿಗೆ ವಿರುದ್ಧವಾಗಿರುವಂಥದ್ದು! ಆದರೆ

[illegible]

[illegible]

[illegible]

[illegible]

ಕವಿ ಅವಳ ಮಾತಿನಲ್ಲಿಯೇ ಅನಾರ್ಯರ ಸಂಸ್ಕೃತಿಯ ದರ್ಶನ ಮಾಡಿಸಿದ್ದಾರೆ. ಅವಳ ಲಜ್ಜೆಗೆಟ್ಟ ಮಾತುಗಳನ್ನು ಕೇಳಿದ ರಾಮ ತನಗೆ ಮದುವೆಯಾಗಿದ್ದನ್ನು ತಿಳಿಸಿದರೂ ಅವಳು ಲಕ್ಷ್ಮಣ ಬರುವ ವರೆಗೆ ಅಲ್ಲಿಂದ ಕದಲುವುದಿಲ್ಲ. ಇದು ಅವಳಲ್ಲಿದ್ದ ಕಾಮ ಪಿಪಾಶೆಯನ್ನು ತಿಳಿಸುತ್ತದೆ. ಲಕ್ಷ್ಮಣ ಕೋಪದಲ್ಲಿ ಅವಳ ಮೂಗನ್ನು ಕೊಯ್ಯುವಾಗ ಎಡಗೈಯಿಂದ ಹಿಡಿದ ಮೂಗನ್ನು ಇನ್ನಷ್ಟು ಸಮಯ ಹಿಡಿದಿದ್ದರೆ ಚೆನ್ನಾಗಿತ್ತು ಎಂದು ಭಾವಿಸಿದ್ದಳೆಂದು ವಿಮರ್ಶಕರು ಹೇಳುತ್ತಾರೆ. ಆದರೆ ಇದನ್ನೇ ತನ್ನಣ್ಣನ ಮುಂದೆ ತಿರುಚಿ ಹೇಳುತ್ತಾಳೆ. ವಾಲ್ಮೀಕಿ ಮಹರ್ಷಿಯ ಶೂರ್ಪನಖಿ ಪಳಗಿದ ರಾಜಕಾರಣಿ. ಆದರೆ ಕುವೆಂಪು ಅವರ ಚಂದ್ರನಖಿ ತಾನು ಮಾಡಿದ ಪಾಪವನ್ನು ಕಂಡು ಪ್ರಾಯಶ್ಚಿತ ಬಯಸುವ ಕರುಣಿ. ರಾವಣನ ಬಳಿ ಬಂದು ಸೀತೆಯನ್ನು ರಾಮನಿಗೆ ಒಪ್ಪಿಸಬೇಕೆಂದು ಹೇಳುವಾಗಿನ ಅವಳ ಮಾತಿನಲ್ಲಿ ತಾನಾಡಿದ ಮಾತಿನ ಅರಿವು ಮಾಡಿದ ಪಾಪದ ಅರಿವೂ ಗೊತ್ತಿತ್ತೆಂಬುದು ಅರಿವಾಗುತ್ತದೆ.

ರಾವಣನ ಮಡದಿ ಮಂಡೋದರಿಯ ಪಾತ್ರ ಇಡೀ ಕಾವ್ಯದಲ್ಲಿ ಸೀತೆಯಷ್ಟೇ ತೂಕಬದ್ಧವಾದುದು. ವಾಲ್ಮೀಕಿಯಲ್ಲಿ ಮಂಡೋದರಿ ತುಂಬಾ ಚೆಲುವೆಯಾಗಿದ್ದಳು ಮತ್ತು ತಾನು ಧರಿಸಿದ ಆಭರಣಗಳಿಂದ ಅಂತಃಪುರಕ್ಕೆ ಅಲಂಕಾರಪ್ರಾಯಳಾಗಿದ್ದಳು. ಸೀತಾನ್ವೇಷಣೆಗೆ ಹೋದ ಹನುಮಂತ ಇವಳನ್ನೇ ಸೀತೆಯೆಂದು ಭಾವಿಸಿದ್ದನೆಂದು ಮಹರ್ಷಿ ಹೇಳುತ್ತಾನೆ. ಆದರೆ ಆಂಜನೇಯ ಇದೂ ವರೆಗೆ ಸೀತೆಯನ್ನು ನೋಡಿರಲಿಲ್ಲವೆಂಬುದು ಸತ್ಯ ಪತಿವ್ರತೆಯ ಕಣ್ಣೀರು ಎಂದೂ ವ್ಯರ್ಥವಾಗಲಾರದು. ಆ ಕಣ್ಣೀರಿನಿಂದಲೇ ತನ್ನ ಪತಿ ಮಡಿದುದಾಗಿ ಅವನ ಹೆಣದೆದುರೇ ನುಡಿಯುತ್ತಾಳೆ.

ಕುವೆಂಪು ರಾಮಾಯಣದ ಮಂಡೋದರಿ ಸೀತೆಗಿಂತ ಸುಂದರಿ. ಸೀತೆ ಕೇವಲ ಬಣ್ಣದಗೊಂಬೆ ಆದರೆ ಮಂಡೋದರಿ ನೈಸರ್ಗಿಕ, ಸಜೀವ, ರಸಭರಿತ ಮಾಧುರ್ಯಪೂರ್ಣ, ರಾಗರುಚಿವೆತ್ತ ವಾಸ್ತವ ವ್ಯಕ್ತಿ! ಮಂಡೋದರಿಯ ಮುಂದೆ ಸೀತೆ ಏತಕ್ಕೂ ಬಾರದ ಹೆಣ್ಣೆಂದು ಹನುಮಂತನೇ ಆಡಿದ್ದನ್ನು ಕೋ ಚನ್ನಬಸಪ್ಪ ಹೇಳಿದ್ದಾರೆ.

ಮಂಡೋದರಿಯ ಮನಸ್ಸನ್ನು ಮತ್ತು ಅವಳ ಆತ್ಮ ಸೌಂದರ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಅವಳಿದ್ದ ಸನ್ನಿವೇಶವನ್ನು ಮತ್ತು ಅವಳಿಗೆ ಬಂದ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ಅನ್ಯಸ್ತ್ರೀಯರನ್ನು ಅಪಹರಣ ಮಾಡುವ ಕಾಮುಕ ಗಂಡನ ಮಡದಿ ಇವಳು. ತನ್ನೆದುರೇ ಅಪಹರಣ ಮಾಡಿದ ಹೆಣ್ಣುಗಳನ್ನು ಒಂದು ಪ್ರತ್ಯೇಕ ಉದ್ಯಾನವನದಲ್ಲಿಟ್ಟಾಗ ಅವಳ ಮನಸ್ಸಿನಲ್ಲಿ ಉಂಟಾದ ತಳಮಳವನ್ನು ಓದುಗರೇ ಅರ್ಥಮಾಡಿಕೊಳ್ಳಬೇಕು. ಬೆಳದಿಂಗಳಿರುಳಲ್ಲಿ ಏಳು ರಾತ್ರಿ ಸೀತೆಯನ್ನು ಮಾತನಾಡಿಸಲು ಬಂದು ಧೈರ್ಯ ಸಾಲದೇ ವಾಪಸ್ಸಾಗಿದ್ದಳು. ಎಂಟನೇ ದಿನ ಸೀತೆಯೇ ಆಕೆಯನ್ನು ಮಾತನಾಡಿಸಿದಾಗ ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಅಲ್ಲದೇ ಸೀತೆಯ ಬಗೆಗೆ ಅವಳಿಗಿದ್ದ ಸೋದರಿ ವಾತ್ಸಲ್ಯವನ್ನು ಮೊದಲ ಬಾರಿಯೇ ತಿಳಿಸುತ್ತದೆ. ನೀನು ಯಾರೆಂದು ಸೀತೆ ಕೇಳಿದಾಗ "ಎಷ್ಟೋ ಜನ ಸೀತೆಯರ ದುಃಖವನ್ನು ಹೊತ್ತಿಸಿದ ಆ ರಾವಣನ

ಮಡದಿಯೇ ನಾನು" ಎನ್ನುವಲ್ಲಿ ರಾವಣನೊಂದಿಗೆ ಬಾಳುವೆ ಮಾಡಲು ಆಕೆಗೂ ಸಾಕಾಗಿತ್ತೆಂಬುದು ಅವಳ ಮಾತಿನಲ್ಲಿಯೇ ವ್ಯಕ್ತವಾಗುತ್ತದೆ.

ಕುವೆಂಪು ಅವರ ಮಂಡೋದರಿ ಪಾಪಿಯನ್ನು ಉದ್ಧಾರ ಮಾಡಿ ಪುಣ್ಯಕ್ಕೆ ಒಯ್ಯುವ ಮಹಾದೇವಿ!

'ತ್ರಿಜಟೆ' ರಾಕ್ಷಸಿ ರಾವಣನಿಂದ ಸೀತೆಯ ಕಾವಲಕ್ಕೆ ನೇಮಕವಾದ ಪರಿಚಾರಕಿ. ಎ. ಎಸ್. ಕಾಳೇಗೌಡರು ರಸಋಷಿಯಲ್ಲಿ "ತ್ರಿಜಟೆ ಸೀತೆಯನ್ನು ಕಾವಲಷ್ಟೇ ಮಾಡಲಿಲ್ಲ; ಅವಳ ಸುಖ-ದುಖ ನೋವು-ನಲಿವುಗಳಲ್ಲೂ ಭಾಗಿಯಾದಳೆಂದು" ಹೇಳುತ್ತಾರೆ. ಅವಳನ್ನು ದೇವರಂತೆ ಭಾವಿಸಿ, ಮಗಳಂತೆ ಪ್ರೀತಿಯಿಂದ ಕಾಪಾಡಿದಳು. ಈ ಕಾವ್ಯದಲ್ಲಿ ಮಹಾಕವಿ ಕುವೆಂಪುರವರ ತ್ರಿಜಟೆ ಒಂದು ಪೂರಕ ಪಾತ್ರವಾಗಿದ್ದರೂ ತನ್ಮಯತೆಯಿಂದ ಭಾವ ತುಂಬಿ ಬಣ್ಣಿಸಿದ್ದಾರೆ. ಸೀತೆಯಿಂದ ಅಕ್ಕ ಮತ್ತು ತಾಯಿ ಎಂದು ಕರೆಸಿಕೊಳ್ಳುವ ಸೌಭಾಗ್ಯವನ್ನು ಈ ರಾಕ್ಷಸ ಸ್ತ್ರೀ ಪಡೆದಿದ್ದಳೆಂಬುದನ್ನು ದರ್ಶನದ ಕವಿ ಸೂಚಿಸುತ್ತಾರೆ. ರಣರಂಗದಲ್ಲಿ ರಾವಣನ ತಮ್ಮ ಕುಂಭಕರ್ಣ ಮಡಿದ ಹಾಗೂ ಇನ್ನೂ ಅಸಂಖ್ಯಾತ ರಾಕ್ಷಸರು ಮಾರಿಗೌತಣವಾಗಿದ್ದಾರೆಂದು-

"ಎನ್ ತಾಯಿ
ನಿನ್ನೊರ್ವಳಿಂದೆ ಏನೇನಪ್ಪುದಿರ್ಕುಮೋ
ಆರಾರ್ಗೆ"[೨]

ಎಂಬಂಥ ಮಾತುಗಳನ್ನಾಡಬೇಕಾದರೆ ಆ ಸಾಮೂಹಿಕ ದಹನ ಕ್ರಿಯೆಯಲ್ಲಿ ತನ್ನ ತಂದೆಯ ಶವವು ಇರಬಹುದೆಂಬುದನ್ನು ಸೀತೆಗೆ ಹೇಳುತ್ತಾಳೆ. ಇಷ್ಟು ಮಾತನಾಡಿದ ಕುವೆಂಪು ಅವರ ತ್ರಿಜಟೆ ನಿಟ್ಟುಸಿರು ಬಿಡುತ್ತಾಳೆ. ಸೀತೆಯ ಮಡಿಲಲ್ಲಿದ್ದ ಈ ರಕ್ಕಸಿಯ ಅಂತಃಕರಣ ಜಾಗೃತವಾಗಿ ತಾನು ಮೇಲಾಡಿದ ಮಾತಿಗೆ ಕ್ಷಮೆ ಯಾಚಿಸುತ್ತಾಳೆ. ಮುಂದೆ ಒಬ್ಬ ವೇದಬಾಷಿಯಂತೆ ನುಡಿದಾಗ ಸೀತೆ ಇಂಥ ಮಾತುಗಳನ್ನು ಎಲ್ಲಿ ಕಲಿತೆವ್ವ ಎಂದಾಗ 'ನೀನೆ ಗುರುವಲ್ಲವೆ? ಎಂದು ನಿನ್ನ ಸೇವೆಯನ್ನು ಮಾಡಿದ್ದು ಬರೀ ದಾಸ್ಯವಲ್ಲ ತಪಸ್ಸು ಎಂದು ನುಡಿಯುವಷ್ಟು ಪ್ರಬುದ್ಧೆಯಾಗಿದ್ದಾಳೆ 'ತ್ರಿಜಟೆ'.

ಈ ಕಾವ್ಯದಲ್ಲಿ ಬರುವ ಇನ್ನೊಂದು ಅತ್ಯಂತ ಮನಕಲಕುವ ಪಾತ್ರ ಪುಟ್ಟ ಅನಲೆಯದು ಈಕೆ 'ವಿಭೀಷಣನ ಮಗಳು ಲಂಕೆಯ ದುಃಖ-ದುಮ್ಮಾನ ಶಂಕೆ-ಕಾತರ ಕಳವಳಗಳ ಗಂಭೀರ ವಾತಾವರಣದಲ್ಲಿ ಆಸೆ, ಉಲ್ಲಾಸಗಳ ಹೊಂಗಿರಣವಾಗಿ ಸುಳಿದಾಡುತ್ತಾಳೆ; ದೈವೀ ಪ್ರಪಂಚಕ್ಕೂ ಅಸುರೀ ಜಗತ್ತಿಗೂ ನಡುವಿನ ತಾರಕ ಸೇತುವೆಯಾಗಿ ಗೋಚರಿಸುತ್ತಾಳೆ; ರಾವಣೋತ್ಥಾನದ ಕ್ರಿಯೆಯಲ್ಲಿ ಹಿರಿಯ ಪಾತ್ರವನ್ನು ನಿರ್ವಹಿಸುತ್ತಾಳೆಂದು ಡಾ ಸಿ.ಪಿ. ಕೃಷ್ಣಕುಮಾರ; ಕುವೆಂಪು ಸಾಹಿತ್ಯ ಕೆಲವು ಮುಖಗಳು ಎಂಬುದರಲ್ಲಿ ವರ್ಣಿಸಿದ್ದಾರೆ. ಇಂಥ ಚಿಕ್ಕ ವಯಸ್ಸಿನ 'ಅನಲೆ' ಇಡೀ ರಕ್ಕಸ ಕುಲದ ಆಶಾಕಿರಣವಾಗಿ ಚಿತ್ರಿತವಾಗಿದ್ದಾಳೆ. ರಾವಣನ ತಮ್ಮನ ಮಗಳಾದರೂ ಲಂಕೇಶ್ವರ ಈಕೆಯನ್ನು

ತುಂಬಾ ಹಚ್ಚಿಕೊಂಡಿದ್ದ. ಒಮ್ಮೆ ತಾನು ದು:ಖದಿಂದ ಮಲಗಿದ್ದಾಗ ಕನಸು ಕಂಡಂತಾಗಿ ಅನಲಾ ಎಂದು ಕರೆಯುತ್ತಾನೆ. ಅದಕ್ಕೆ ಆತ 'ನೀನೆನ್ನನಗಲಿದೋಲೆನಗೊಂದು ಕನಸಾದುದಕ್ಕ' ಎಂದಾಗ ಅವನಿಗೆ "ದೊಡ್ಡಯ್ಯ ನಿದ್ದೆಗೆಯ್, ನಾನೆಲ್ಲಿಗೂ ತರಳ್ದೆನಿಲ್ಲೀಯಡೆಯೆ ಇರ್ದಪೆನ್"[೩]– ಎನ್ನುವಲ್ಲಿ ಚಿಕ್ಕವರಿಗೆ ದೊಡ್ಡವರು ಹೇಳುವ ಧಾಟಿಯಿದೆ. ಆದರೆ ಇಲ್ಲಿ ಯಾರು ದೊಡ್ಡವರೆಂಬುದು ಗೊತ್ತಾಗುತ್ತದೆ.

ಕಾವ್ಯದಲ್ಲಿ ಆಕೆ ಕೊನೆಯ ಬಾರಿಗೆ ಕಾಣಿಸಿಕೊಳ್ಳುವುದು ಶ್ರೀರಾಮ ರಾವಣನನ್ನು ಸಂಹರಿಸಿ ಸೀತೆಯನ್ನು ಅಗ್ನಿಪರೀಕ್ಷೆಗೆ ಒಪ್ಪಿಸುತ್ತಾನೆ. ಅಲ್ಲಿಗೆ ಓಡಿ ಬಂದ ಈ ಹದಿನಾರರ ಬಾಲೆ ಅನಲೆ ರಾಮಪದತಲದಲ್ಲಿ ದಿಂಡುರುಳಿ ಆತ್ಮನಿವೇದನೆ ಮಾಡಿಕೊಳ್ಳುತ್ತಾಳೆ. ಸೀತೆ ಅಶೋಕವನದಲ್ಲಿರುವಷ್ಟು ದಿನ ಅವಳಿಗೆ ಯುದ್ಧದ ವಾರ್ತೆಯನ್ನು ಹೇಳುತ್ತಿರುತ್ತಾಳೆ. ತ್ರಿಜಟೆ ಮತ್ತು ಅನಲೆಯರಿಂದಾಗಿಯೇ ಸೀತೆ ಅಶೋಕ ವನದಲ್ಲಿ ನೆಮ್ಮದಿಯಾಗಿ ಬದುಕಿದ್ದಳೆಂದು ಹೇಳುತ್ತಾರೆ.

ವಯಸ್ಸಿನಲ್ಲಿ ಎಳೆಯಳಾದರೂ ಅದಕ್ಕೆ ಮೀರಿದ ಬುದ್ಧಿಮತ್ತೆಯನ್ನು ಪ್ರದರ್ಶಿಸಿ, ಎಲ್ಲರ ನಡುವೆ ಪ್ರೇಮ ಮತ್ತು ಮಂಗಳದ ಸೇತುವೆಯಾಗಿ ಸುಖ–ದುಃಖದೊಳಗಿನ ಚೈತನ್ಯದ ವಾಹಿನಿಯಾಗಿ ಗೋಚರಿಸುತ್ತಾಳೆ. ಅನಲೆ ಕನ್ನಡ ಸಾಹಿತ್ಯ ಕಂಡ ಅತ್ಯಂತ ಅಪರೂಪದ ಪಾತ್ರ!

ಕುವೆಂಪು ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ಕನ್ನಡದಲ್ಲಿ ಬಂದ ರಾಮಾಯಣಗಳಲ್ಲಿ ಅಪರೂಪದ ಕೃತಿ. ಇಲ್ಲಿ ಬಂದಿರುವ ಎಲ್ಲ ಸ್ತ್ರೀ ಪಾತ್ರಗಳೂ ಮಹಾಕವಿಯ ಕಾವ್ಯಕುಂಚದಲ್ಲಿ ಒಪ್ಪವಿಟ್ಟು ಚಿತ್ರಿಸಿದ ದಿವ್ಯ ಪಾತ್ರಗಳು. ಇಂಥ ಕವಿ ಯುಗಕ್ಕೊಬ್ಬರೇ ಸಿಗುತ್ತಾರೇನೋ? ಏನೇ ಆಗಲಿ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಮೇಲೆ ಇನ್ನೂ ವ್ಯಾಪಕವಾದ ಚರ್ಚೆ ಆಗಬೇಕಾಗಿದೆ. ಮಹಾಕವಿಯ ಮಹಾಕಲ್ಪನೆ ಮನುಜಮತಕ್ಕೆ ಸುಲಭದಲ್ಲಿ ಅರ್ಥವಾಗುವಂತಾಗಬೇಕಾದುದು ಅನಿವಾರ್ಯ ಮತ್ತು ಅಗತ್ಯ!

ಟಿಪ್ಪಣಿಗಳು

೧) **ಕುವೆಂಪು : ಶ್ರೀ ರಾ. ದ. ಪುಟ–೧೦೭**

೨) **ಕುವೆಂಪು : ಶ್ರೀ ರಾ. ದ. ಸಂಪುಟ : ಪುಟ–೭೯೦**

೩) **ಕುವೆಂಪು : ಶ್ರೀ ರಾ. ದ. ಲಂಕಾಸಂಪುಟ : ಪುಟ–೫೭೯**

ಪರಾಮರ್ಶನ ಗ್ರಂಥಗಳು

ಅ.ನಂ	ಕೃತಿ	ಕರ್ತೃ	ಪ್ರಕಟಣೆ	ಪ್ರಕಟಣಾ ವರ್ಷ
೧.	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ	ಡಾ. ಎಚ್. ಎಸ್. ಶ್ರೀಮತಿ	ಪ್ರಸಾರಾಂಗ ಕ.ವಿ.ವಿ.ಹಂಪಿ	೨೦೦೬
೨.	ಕನ್ನಡ ಸಾಹಿತ್ಯದಲ್ಲಿ ಕರ್ಣ	ಡಾ. ವ್ಹಿ. ಎಸ್. ಮಾಳಿ	ಸಿರಿಗನ್ನಡ ಪ್ರಕಾಶನ, ಹಾರೂಗೇರಿ.	೧೯೯೯
೩.	ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಟುವಟಿಕೆಗಳು.	ಡಾ. ಪ್ರೀತಿ ಶುಭಚಂದ್ರ	ಪ್ರಕಾಶಕರು, ಕ.ವಿ.ವಿ.ಹಂಪಿ	೨೦೦೨
೪.	ಸ್ತ್ರೀವಾದಿ ಪ್ರವೇಶಿಕೆ	ಡಾ. ಬಿ. ಎನ್. ಸುಮಿತ್ರಾಬಾಯಿ ಎನ್ ಗಾಯತ್ರಿ	ಕರ್ನಾಟಕ ಲೇಖಕಿಯರ ಸಂಘ, ೨೫೧. ೨ನೇ ಕ್ರಾಸ್, ೩ನೇ ಮುಖ್ಯರಸ್ತೆ, ಚಾಮರಾಜ ಪೇಟೆ, ಬೆಂಗಳೂರು	೧೯೯೫
೫.	ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ	ಕೋ. ಚನ್ನಬಸಪ್ಪ	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು	೧೯೯೯
೬.	ಶ್ರೀ ರಾಮಾಯಣ ದರ್ಶನಂ	ಕುವೆಂಪು	ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು	೧೯೭೧

ಅ.ನಂ	ಕೃತಿ	ಕರ್ತೃ	ಪ್ರಕಟಣೆ	ಪ್ರಕಟಣಾ ವರ್ಷ
೭.	ಶ್ರೀ ರಾಮಾಯಣ ದರ್ಶನಂ ಪಾತ್ರ ಲೋಕ	ಡಾ. ಎಚ್. ಜೆ. ಲಕ್ಕಪ್ಪಗೌಡ	ಪವನಜ ಪ್ರಕಾಶನ ನಂ. ೨೧೩, ೪ನೇ ಮುಖ್ಯರಸ್ತೆ, ಸದಾಶಿವ ನಗರ, ಬೆಂಗಳೂರು ೫೬೦೦೮೦	೨೦೦೬
೮.	ಶ್ರೀ ರಾಮಾಯಣ ಪಾತ್ರ ಪ್ರಪಂಚ	ಪ್ರೊ. ಕೆ. ಎಸ್. ನಾರಾಯಣಾಚಾರ್ಯ	ರಾಜಲಕ್ಷ್ಮೀ ಪ್ರಕಾಶನ, ಬಳಪೇಟೆ ಚೌಕ, ಬೆಂಗಳೂರು ೫೬೦೦೫೩	೧೯೯೯
೯.	ಶ್ರೀ ರಾಮಾಯಣದರ್ಶನಂ ವಚನ ಚಂದ್ರಿಕೆ	ದೇಜಗೌ	ಡಿ. ವಿ. ಕೆ. ಮೂರ್ತಿ ಪ್ರಕಾಶಕರು, ಮೈಸೂರು-೪.	೨೦೦೭
೧೦.	ಭಾರತೀಯ ಸಮಾಜದ ಅಧ್ಯಯನ ಸಂಪುಟ-೨	ಚ. ನ. ಶಂಕರರಾವ	ಜೈಭಾರತ್ ಪ್ರಕಾಶನ, ಮಂಗಳೂರು.	೧೯೯೬
೧೧.	ರಸಾಲ (ವಿಮರ್ಶಾ ಲೇಖನಗಳ ಸಂಗ್ರಹ)	ಡಾ. ವ್ಹಿ. ಎಸ್. ಮಾಳಿ	ಶ್ರೀ ಚನ್ನಬಸವೇಶ್ವರ ಗ್ರಂಥ ಮಾಲೆ, ಜಂಗಮ ಲಿಂಗಕ್ಷೇತ್ರ, ಶ್ರೀ ಮೋಟಗಿ ಮಠ, ಅಥಣಿ ಬೆಳಗಾವಿ ಜಿಲ್ಲೆ	೨೦೦೫